ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 1 ಸಂಚಿಕೆ 10

ಆಗಸ್ಟ್ 05, 2007

ಕನ್ನಡ ವಾರಪತ್ರಿಕೆ

ರೂ. 5/-



ಮುಸ್ಲಿಮರು ತಾರತಮ್ಯದ ಸುಳಿಯಲ್ಲಿ....



ಪ್ರಥಮ ಮಹಿಳಾ ರಾಷ್ಟ್ರಾಧ್ಯಕ್ಷೆ

ಕೋಮುವಾದಿ ಕೂಟಕ್ಕೆ ಗುದ್ದು

ಪೇಜ್ ೮

ಮಂಗಳೂರು-ಬೆಂಗಳೂರು ಹಳಿಗಿಳಿಯದ ರೈಲು



ಆಂಧ್ರ : ಸೂರಿಗಾಗಿ ಸಂಘರ್ಷ ರಕ್ತಹರಿಸಿದ ರೆಡ್ಡಿ ಸರ್ಕಾರ

ಮಹಾಮೋಸದ ವಿರುದ್ಧ ಬೀಡಿ ಕಾರ್ಮಿಕರು



ಮೀರಾ ಮಾಧವ ರಾಘವ

ಸೀತಾರಾಂ ಜಾದೂ ಇಲ್ಲದ

ಮುಟ್ಟುಗೋಲು ಕ್ರಮಕ್ಕೆ ತೀವ್ರ ಪ್ರತಿಭಟನೆ

ಪ್ರತಿಯೊಬ್ಬ ವ್ಯಕ್ತಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ. ಅದನ್ನು ಆಳುವ ಸರ್ಕಾರ ಗೌರವಿಸಬೇಕು. ಆಳುವ ಸರ್ಕಾರಗಳು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸದೇ ಕಡೆಗಣಿಸಿದಾಗ, ಪ್ರಗತಿಪರರಿಂದ ತೀವ್ರ ವಿರೋಧ ಎದುರಿಸಿದ ಉದಾಹರಣೆಗಳು ನಮ್ಮ ನಡುವೆ ಅನೇಕ ಇವೆ. ನಗರದ ಗಾಂಧಿ ಪ್ರತಿಮೆಯ ಬಳಿ ಅನುದೇವಾ ಹೊರಣವನು ಕೃತಿಯ ಮುಟ್ಟುಗೋಲಿಗೆ ಯತ್ನಿಸುತ್ತಿರುವಾಗ ಮತ್ತು ಮುಟ್ಟುಗೋಲು ಹಾಕಿದ ಬಳಿಕ 27 ರಂದು ಬೆಂಗಳೂರಿನಲ್ಲಿ ಪ್ರತಿಭಟನೆಗಳು ನಡೆದವು. ಕೋ-ಜಾ ಸರ್ಕಾರದ ಕ್ರಮವನ್ನು ಖಂಡಿಸಿ ಬೃಹತ್ ಪ್ರತಿಭಟನೆ ಸಭೆ ನಡೆಸಿ ನೆರೆದಿದ್ದ ನೂರಾರು ಜನರು ಸರ್ಕಾರದ ಧೋರಣೆಯ ಕುರಿತು ಪ್ರತಿಭಟಿಸಿದರು.

27 ರಂದು ಬೆಂಗಳೂರಿನ ಪುರಭವನದ ಮುಂದೆ ನಡೆದ ಪ್ರತಿಭಟನೆಯಲ್ಲಿ ಹಿರಿಯ ಸಾಹಿತಿಗಳಾದ ಬರಗೂರು ರಾಮಚಂದ್ರಪ್ಪ, ಡಾ. ಕೆ.ಮರುಳಸಿದ್ದಪ್ಪ, ಪ್ರೊ.ಜಿ.ಕೆ.ಗೋವಿಂದರಾವ್, ಎಲ್.ಹನುಮಂತಯ್ಯ, ಪ್ರೊ. ಚಂಪಾ, ರಂಗಾರೆಡ್ಡಿ ಕೋಡಿರಾಂಪುರ, ಶಾಸಕ ಜಿ.ವಿ.ಶ್ರೀರಾಮರೆಡ್ಡಿ, ಇಂದೂಧರ ಹೊನ್ನಾಪುರ, ವೆಂಕಟಸ್ವಾಮಿ, ರಾಜಪ್ಪ ದಳವಾಯಿ, ಎಸ್.ವೈ.ಗುರುಶಾಂತ್ ಮುಂತಾದವರು ಭಾಗವಹಿಸಿದ್ದರು. ಮುಟ್ಟುಗೋಲು ಹಿಂತೆಗೆಯಲು ಆಗ್ರಹಿಸಲಾಯಿತು.



★★★

'ಅಧಿಕಾರಕ್ಕೆ ಬರುವ ಮುಂಚಿನ ಟ್ರೈಲರ್'

ಸಿಡಿದ ಕಿಡಿಗಳು

ಬಸವಣ್ಣನಿಗೆ ಯಾಕಿಷ್ಟು ಅವಮಾನ ಮಾಡುವ ತುರ್ತು ಮುಟ್ಟುಗೋಲು ಖಂಡನೀಯ

- ಡಾ. ಜಿ.ರಾಮಕೃಷ್ಣ

★

ನಾನು ಹಿಂಸಾವಾದದ ವಿರೋಧಿ, ಹಿಂಸೆ ಮಾಡುವವರ ಮೇಲೆ ಕ್ರಮ ಕೈಗೊಳ್ಳುತ್ತೇವೆನ್ನುವ ಸರ್ಕಾರ ಬೀದಿಯಲ್ಲಿ ನಿಂತು ರಕ್ತ ಹರಿಸುತ್ತೇವೆ ಎಂದವರ ಮೇಲೆ ಯಾಕೆ ಕ್ರಮ ಜರುಗಿಸಲಿಲ್ಲ.

- ಬರಗೂರು ರಾಮಚಂದ್ರಪ್ಪ

★

ಸಹನೆ, ಸಾಮರಸ್ಯ, ಸಂವಾದದಿಂದಲೇ ದಲಿತರು, ತಳಮಟ್ಟದ ಸಮುದಾಯಗಳು, ಪ್ರಗತಿಪರರನ್ನು ಪ್ರತಿಕ್ರಿಯಿಸುತ್ತಿದ್ದಾರೆ. ಆದರೆ ಹೀನಾಯ ಭಾಷೆ ಬಳಸಿ, ಹಿಂಸೆಯ ಮಾತನಾಡುವರದ್ದು ಯಾವ ಪರಿಸ್ಥಿತಿ ಶರಣ ಪರಂಪರೆಯನ್ನು ಪಾಲಿಸುತ್ತಿರುವುದು ಯಾರು?

ಇಂದೂದರ ಹೊನ್ನಾಪುರ

★

ಕೋಮುವಾದಿಗಳ ಒತ್ತಡಗಳಿಗೆ ಕುಮಾರಸ್ವಾಮಿ ಸರ್ಕಾರ ಮಣಿದಿದೆ. ಮುಟ್ಟುಗೋಲು ಹಾಕಿದ ಕ್ರಮ ಮುಂಬರುವ ಕರಾಳದಿನಗಳ ಸೂಚಕ. ಎಲ್ಲಾ ಪ್ರಗತಿಪರರು ಇದನ್ನು ಎದುರಿಸಿ, ಹೊಸ ಹೋರಾಟ ನಡೆಸಬೇಕು.

ಚಂಪಾ(ಚಂದ್ರಶೇಖರ ಪಾಟೀಲ)

★

ಕೆಲವರ ಒತ್ತಡಕ್ಕೆ ಮಣಿದು ಸರ್ಕಾರ ಮುಟ್ಟುಗೋಲಿನಂತಹ ಪ್ರಜಾತಾಂತ್ರಿಕ ವಿರೋಧಿ ಕ್ರಮಕ್ಕೆ ಕೈ ಹಾಕಿದ್ದು ದುರದೃಷ್ಟಕರ. 'ಅನುದೇವಾ'ದ ಬಗ್ಗೆ ನಮಗೆ ಭಿನ್ನಾಭಿಪ್ರಾಯವಿರಬಹುದು. ಅದಕ್ಕೆ ಮುಟ್ಟುಗೋಲು ಪರಿಹಾರವಲ್ಲ.

- ಯು.ಆರ್.ಅನಂತಮೂರ್ತಿ

★

ಮುಟ್ಟುಗೋಲು ಹಾಕುವ ಮೂಲಕ ಸರ್ಕಾರ ದಮನಕಾರಿ ಪ್ರವೃತ್ತಿ ತೋರಿಸ್ತಾ ಇದೆ. ಇವತ್ತು ಬಸವಣ್ಣನನ್ನು 'ಒಪ್ಪಿಕೊಂಡಿರುವ' ಲಿಂಗಾಯತ ಸಮುದಾಯವೇ 800 ವರ್ಷಗಳ ಹಿಂದೆ ಆತನನ್ನು ಒಪ್ಪಿಕೊಂಡಿರಲಿಲ್ಲ.

- ದೇವನೂರು ಮಹಾದೇವ

★

ಈಗ ಏಕಾಏಕಿ ಮುಟ್ಟುಗೋಲು ಹಾಕಿದ್ದು ನೋಡಿದರೆ ಈ ಕೃತಿಯಲ್ಲಿನ ಅಂಶಗಳು ನಿಜವಾಗಿರಬೇಕು. ಈ ಸರ್ಕಾರ ಓಟ್ ಬ್ಯಾಂಕ್ ಮೇಲೆ ನಿಂತಿದೆ. 'ಆವರಣ' ವನ್ನು ಎಷ್ಟು ಕೆಟ್ಟದಾಗಿ ಬರೆದಿದ್ದಾರೆ. ಮುಸ್ಲಿಮರು ಅದನ್ನು ಮುಟ್ಟುಗೋಲು ಹಾಕಿ ಎಂದು ಗಲಾಟೆ ಮಾಡುತ್ತಾ ಹೋದರೆ....ಇಂಥದೇ ಚಾಲೂ ಆಗಿ ಬಿಡುತ್ತದೆ. ಇದಕ್ಕೆ ಕೊನೆ ಎಲ್ಲಿ?

- ಸಾರಾ ಅಬೂಬಕರ್
ಮಂಗಳೂರು

★

ಮುಟ್ಟುಗೋಲು ಹಾಕಿ ಸರ್ಕಾರ ತಪ್ಪು ಕೆಲಸ ಮಾಡಿದೆ. ಸಮುದಾಯವನ್ನು ಉದ್ದೇಶಪೂರ್ವಕವಾಗಿ ಘಾಸಿಗೊಳಿಸು ವಂತಹ ಕೆಲಸ ಮಾಡಿದರೆ ಮಾತ್ರ ಕಾನೂನು ಸುವ್ಯವಸ್ಥೆ ಹದಗೆಡುತ್ತದೆ. ಮುಟ್ಟುಗೋಲು ಹಾಕುವುದು ಫ್ಯಾಸಿಸ್ಟ್ ಕ್ರಮ. ಇವೆಲ್ಲಾ ಬಿಜೆಪಿ ಅಧಿಕಾರಕ್ಕೆ ಬರುವ ಮುಂಚಿನ ಟ್ರೈಲರ್ ಗಳಂತಿವೆ. ಮೌನವಾಗಿರುವ ಪ್ರಜ್ಞಾವಂತರೆಲ್ಲಾ ಸ್ವವಿಮರ್ಶೆ ಮಾಡಿಕೊಳ್ಳುವ ಕಾಲವಿದು.

- ಡಾ: ಕೆ.ಮರುಳಸಿದ್ದಪ್ಪ

★

ನಾನೇ ಕೃತಿಯನ್ನು ವಾಪಸು ತೆಗೆದುಕೊಂಡ ಮೇಲೆ ಇವರೇನು ಮುಟ್ಟುಗೋಲು ಹಾಕುವುದು?

ಬಂಜಗೆರೆ ಜಯಪ್ರಕಾಶ

★

ಅಪರೂಪದ ಜೋಡಿಗಳು!

'ತಾತ್ವಿಕವಾಗಿ, ನೈತಿಕವಾಗಿ ಮುಟ್ಟುಗೋಲು ತಪ್ಪು. ರಾಜಕೀಯ ತಂತ್ರವಾಗಿ ಬೇಕಾದರೆ ಮುಟ್ಟುಗೋಲು ಹಾಕಬಹುದು

- ಎಂ.ಪಿ. ಪ್ರಕಾಶ್, ಗೃಹ ಸಚಿವ

ಮುಟ್ಟುಗೋಲು ಹಾಕಿದ್ದು ತಡವಾಯಿತು. ಎಂದೋ ಮಾಡಬೇಕಿತ್ತು.

- ಧರಂ ಸಿಂಗ್, ವಿರೋಧ ಪಕ್ಷದ ನಾಯಕ

ವಿಷಾದ

ಜನಶಕ್ತಿ ಜುಲೈ 8, 2007ರ ಸಂಚಿಕೆಯಲ್ಲಿ 'ನವಕರ್ನಾಟಕ ಪ್ರಕಾಶನ ಪ್ರೈ.ಲಿ' ಈ ಸಂಸ್ಥೆಯು ಹೊರತಂದಿರುವ 'ಜಗತ್ತನ್ನು ತಲ್ಲಣಗೊಳಿಸಿದ ಹತ್ತು ದಿನಗಳು' ಪುಸ್ತಕವನ್ನು 'ಹಳೆ ಓದು ಹೊಸ ಓದು' ಅಂಕಣದಲ್ಲಿ ಹಿರಿಯ ಬಂಡಾಯ ಸಾಹಿತಿ ಡಾ: ಆರ್.ವಿ. ಭಂಡಾರಿಯವರು ಪರಿಚಯಿಸಿ ಕೊಟ್ಟಿದ್ದಾರೆ, ಮುದ್ರಣದ ಹಂತದಲ್ಲಿ ಆಗಿರುವ ಕಣ್ತಪ್ಪಿನಿಂದಾಗಿ ಪ್ರಕಾಶಕರ ಹೆಸರು, ವಿವರಗಳು ಪ್ರಕಟವಾಗದೆ ಹೋಗಿದೆ. ಇದಕ್ಕಾಗಿ ವಿಷಾದಿಸುತ್ತೇವೆ.

- ಸಂ.

ವಗ್ಯೆರೆಗಳು....

ನಡುನೀರಿನಲ್ಲಿ ಕೈ ಬಿಡಲಿರುವ ಸರ್ಕಾರ

ಬೆಂಗಳೂರಿನ ಮೇಲೆ ಕರಿಮೋಡಗಳು ಮುಸುಕಿವೆ ಎಂದರೆ ಮಳೆ ಬರಲೇ ಬೇಕೆಂದೇನೂ ಇಲ್ಲ. ಹಾಗೆ ಹಾರಿ ಮುಂದೆ ಊರಿಗೆ ಸಾಗಿಬಿಡಬಹುದು.

ರಾಜ್ಯದ ಎಲ್ಲೆಡೆ ಭರ್ಜರಿ ಮಳೆ ಹೊಡೆದು ನದಿಗಳು ತುಂಬಿದ್ದರೂ ಬೆಂಗಳೂರಿಗೆ ಆ ಮಳೆಯ ಕಾವು ಇನ್ನೂ ಬಂದಿಲ್ಲ. ಅಂತಹದ್ದೊಂದು ಮಳೆ ಇಲ್ಲಿಗೆ ಬಂದು ಬಿಟ್ಟರೆ?

ಅಂದರೆ ಕಳೆದ ತಿಂಗಳು ಸುರಿದ ಮಳೆಗೆ ಬೆಂಗಳೂರಿನ ರಸ್ತೆಗಳು ನೀರಿನಿಂದ ಭರ್ತಿಯಾದವು, ಕೆಲವು ಪ್ರದೇಶಗಳಲ್ಲಿ ನೀರು ಹೇಳದೇ ಕೇಳದೇ ಮನೆಗಳಿಗೂ ನುಗ್ಗಿ ಕರೆಯದೆ ಬಂದ ಬೇಡವಾದ ಅತಿಥಿಯಾಗಿಬೇಕು. ಇಷ್ಟಕ್ಕೆ ಹೀಗಾದರೆ ತುಂಬು ಮಳೆಗೆ ಹೇಗೆ?

ಕಳೆದ ವರ್ಷದಲ್ಲಿ ಸುರಿದ ಮಳೆಯು ಲಕ್ಷಾಂತರ ಜನರನ್ನು ಅನಾಹುತಕ್ಕೆ ಅಪಾರ ಆಸ್ತಿ ಹಾನಿಯು ಸಂಭವಿಸಿತು. ಆಗ ದಡಬಡಾಯಿಸಿ, ಏನೋ ಮಾಡಿ ಬಿಡುವವೆಂದು ಮಹಾನಗರ ಪಾಲಿಕೆ, ಈಗ ನಗರ ಪಾಲಿಕೆಯಾದರೂ ಅಗತ್ಯ ತಯಾರಿ ಮಾಡಿಕೊಂಡಿಲ್ಲ. ಚರಂಡಿ ಹೂಳೆತ್ತಿಲ್ಲ, ಹರಿವ ನೀರು ಎಲ್ಲಿ ಸೇರಬೇಕು ಅಲ್ಲಿಗೆ ದಾಟಿಸುವ ವ್ಯವಸ್ಥೆ ಇಲ್ಲ, ಕಟ್ಟಡಗಳು ಗಗನ ಚುಂಬಿಸುತ್ತಿವೆ, ಗಟಾರ ಇರಬೇಕಾದಲ್ಲಿ ಅತಿಕ್ರಮಣವಾಗಿದೆ. ಅದರ ತೆರವಿಲ್ಲ. ಕ್ಷಿಪ್ರ ಕಾರ್ಯಕರ್ತರುಗಳೂ ಸಿದ್ದವಿಲ್ಲ. ಇದು ಹಲವಾರು ಜಿಲ್ಲೆಗಳ ಪರಿಸ್ಥಿತಿಯೂ ಕೂಡ.

ಅಂದರೆ ಬೃಹತ್ ಮಹಾನಗರ ಪಾಲಿಕೆ ಹಾಗೂ ಕರ್ನಾಟಕ ಸರ್ಕಾರ ಜನರನ್ನು ನಡು ನೀರಿನಲ್ಲಿ ಕೈ ಬಿಡಲು ಸನ್ನದ್ದಿವಾಗಿದೆ. ಎಂದರ್ಥವೇ?

ಗೋವಾ : ಶಾಸಕರ ಆಯರಾಂ ಗಯಾರಾಂ

ಹೊಸ ಸರ್ಕಾರ ರಚನೆಯಾಗಿ 49 ದಿನ ಕಳೆಯುವುದರೊಳಗಾಗಿ ಗೋವಾದಲ್ಲಿ ಆಯಾರಾಂ-ಗಯಾರಾಂ ಆರಂಭವಾಗಿ ಬಿಟ್ಟಿದೆ! ಆಡಳಿತರೂಢ ಕಾಂಗ್ರೆಸ್‌ನ ಒಬ್ಬ ಶಾಸಕ ಮಂತ್ರಿಯನ್ನಾಗಿಸಲಿಲ್ಲ ಎಂದು ರಾಜೀನಾಮೆ ನೀಡಿದ್ದರೆ, ಸರ್ಕಾರಕ್ಕೆ ಬೆಂಬಲಿಸಿದ ಮೂವರು ಶಾಸಕರೂ ಬೆಂಬಲ ಹಿಂತೆಗೆದುಕೊಂಡಿದ್ದಾರೆ. ಇದರ ಹಿಂದೆ ಕೈಯಾಡಿಸಿದ ಬಿಜೆಪಿಯೇ ಸರ್ಕಾರ ರಚಿಸಲು ಮುಂದಾಗಿದೆ!

'ಕಾಂಚಾಣಂ ಸರ್ವ ಮಯಂ' ಎನ್ನುವ ಅನೀತಿಯೇ ನೀತಿಯೆಂದಾಗಿರುವ ಬಂಡವಾಳಶಾಹಿ ಮಂತ್ರದಡಿಯಲ್ಲಿ ಶಾಸಕರೂ ಮಾರುಕಟ್ಟೆಯಲ್ಲಿ ಬಿಕರಿಯಾಗುವ ಸರಕಾಗಿ ಪರಿವರ್ತನೆಯಾಗಿರುವಾಗ ಜನಾದೇಶಕ್ಕೆ ಗೌರವಿಸುವುದಕ್ಕೆ ಜಾಗವೆಲ್ಲಿ?

ಇದೇ ಶಾಸಕರು ವಿಧಾನಸಭೆಯಲ್ಲಿ ರಿಲೆಯನ್ಸ್‌ನಂತಹ ಕಂಪನಿಗಳು ಮಾರುಕಟ್ಟೆ ಪ್ರವೇಶಿಸಲು ಅವಕಾಶ ನೀಡಬೇಕೆಂಬ ಪ್ರಸ್ತಾವ ಬಂದಾಗ ಗಟ್ಟಿಯಾಗಿ ಸಮರ್ಥಿಸಿದರು. ಇಲ್ಲಿ ಹೀಗೆ ಯಡಿಯೂರಪ್ಪನವರ ಅಲ್ಲೇಕೆ ಹಾಗೆ ಎಂದು ಅಲ್ಲಿನ ಜನ ಪ್ರಶ್ನಿಸುವ ಮೊದಲೇ ಆಸಾಮಿಗಳು ಅಲ್ಲಿಂದ ನಾಪತ್ತೆ! ಇದು ಕಂಪನಿಗಳ ಕರಾಮತ್ತೆ?

ಯಾರ ಕಲಾಮತ್ತು

ಮೊನ್ನೆ ಬೆಂಗಳೂರಿನ ಮಲ್ಲೇಶ್ವರದ ತರಕಾರಿ, ಹಣ್ಣು ಹೂ, ಮಾರಾಟಗಾರರುತಮ್ಮ ಕಸುಬನ್ನೇ ನುಂಗುತ್ತಿರುವ 'ರಿಲೆಯನ್ಸ್ ಫ್ರೆಶ್' ವಿರುದ್ಧ ಮಾರುಕಟ್ಟೆ ಬಂದ್ ಮಾಡಿ ಪ್ರತಿಭಟಿಸಿದರು. ಇದರಲ್ಲಿ ಆ ಭಾಗದ ಶಾಸಕರುಗಳಾದ ದಿನೇಶ್ ಗುಂಡೂರಾವ್, ನೆ.ಲ. ನರೇಂದ್ರಬಾಬುಗಳೂ (ಇಬ್ಬರೂ ಕಾಂಗ್ರೆಸ್) ಪ್ರತ್ಯಕ್ಷರಾಗಿದ್ದರು. ಧಿಕ್ಕಾರದ ಧ್ವನಿಯೊಂದನ್ನು ಮೊಳಗಿಸಿದರು. ತಮಾಷೆಯೆಂದರೆ

ವಿರೋಧಪಕ್ಷದಲ್ಲಿ ಅಂಟು ಜಾಡ್ಯ

ಬಿಜೆಪಿಯ ಶಾಸಕಾಂಗ ಸಭೆ, ಅಧಿಕಾರ ಹಸ್ತಾಂತರ ಖಚಿತ ಎಂದು ರಾಜ್ಯ ನಾಯಕರ ಪುನರುಚ್ಚಾರಗಳಿಗೆ ದೇವೇಗೌಡರ 'ಗಿಳಿ ಶಾಸ್ತ್ರ' ನಡುಕು ಹುಟ್ಟಿಸಿದರೆ, ಇತ್ತ ಕಾಂಗ್ರೆಸ್‌ನಲ್ಲಿ ಕೆಲವರಿಗೆ ಹೈ ಕಮಾಂಡ್‌ನ ಕೃಪಾಕಟಾಕ್ಷ ಒದಗಿದ ಬಗ್ಗೆಯೇ ಸುದ್ದಿ!

ಕಳೆದ ತಿಂಗಳು ಸಿದ್ದು, ಧರಂ, ಖರ್ಗೆಯವರಿಗೆ ಒಂದೊಂದು ಹೊಸ ಜಾಗವನ್ನು ಮಾಧ್ಯಮಗಳಲ್ಲಿ ತೋರಿಸಲಾಗಿತ್ತು. ಈಗ ಹೈಕಮಾಂಡ್ ಕೃಪೆ ರಾಜಶೇಖರನ್, ಸೋಮಣ್ಣನವರ ಮೇಲೆ ಎಂದು ಗಾಸಿಪ್ ತೇಲಿ ಬಿಡಲಾಗಿದೆ. ಅಂದರೆ ಮುಖ್ಯಮಂತ್ರಿ ಗಾಧಿಯತ್ತಲೇ ಎಲ್ಲರ ಕಣ್ಣು-ಮನಸ್ಸು ಎಂದಾಯ್ತು.

'ಕಷ್ಟಕ್ಕೆ ಕರೆಯಬೇಡಿ ಊಟಕ್ಕೆ ಮರೆಯಬೇಡಿ' ಎಂದೇ ಜನೋಪದೇಶ ಮಾಡುವ ಅಧಿಕೃತ ವಿರೋಧ ಪಕ್ಷದಿಂದ ಇಂತಹ ಲೆಕ್ಕಾಚಾರ ಬಿಟ್ಟರೆ ಬೇರೇನು ನಿರೀಕ್ಷಿಸಲಾದೀತು?

ಜಿ.

ಜನದನಿ

ಸಚಿವನೇ ದಲಿತರ ಕೊಲೆಗಾರರಿಗೆ ರಕ್ಷಿಸುತ್ತಿರುವಾಗ ಶಿಕ್ಷೆ ಏನು ?

- ಅಂಬರೀಶ್ ಸುರಪುರ

ಜನಶಕ್ತಿ ಅತ್ಯಂತ ವಾಸ್ತವಿಕ ಪ್ರಶ್ನೆಗಳನ್ನು ಹೊತ್ತು ಬರುತ್ತಿದೆ '........ಬೆನ್ನಿಗೆ ಚೂರಿ' ಲೇಖನ ಸರ್ಕಾರದ ಜನದ್ರೋಹಿ ನೀತಿಯನ್ನು ಬಯಲುಗೊಳಿಸಿದೆ.

ನಟರಾಜ, ಕೋಲಾರ

ಗಣಿಯ ಅಕ್ರಮ ಹಣ ಅಹಂಕಾರದಿಂದ ಮೆರೆಯುತ್ತಿದೆ. ರಾಜ್ಯದ ರಾಜಕಾರಣವನ್ನು ನಿಯಂತ್ರಿಸಲು ಯತ್ನಿಸುತ್ತಿದೆ. ದೇಶದ ಸ್ವತ್ತು ಕೆಲವೇ ಕೆಲವರ ಪಾಲಾದಾಗ ಇಂತಹ ಸ್ಥಿತಿ. ಗಣಿಗಾರಿಕೆಯನ್ನು ಸಾರ್ವಜನಿಕ ಸಂಸ್ಥೆಗಳೇ ಮಾಡಬೇಕು. ವಿದೇಶಕ್ಕೆ ಎಗ್ಗಿಲ್ಲದೇ ಕಳಿಸಬಾರದು.

ಮಹ್ಮದ್ ಹುಸೇನ್, ಬಳ್ಳಾರಿ

ನ್ಯಾಯ ನೀತಿ, ಪ್ರಾಮಾಣಿಕರು ಎಂಬೆಲ್ಲಾ ಮಾತುಗಳು ಬಿಜೆಪಿ ನಾಯಕರ ಸೋಗು ಎಂಬುದು ಬಯಲಾಗಿದೆ. ಹುಡ್ಕೋ ಅನಂತಕುಮಾರ್ ಇವರಿಗಿಂತ ಭಿನ್ನ ಹೇಗೆ? ನಾಯಕರಲ್ಲವೇ?

ಸತೀಶ್‌ಕುಮಾರ್.ಆರ್,
ಮಂಗಳೂರು

ಜುಲೈ 30 ರಂದು ಮಂಗಳೂರಿನಲ್ಲಿ ಈ ವಾರದ ಸಂಚಿಕೆ ಬಿಡುಗಡೆ

ಈ ವಾರದ ಸಂಚಿಕೆ ಜುಲೈ 30 ರಂದು ಮಂಗಳೂರಿನಲ್ಲಿ ಬಿಡುಗಡೆಯಾಗುತ್ತಿದೆ. ಖ್ಯಾತ ಸಾಹಿತಿ-ವಿದ್ವಾಂಸ ಅಮೃತ ಸೋಮೇಶ್ವರವರು ಪತ್ರಿಕೆಯನ್ನು ಬಿಡುಗಡೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಚಿದಂಬರ ಬೈಕಂಪಾಡಿ ಆಗಮಿಸಲಿದ್ದಾರೆ. ಕಾರ್ಯಕ್ರಮ ಸಂಜೆ 5 ಕ್ಕೆ ಕಂದಾಯ ಭವನದಲ್ಲಿ.

ಹಾಗೆಯೇ ಆಗಸ್ಟ್ 6 ರಂದು ಮಧ್ಯಾಹ್ನ 2-30 ಕ್ಕೆ ಉಡುಪಿಯಲ್ಲಿ. ತಪ್ಪದೇ ಅಲ್ಲಿ ನೀವಿರಬೇಕು.

ಸಂಪಾದಕೀಯ

ಕೃತಿ ಮುಟ್ಟುಗೋಲು - ಸವಾಲಿನ ಪ್ರಶ್ನೆ

ಆನುದೇವ ಹೊರಗಣವನು ಕೃತಿಯನ್ನು ಮುಟ್ಟುಗೋಲು ಹಾಕುವ ಮೂಲಕ ಸಂದರ್ಭಸಾಧಕ 'ಜಾ-ಕೋ' ಸರ್ಕಾರ ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳ ಕತ್ತು ಹಿಸುಕಿದ್ದು ಉಗ್ರ ಖಂಡನೀಯ. ಈ ಮೂಲಕ ಅದು ಜಾತೀವಾದಿಗಳ, ಕೋಮುವಾದಿಗಳ ಒತ್ತಡಕ್ಕೆ ಮಣಿದು ಘೋರ ಪ್ರಮಾದವನ್ನು ಎಸಗಿದೆ. ಅಂದು ಬಸವಣ್ಣ ಮತ್ತು ಶರಣರ ಸಮಾನತೆಯ ಆಶಯಗಳ ಮೇಲೆ ಕ್ರಾಂತಿಕಾರಿ ಚಳುವಳಿಯ ಮೇಲೆ ವೈಚಾರಿಕವಾಗಿ ಹಾಗೂ ದೈಹಿಕವಾಗಿ ಧಾಳಿ ನಡೆಸಿ ಹತ್ಯೆಗೈಯಲು ಮುಂದಾದ ಪಾಳೇಗಾರಿ ಜಾತಿವಾದಿ ಶಕ್ತಿಗಳೇ ಇಂದು ಅಂತಹುದೇ ಹೀನಕೃತ್ಯಕ್ಕೆ ಮುಂದಾಗಿವೆ. ಹೊಸತನ್ನು ವಿರೋಧಿಸುವ, ಯಥಾಸ್ಥಿತಿಯನ್ನೇ ಸಮರ್ಥಿಸುವ ಪ್ರತಿಗಾಮಿಗಳಿಗೆ ಸರ್ಕಾರದ ನಿರ್ಧಾರ ಮತ್ತಷ್ಟು ಕುಮ್ಮಕ್ಕು ನೀಡಿದಂತಾಗಿದೆ.

'ಆನುದೇವ..' ಕೃತಿಯು ಸಾಮಾಜಿಕ ಸಾಮರಸ್ಯವನ್ನು ಕದಡುತ್ತದೆ, ಬಸವಣ್ಣ ಮುಂತಾದವರಿಗೆ ಅಪಚಾರ, ಅವಹೇಳನ ಮಾಡುತ್ತದೆ ಎಂಬ ಅರಚಾಟವೇ ಅರ್ಥಹೀನವಾಗಿದೆ. ಕೃತಿಗಾರನಾಗಲಿ, ಅಭಿವ್ಯಕ್ತಿ ಸ್ವಾತಂತ್ರ್ಯ ರಕ್ಷಿಸಬೇಕೆಂಬ ಪ್ರಗತಿಪರರಾಗಲೀ ಸಾಮರಸ್ಯ ಕದಡುವ ಯಾವುದೇ ಪ್ರಯತ್ನಕ್ಕೆ ಇಳಿಯಲಿಲ್ಲ. ಹೋಗಲಿ ಅಂತಹ ಮಾತನ್ನೂ ಆಡದೇ ಸೌಜನ್ಯದಿಂದಲೇ ನಡೆದುಕೊಂಡರು. ಆದರೆ ಕೃತಿಯನ್ನು ವಿರೋಧಿಸುವವರು ಅತ್ಯಂತ ಅಸಹನೆಯ, ಕ್ರೋಧ, ದ್ವೇಷದ ಕೀಳು ಭಾಷೆಯ ಕುಸಂಸ್ಕೃತಿಯನ್ನೇ ಹರಿಸಿದರು. ಒಂದೊಮ್ಮೆ ಸಾಮರಸ್ಯ ಕದಡಿದವರ ಮೇಲೆ ಕ್ರಮ ವಹಿಸುವ ಇಚ್ಛೆ ಸರ್ಕಾರಕ್ಕೆ ಇದ್ದರೆ 'ರಕ್ತಹರಿಸುವ' ಈ ಪ್ರತಿಗಾಮಿಗಳ ಮೇಲೆ ಕ್ರಮ ಜರುಗಿಸಬೇಕಿತ್ತು. ಆದರೆ ಅದು ತದ್ವಿರುದ್ಧವಾಗಿದೆ. ಯಾಕೆ? ಕೃತಿಯನ್ನು ವೈಚಾರಿಕವಾಗಿಯೇ ಎದುರಿಸದೇ ಜಾತಿ ಓಟಿನ 'ಬಲದ' ಆಮಿಷಗಳಿಂದ ಮಾತೆ ಮಹಾದೇವಿ, ವೀರಶೈವ ಮಹಾ ಸಭಾದ ಭೀಮಣ್ಣ ಖಂಡ್ರೆಯಂತಹ ಕೆಲವೇ ಕೆಲವರ ಕೂಗಾಟಗಳ ಬ್ಲಾಕ್‌ಮೇಲ್ ರಾಜಕಾರಣಕ್ಕೆ ಸರ್ಕಾರ ಸೊಪ್ಪು ಹಾಕಿದ್ದು ಆಳುವ ಪಕ್ಷಗಳಲ್ಲಿ ತಾತ್ವಿಕತೆ ಮತ್ತು ವಿವೇಚನೆಯ ದಿವಾಳಿಯನ್ನು ತೋರಿಸುವುದು. ರಾಜ್ಯದಲ್ಲಿ ಪ್ರಬಲ ಜಾತಿಗಳಾದ ವೀರಶೈವ ಲಿಂಗಾಯತ-ಹಾಗೂ ಒಕ್ಕಲಿಗ ಜಾತಿಗಳ ಸಂಯೋಜನೆಯ ಮೇಲ್ಜಾತಿ ಧ್ರುವೀಕರಣದ ಓಟ್‌ಬ್ಯಾಂಕ್ ರಾಜಕಾರಣ ಒಂದು ಅಪಾಯದ ಸನ್ನಿವೇಶವನ್ನು ತೆರೆದಿಟ್ಟಿದೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ನಿರ್ಧಾರ ಅಸಮರ್ಥನೀಯವಾಗಿದೆ. 25ರಂದು ಸಚಿವ ಸಂಪುಟವು ಕೃತಿಯನ್ನು ಮುಟ್ಟುಗೋಲು ಹಾಕುವ ಮೊದಲೇ, 'ಬಸವಣ್ಣನ ಬಗ್ಗೆ ಅಪಾರ ಗೌರವವಿಟ್ಟುಕೊಂಡು ಸಾಮಾಜಿಕ ಬದ್ಧತೆ ಇರುವ ನಾನು ಸಾಮರಸ್ಯ ಕಾಯಲು ಕೃತಿಯನ್ನು ಹಿಂದೆ ಪಡೆಯುವುದಾಗಿ' ಲೇಖಕ ಬಂಜಗೆರೆ ಜಯಪ್ರಕಾಶ್ ಹೇಳಿದ ನಂತರವೂ ಮುಟ್ಟುಗೋಲು ಹಾಕಿದ್ದು ದುರುದ್ದೇಶದ ಕ್ರಮವಾಗಿದೆ. ಅಲ್ಲದೇ ಸರ್ಕಾರವೇ ರಚಿಸಿದ ಸಮಿತಿಯ ಎಲ್ಲಾ ಸದಸ್ಯರ ಹೇಳಿಕೆಗಳನ್ನು ವಿಧಾನಸಭೆಯಲ್ಲಿ ಸಮಗ್ರವಾಗಿ ಮಂಡಿಸದೇ ತಿರುಚಿದ್ದು ಯಾಕೆ ಎಂಬ ಪ್ರಶ್ನೆಯೂ ಏಳುತ್ತದೆ. ಇದು ಸಂಸ್ಕೃತಿಹೀನ ಸಚಿವರ, ಸರ್ಕಾರದ ಅನೈತಿಕ ಕ್ರಮವೂ ಆಗಿದೆ. ಇದರಲ್ಲಿ ಬಿಜೆಪಿಯ ಒತ್ತಡ ಹೆಚ್ಚಿದೆ.

ಇದರೊಟ್ಟಿಗೆ ಹಿಂದಿನ ಸರ್ಕಾರಗಳು ಧರ್ಮಕಾರಣದಂತಹ ಕೃತಿಗಳನ್ನು ಮುಟ್ಟುಗೋಲು ಹಾಕಿದ್ದನ್ನು ಸಮರ್ಥಿಸಿದ ನ್ಯಾಯಾಲಯಗಳ ತೀರ್ಪುಗಳನ್ನು ಬಳಸಿದ್ದು ವಿವೇಚನಾಹೀನತೆಯ ಲಕ್ಷಣ. ಉದಾರೀಕರಣ, ಜಾಗತೀಕರಣದ ಈ ದಿನಗಳಲ್ಲಿ ನ್ಯಾಯಾಲಯಗಳೂ ತಾಂತ್ರಿಕ ಅಂಶಗಳ ಮೇಲೆಯೇ ತೀರ್ಪು ನೀಡುವುದು ಹೊಸದೇನಲ್ಲ. ಸಂವಿಧಾನದ ಆಶಯಗಳು, ಹಕ್ಕುಗಳು ಉಲ್ಲಂಘನೆಯಾಗುತ್ತಿರುವುದು ಆತಂಕಕಾರಿಯಾಗಿದೆ. ಶರಣರ ಪರಂಪರೆಯ ಬಗ್ಗೆ ದೊಡ್ಡ ಗಂಟಲಲ್ಲಿ ಚೀರಾಡುವ ಜಾತಿವಾದಿಗಳು ಅಂದು 12ನೇ ಶತಮಾನದಲ್ಲಿ ಯಾರು, ಯಾವುದೇ ವಿಚಾರಗಳನ್ನು ಮುಕ್ತವಾಗಿ ಹೇಳುವ, ಚರ್ಚಿಸುವ ಅಭಿವ್ಯಕ್ತಿಯ ಅವಕಾಶ 'ಅನುಭವ ಮಂಟಪ'ದಲ್ಲಿತ್ತು ಎಂಬುದನ್ನು ಪರಿಗಣಿಸಲು ಬಯಸುತ್ತಿಲ್ಲ. ಅಂತಹವರು ಶರಣ ಪರಂಪರೆಗೆ ಕಡು ವಿರೋಧಿಗಳೂ, ದ್ರೋಹಿಗಳೂ ಆಗಿದ್ದಾರೆ.

ಇಂತಹ ಒಟ್ಟು ವಿದ್ಯಮಾನಗಳು ನಡೆಯುತ್ತಿರುವಾಗ ಸಚಿವ ಸಂಪುಟದಲ್ಲಿ, ತಾತ್ವಿಕ ನಿಲುವಿಗಿಂತ ರಾಜಕೀಯ ಲಾಭದ ಅಂಶಕ್ಕೆ ಒತ್ತು ಕೊಟ್ಟಿರುವುದು, ಅದನ್ನು ಪುರಸ್ಕರಿಸಿರುವುದು ಆತ್ಮಸಾಕ್ಷಿಯ ಆತ್ಮಹತ್ಯೆಯಾಗಿದೆ. ಅಧಿಕೃತ ವಿರೋಧ ಪಕ್ಷವೆಂಬ ಕಾಂಗ್ರೆಸ್ ಪಕ್ಷದ ನಾಯಕರು ಸಹ 'ಎಂದೋ ಮುಟ್ಟುಗೋಲು ಹಾಕಬೇಕಿತ್ತು' ಎಂದು ಹೇಳುವ ಮೂಲಕ ಅದರ ಪ್ರಜಾಪ್ರಭುತ್ವ ವಿರೋಧಿ ನಿಲುವನ್ನು ಬಹಿರಂಗಪಡಿಸಿ ಆಡಳಿತ ಪಕ್ಷದವರೊಂದಿಗೆ ವಿರೋಧ ಪಕ್ಷದವರೂ ಕೈಜೋಡಿಸಿದ್ದಾರೆ. ಆದಾಗ್ಯೂ ಈ ಸಂದರ್ಭದಲ್ಲಿ ಸಿಪಿಐ(ಎಂ) ಶಾಸಕ ಜಿ.ವಿ.ಶ್ರೀರಾಮರೆಡ್ಡಿ, ಕನ್ನಡ ಚಳುವಳಿ ಪಕ್ಷದ ವಾಟಾಳ್ ನಾಗರಾಜ್ ಮತ್ತು ಕಾಂಗ್ರೆಸ್‌ನ ರಮೇಶ್‌ಕುಮಾರ್ ದಿಟ್ಟವಾಗಿ ವಿರೋಧಿಸಿರುವುದು ಪುಟ್ಟ ಹಣತೆಗಳಾದರೂ ಬೆಳಗುತ್ತಿರುವುದರ ಆಶಾದಾಯಕ ಸ್ಥಿತಿಯಾಗಿದೆ.


ಯಾವುದೇ ಕೃತಿಯಲ್ಲಿ ಲೇಖಕ ತನ್ನ ಅಭಿಪ್ರಾಯ ಹೇಳುವ ಅವಕಾಶವನ್ನು ಎಲ್ಲರೂ ಎತ್ತಿಹಿಡಿಯಬೇಕು. ಬಂಜಗೆರೆ ಕೃತಿಯ ಬಗ್ಗೆ ಹಲವು ಭಿನ್ನಾಭಿಪ್ರಾಯಗಳಿದ್ದರೂ ಕೃತಿಕಾರನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸಲೇಬೇಕು. ಮುಟ್ಟುಗೋಲಿಗೆ ವಿರೋಧವನ್ನು ವ್ಯಕ್ತಪಡಿಸುವುದು ಸೂಕ್ತ. ಆದರೆ ನಾಡಿನ ಹಲವಾರು ಹಿರಿಯ ಸಾಹಿತಿಗಳು ಸಹ ಈ ವಿಷಯದಲ್ಲಿ ತಳೆದ ನಿಲುವು ಜಾತಿವಾದಿ ಶಕ್ತಿಗಳನ್ನು ಪುಸಲಾಯಿಸುವಂತಿದೆ ಎಂಬುದನ್ನು ಗಮನಿಸಬೇಕು. ಭೈರಪ್ಪನವರ 'ಆವರಣ' ಕಾದಂಬರಿ ಜನಾಂಗದ್ವೇಷವನ್ನೇ ಪ್ರತಿಪಾದಿಸುತ್ತಿರುವಾಗಲೂ ಪ್ರಗತಿಪರರು ಅದನ್ನು ಮುಟ್ಟುಗೋಲು ಹಾಕಲು ಹೇಳಿಲ್ಲ.

ನಿರ್ಣಾಯಕ ಸಂಘರ್ಷ ನಡೆಯುತ್ತಿರುವಾಗ ಯಾವುದೇ ಕಾಳಜಿಯಿಂದಲೇ ಆಗಲಿ, ಕೃತಿಯನ್ನು ಲೇಖಕರು ಹಿಂತೆಗೆದುಕೊಂಡ ಕ್ರಮ ಸರಿಯಲ್ಲ. ಸರ್ಕಾರದ ನಿರ್ಧಾರ ನಿರೀಕ್ಷಿತವಾದರೂ ಅದನ್ನು ಎದುರಿಸಬೇಕಿತ್ತು.

'ಆನುದೇವ...' ಕೃತಿಯ ಮುಟ್ಟುಗೋಲು ರಾಜ್ಯದಲ್ಲಿ ಮುಂಬರುವ ಅಪಾಯದ ದಿನಗಳ ಸೂಚನೆಯಾಗಿದೆ. ಸೃಜನಶೀಲ ಸಂಶೋಧನೆಯನ್ನೇ ದಮನಿಸುವ ಬೆದರಿಕೆ ಒಡ್ಡಲಾಗಿದೆ. ಇನ್ನೆರಡು ತಿಂಗಳ ಬಳಿಕ ರಾಜ್ಯದಲ್ಲಿ ಅಧಿಕಾರ ಹಿಡಿಯಲು ತವಕದಿಂದ ಯತ್ನಿಸುತ್ತಿರುವ ಫ್ಯಾಸಿಸ್ಟ್ ಮನೋಭಾವದ ಬಿಜೆಪಿಗೆ ಅಧಿಕಾರ ಸಿಕ್ಕಲ್ಲಿ ಆಗಬಹುದಾದ ಅನಾಹುತಗಳನ್ನು ಪರಿಗಣಿಸಿ ಇಡೀ ರಾಜ್ಯದಾದ್ಯಂತ ಪ್ರಬಲ, ವ್ಯಾಪಕ ಆಂದೋಲನವನ್ನು ಬೆಳೆಸಬೇಕಿದೆ.

ಈ ರಾಜಕೀಯ ಎಚ್ಚರ ಸಾಹಿತಿಗಳಿಗೂ, ಪ್ರಗತಿಪರ ಸಂಘಟನೆಗಳಿಗೂ, ಪ್ರಜಾಸತ್ತಾತ್ಮಕ ಜನವಿಭಾಗಗಳಿಗೂ ಇರಬೇಕು. ಅಸಹನೆಯಿಂದ ಕುದಿವ ಸರ್ಕಾರ ಎಸೆದ ಸವಾಲಿನ ಪ್ರಶ್ನೆಯನ್ನು ಎದುರಿಸಲೇಬೇಕು.

ಭೂಸ್ವಾಧೀನ : ಮಾರಕ ನಿರ್ಧಾರ



ಕರ್ನಾಟಕ ಸಚಿವ ಸಂಪುಟವು ಕೈಗಾರಿಕಾ ಪ್ರದೇಶದ ಅಭಿವೃದ್ಧಿಗೆಂದು ವಶಪಡಿಸಿಕೊಂಡ ಭೂಮಿಗೆ ಸಂಬಂಧಿಸಿ ಹಲವು ನಿರ್ಧಾರಗಳನ್ನು ಕೈಗೊಂಡಿದೆ. ಅಭಿವೃದ್ಧಿಪಡಿಸಿದ ಪ್ರದೇಶದಲ್ಲಿ ಎಕರೆಗೆ ಶೇ.20 ರಷ್ಟು (8500 ಚ. ಅಡಿ) ಪ್ರದೇಶವನ್ನು ಭೂಮಿ ಕಳೆದುಕೊಂಡ ರೈತನಿಗೆ ಪರಿಹಾರ ಧನವಾಗಿ ಬಿಡುವುದು, ಖಾಸಗಿಯವರೇ ಸ್ವತಂತ್ರವಾಗಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಅವಕಾಶ, ಕೃಷಿ ಭೂಮಿ ಖರೀದಿಗೆ ಇದ್ದ ನಿರ್ಬಂಧ ಹಿಂತೆಗೆತ ಮುಂತಾದ ಕ್ರಮಗಳು ಇದರಲ್ಲಿ ಸೇರಿವೆ. ಈ ನಿರ್ಧಾರವು ರೈತರಿಗೆ ಬಹಳ ಪರಿಹಾರವನ್ನು ತರುವುದಲ್ಲದೇ ಅವರಿಗೆ ಬಿಟ್ಟ ಭೂಮಿಯನ್ನು ವಾಣಿಜ್ಯ ಇತ್ಯಾದಿ ಉದ್ದೇಶಗಳಿಗೆ ಬಳಸಬಹುದೆಂದೂ, ಇದು ಅತ್ಯುತ್ತಮ, ಪರಿಹಾರವೆಂದೂ ಬೃಹತ್ ಕೈಗಾರಿಕಾ ಸಚಿವ 'ಕಟ್ಟಾ' ಬಣ್ಣಿಸಿದ್ದಾರೆ. ಸಂಪುಟದಲ್ಲಿ ಇದಕ್ಕೆ ಸಚಿವ ರೇವಣ್ಣ ವಿರೋಧಿಸಿದರೆಂದೂ ವರದಿಯಾಗಿದೆ. ಅದೇನೆ ಇದ್ದರೂ ಸಂಪುಟದ ನಿರ್ಧಾರ ರೈತರ ಪಾಲಿಗೆ-ಕೃಷಿಯ ಮೇಲೂ ಮಾರಕ ಪರಿಣಾಮ ಬೀರುವುದರಲ್ಲಿ ಅನುಮಾನವಿಲ್ಲ.



ಈಗಾಗಲೇ ಕೈಗಾರಿಕೆಯ ಹೆಸರಿನಲ್ಲಿ ಮನಬಂದಂತೆ ಭೂಮಿಯನ್ನು ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಪ್ರಾಧಿಕಾರವು ವಶಪಡಿಸಿಕೊಳ್ಳುವುದು ಮತ್ತು ಉದ್ದಿಮೆದಾರರಿಗೆ ಮಾರುವುದು ಒಂದು ದೊಡ್ಡ ದಂಧೆಯೇ ಆಗಿದೆ. ಭೂಮಿ ವಶಪಡಿಸಿಕೊಳ್ಳುವುದು ಬಳಿಕ ಅದನ್ನು ಪಟ್ಟಿಯಿಂದ ಕೈಬಿಡುವ (ಡೀನೋಟಿಫೈ) ವ್ಯವಹಾರವೂ ಸಹ ದೊಡ್ಡ ಮಾಫಿಯಾ ದಂಧೆಯಂತೆ ಇದನ್ನು ರಾಜಾರೋಷವಾಗಿ ಅಧಿಕಾರಿಗಳು, ಸಚಿವರು ನಡೆಸುತ್ತಾರೆ. ಇನ್ನು ಕೆ.ಡಿ.ಎಫ್. ಸರ್ಕಾರದ ಎಸ್.ಇ.ಝಡ್.ನ ಅವಾಂತರ, ಆಕ್ರಮಣಗಳ ಬಗ್ಗೆ ಹೇಳಬೇಕಿಲ್ಲ.

ಇಲ್ಲಿ ಮುಖ್ಯ ಪ್ರಶ್ನೆಯೆಂದರೆ, ರಾಜ್ಯದ ರೈತರ, ಕೃಷಿ ಕೂಲಿಕಾರರ ಬದುಕಿನ ಅಡಿಪಾಯವನ್ನೇ ಅಲ್ಲಾಡಿಸುವ ಇಂತಹ ತೀರ್ಮಾನವನ್ನು ಕೇವಲ ಸಚಿವ ಸಂಪುಟವೊಂದು ಕೈಗೊಳ್ಳುತ್ತದೆ ಹೇಗೆ? ಸಂಪುಟದ ಈ ನಿರ್ಧಾರ ಏಕಪಕ್ಷೀಯವಾಗಿದೆ. ನಿರ್ಧಾರ ಕೈಗೊಳ್ಳುವ.ಮೊದಲು ಸರ್ವಪಕ್ಷಗಳ ಹಾಗೂ ರೈತ- ಕೂಲಿಕಾರರ ಸಂಘಟನೆಗಳು ಒಳಗೊಂಡು ಜನ ಸಂಘಟನೆಗಳ ಸಭೆ ನಡೆಸಿ ಸಮಾಲೋಚಿಸ ಬೇಕಿತ್ತು. ವಿಧಾನಸಭೆಯಲ್ಲಿ ಚರ್ಚಿಸಬೇಕಿತ್ತು. ಆದರೆ ಇಂತಹ ಯಾವುದೇ ಪ್ರಜಾಸತ್ತಾತ್ಮಕ ಕ್ರಮಗಳನ್ನು ಅನುಸರಿಸದೇ ಕೆ.ಡಿ.ಎಫ್. ಸರ್ಕಾರ ಸರ್ವಾಧಿಕಾರಿಯಾಗಿ ವರ್ತಿಸಿದೆ. ತನ್ನ ನಿರ್ಧಾರವನ್ನು ಹೇಗಾದರೂ ಮಾಡಿ ಜಾರಿಗೊಳಿಸ ಬಹುದೆಂಬ ದುಷ್ಟ ಯೋಚನೆ ಇದು.

ಇವೆಲ್ಲವುಗಳ ಪರಿಣಾಮವಾಗಿ ರಾಜ್ಯದ ರೈತರು ತಮ್ಮಲ್ಲಿದ್ದ ಜೀವನಾಧಾರವಾಗಿದ್ದ ಭೂಮಿಯನ್ನು ಸತತವಾಗಿ ಕಳೆದು ಕೊಳ್ಳುತ್ತಿದ್ದಾರೆ. ಕಳೆದ ಈ ಹನ್ನೆರಡು ವರ್ಷಗಳಲ್ಲಿ ಭೂಮಿಯ ಕೇಂದ್ರೀಕರಣ ಹೆಚ್ಚುತ್ತಲೇ ನಡೆದಿದೆ. ಇಂದು ಕೃಷಿಯ ಚಟುವಟಿಕೆಗಳಲ್ಲಿ ತೊಡಗಿದ ಶೇ.7 ರಷ್ಟು ಮಂದಿಯ ಕೈಯಲ್ಲಿ ಶೇ.35 ರಷ್ಟು ಭೂಮಿ ಸೇರಿದೆ. ಶೇ.20 ರಷ್ಟು ಇರುವ ಜನರ ಕೈಯಲ್ಲಿ ಶೇ.30 ರಷ್ಟು ಭೂಮಿ ಇದೆ. ಭೂಮಿಯಲ್ಲಿ ನೇರವಾಗಿ ದುಡಿವ ಶೇ.75 ರಷ್ಟಿರುವ ಬಡ ರೈತರ ಕೈಯಲ್ಲಿ ಕೇವಲ ಶೇ.30 ರಷ್ಟು ಮಾತ್ರ ಭೂಮಿ ಇದೆ. ಭೂಮಿಯ ಕೇಂದ್ರೀಕರಣವನ್ನು ಸರಿಪಡಿಸಬೇಕಾದ ಸಂದರ್ಭವಿರುವಾಗ, ಸರ್ಕಾರ ಇದರತ್ತ ಕಿಂಚಿತ್ತೂ ತಲೆಕೆಡಿಸಿ ಕೊಳ್ಳದೇ ಉದ್ದಿಮೆಗಳ ಉದ್ಧಾರದ ಹೆಸರಿನಲ್ಲಿ ಇನ್ನೂ ಭೂ ಕೇಂದ್ರೀಕರಣಕ್ಕೆ ಆ ಮೂಲಕ ಭೂ ಹೀನರ ಹೆಚ್ಚಳಕ್ಕೆ ಸರ್ಕಾರ ಹೊರಟಿದೆ. ಇಂದಿನ ಕೃಷಿ ಬಿಕ್ಕಟ್ಟಿಗೆ ಈ ಭೂಕೇಂದ್ರೀಕರಣಕ್ಕೆ ಪ್ರಧಾನವಾದ ಒಂದು ಕಾರಣ.

ಉದಾರೀಕರಣ-ಖಾಸಗೀಕರಣದ ಆರಾಧನೆ ಆರಂಭಗೊಂಡ ನಂತರ ರಾಜ್ಯದ ಪ್ರತಿಯೊಂದು ಸರ್ಕಾರಗಳೂ ಇದನ್ನೇ ಮಾಡಿವೆ. ಮಣ್ಣಿನ ಮಗನಾಗಿರುವ ದೇವೇಗೌಡರ ಸರ್ಕಾರ ಪ್ರಥಮತಃ ಭೂ ಸುಧಾರಣೆಯ ಕಾನೂನಿನ ಅಲ್ಪ ಅನುಕೂಲಗಳನ್ನು ರೂಢಿಸಿ ಎಸೆದು ಖಾಸಗಿ ಕಂಪನಿಗಳು, ದಣಿಗಳು ದಂಧೆಗಾರರಿಗೆ ಸಾವಿರಾರು ಎಕರೆ ಖರೀದಿ ಮಾಡಿಕೊಳ್ಳಲು ತಿದ್ದುಪಡಿ ತಂದಿತು. ಈ ಮೂಲಕ ಅರೆ-ಬರೆಯಾಗಿಯಾದರೂ ದೇವರಾಜ ಅರಸರು ತಂದಿದ್ದ ಭೂ ಸುಧಾರಣಾ ಕಾನೂನನ್ನು ಬುಡಮೇಲು ಮಾಡಲಾಯಿತು. ಆದ್ದರಿಂದ ಸರ್ಕಾರ ಈ ಕೂಡಲೇ ತನ್ನ ನಿರ್ಧಾರವನ್ನು ರದ್ದುಪಡಿಸಬೇಕು. ಕೈಗಾರಿಕಾ ಬೆಳವಣಿಗೆ ನೀತಿ ಎಂದರೇನೆಂಬುದೂ ನಿರ್ದಿಷ್ಟಗೊಳ್ಳಬೇಕು. ಜನರ ನಡುವೆ ಅಧಿಕಾರ ಹಸ್ತಾಂತರ ಗುಂಗು ಹಿಡಿಸಿ, ಗೊಂದಲದ ಧೂಳನ್ನೆಬ್ಬಿಸಿ ರೈತರ-ಕೃಷಿಯ ಕತ್ತುಕೊಯ್ಯುವ ಪಿತೂರಿ ಹಿಮ್ಮೆಟ್ಟಬೇಕು.


ಕರ್ನಾಟಕ - ಭಿಕಾರಿಪುರವಾಗಬೇಕೆ?

ಕರ್ನಾಟಕದ ಅಧಿಕಾರವನ್ನು ಹೇಗಾದರೂ ಮಾಡಿ ಕೈ ವಶ ಮಾಡಿಕೊಳ್ಳಲು ಸಂಘಪರಿವಾರ ಮತ್ತು ಬಿಜೆಪಿ ನಾಯಕ ಗಣ ಹಲವು ಕಸರತ್ತುಗಳಿಗೆ ಇಳಿದಿದೆ. ಇನ್ನೊಂದೆಡೆ ಜೆಡಿ(ಎಸ್) ನಲ್ಲಿ ಕುಮಾರಣ್ಣಗೆ ಗ್ರಹಗತಿ ಇದೆಯೆಂದು ಕೆಲವರು ವೇದ, ಪುರಾಣ, ವಾಸ್ತು, ಗಿಳಿ ಶಾಸ್ತ್ರಗಳನ್ನು ಬಳಸಿ ಭಾವಿ ಮುಖ್ಯಮಂತ್ರಿಗಳ ಕನಸನ್ನು ಬಾವಿಗೆ ಹಾಕುತ್ತಿದ್ದಾರೆ. ತಮ್ಮ ಸಾಧ್ಯತೆಗಳು ಕನಸುಗಳಾಗುತ್ತಿರುವುದನ್ನು, ಅವು ಹಾಗೆ ಕನವರಿಕೆಗಳಾಗಿ ರೂಪಾಂತರ ಹೊರಡುತ್ತಿರುವುದು ಅರಿವಿಗೆ ಬಂದಿದ್ದರೂ ಛಲ ಬಿಡದೇ ಮುಖ್ಯಮಂತ್ರಿ ಯಾಗಲು ಯಡಿಯೂರಪ್ಪ ಯತ್ನಿಸುತ್ತಿದ್ದಾರೆ. ಕರ್ನಾಟಕವನ್ನು ಪೂರಾ ಅಭಿವೃದ್ಧಿಗೊಳಿಸಲು ನನಗೂ ಒಂದು ಛಾನ್ಸ್ ಕೊಡಿ ಎಂದು ಅಂಗಲಾಚುತ್ತಿದ್ದಾರೆ.

ಇವರ ಕರ್ನಾಟಕದ ಅಭಿವೃದ್ಧಿ ಕಲ್ಪನೆ ಪ್ರಾಯೋಗಿಕವಾಗಿ ನೋಡಬೇಕೆಂದರೆ ಅವರ ಕ್ಷೇತ್ರ ಶಿಕಾರಿಪುರಕ್ಕೆ ಇಂದೇ ಭೇಟಿ ನೀಡಬೇಕು. ಕ್ಷೇತ್ರೋದ್ಧಾರಕ್ಕೆಂದು 450 ಕೋಟಿ ರೂಪಾಯಿಗಳ ಪ್ಯಾಕೇಜ್ ಎತ್ತಿಕೊಂಡ ಈ ಮಹಾಶಯರು ಆ ಹಣದಲ್ಲಿ ರೋಡು, ಚರಂಡಿಗೆಷ್ಟು , ಜೇಬಿಗೆಷ್ಟು ಎಂದೂ ನೋಡಬೇಕು. ಕೋಟಿಗಳನ್ನು ಖರ್ಚು ಮಾಡಿದ ರಸ್ತೆ ಕಿತ್ತು ಹೋಗಿದೆ. ಚರಂಡಿ ಕುಸಿದು ಕುಣಿ ತುಂಬಿದೆ, ಕಾಮಗಾರಿಗಳು ಕಳಪೆಯಾಗಿವೆ.

ಅಂದರೆ ಒಂದು ಅಂದಾಜಿನ ಪ್ರಕಾರ ಮಾತ್ರ ಖರ್ಚು ಮಾಡಿ ಉಳಿದದ್ದು, ಯಡಿಯೂರಪ್ಪನವರ ಸಫಾರಿ ಜೇಬಿಗೆ ಇಳಿದಿದೆ. ಈಗಾಗಲೇ ಶಿವಮೊಗ್ಗ ಜಿಲ್ಲಾಭಿವೃದ್ಧಿಗೆಂದು 2000 ಕೋಟಿ ಪ್ಯಾಕೇಜ್ ರೆಡಿಯಾಗಿದ್ದು, ಸೀದಾ ನುಂಗಲು ಸಿದ್ಧವಾಗಿದೆ. ಶಿಕಾರಿಪುರವನ್ನು ಭಿಕಾರಿ ಪುರವನ್ನಾಗಿ ಸುತ್ತಿರುವ ಅಭಿವೃದ್ಧಿ ಮಾದರಿ ಕರ್ನಾಟಕಕ್ಕೆ ಬೇಕು.

ಮುಕ್ತ ವ್ಯಾಪಾರದ ಹೆಸರಿನಲ್ಲಿ ಸಾಮ್ರಾಜ್ಯ ವಿಸ್ತರಣೆ


ಸಿ.ಯತಿರಾಜು

1857ರ ಬಂಡಾಯ

ಇತಿಹಾಸಕಾರರು ಭಾವಿಸಿದಂತೆ ಸಿಪಾಯಿಗಳು ಅತಿಯಾದ ಧಾರ್ಮಿಕ ಭಾವನೆಗಳಿಂದ ಪ್ರೇರೇಪಣೆಗೊಂಡು ಬಂಡಾಯ ಹೂಡಲಿಲ್ಲ. ಆದರೆ ಪಶುಗಳಿಗಿಂತಲೂ ಹೀನವಾಗಿ ಕಾಣುತ್ತಿದ್ದ ಜನಾಂಗೀಯ ತಾರತಮ್ಯಕ್ಕೀಡಾಗಿ ಅವಮಾನ, ಮತ್ತು ನಿರಂತರ ದುಡಿಮೆಯ ದಣಿವನ್ನು ತಡೆದು ಕೊಳ್ಳಲಾಗದೆ ಅನಿವಾರ್ಯವಾಗಿ ಬಂಡೇಳಬೇಕಾಯಿತು.

'ಮುಕ್ತ ವ್ಯಾಪಾರ' ವೆನ್ನುವುದು ಬ್ರಿಟಿಷ್ ಬಂಡವಾಳಶಾಹಿಗಳು ಬಾಹ್ಯ ಮಾರುಕಟ್ಟೆಗಳನ್ನು ವಶಪಡಿಸಿಕೊಳ್ಳುವ ಒಂದು ಸಾಧನವಷ್ಟೇ ಅಲ್ಲದೆ ಅದು ಬ್ರಿಟಿಷರ ಅಧಿಕಾರ ವಿಸ್ತರಣೆಗೆ ಒಂದು ಹೊಸ ಚೈತನ್ಯವನ್ನು ತುಂಬಿತು. ಹೀಗೆ ಗಳಿಸಿಕೊಂಡ ಅಧಿಕಾರವನ್ನು ಇಡೀ ಜಗತ್ತಿನ ಮೇಲೆ 'ಮುಕ್ತ ವ್ಯಾಪಾರವನ್ನು' ಹೇರಲು ಬಳಸುವ ಮೂಲಕ 'ಮುಕ್ತ ವ್ಯಾಪಾರದ ಸಾಮ್ರಾಜ್ಯವನ್ನು' ಜಾರಿಗೆ ತರುವುದಾಗಿತ್ತು.

ವೈಜ್ಞಾನಿಕ ಸಮಾಜವಾದದ ಜನಕರಾದ ಕಾರ್ಲ್ ಮಾರ್ಕ್ಸ್ ತನ್ನ ಏಷ್ಯಾಟಿಕ್ ಮಾದರಿ ಉತ್ಪಾದನಾ ವ್ಯವಸ್ಥೆಯನ್ನು ಹಾಗೂ ವಸಾಹತುವಾದದ ವಿಸ್ತರಣೆಯನ್ನು ಅಧ್ಯಯನ ಮಾಡಿದರು. ಈ ಅಧ್ಯಯನದ ಭಾಗವಾಗಿ ಅವರು ಭಾರತೀಯರಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳನ್ನು ಅತ್ಯಂತ ವಿವರವಾಗಿ 1853 ರಿಂದಲೇ ಅಧ್ಯಯನ ಮಾಡುತ್ತಾ ಬಂದರು. ಈ ಅಧ್ಯಯನದ ಮುಂದುವರಿದ ಭಾಗವಾಗಿ ಅವರು ಭಾರತೀಯ ಸೈನಿಕ ಬಂಡಾಯವನ್ನು ಅಧ್ಯಯನ ಮಾಡಿ ಆ ಬಂಡಾಯ ನಡೆಯುತ್ತಿದ್ದ ಸಂದರ್ಭದಲ್ಲೇ ನ್ಯೂಯಾರ್ಕ್ ಡೈಲಿ ಟ್ರಿಬ್ಯೂನ್‌ಗೆ ಅನೇಕ ಲೇಖನಗಳನ್ನು ಬರೆದರು. ಕಾರ್ಲ್ ಮಾರ್ಕ್ಸ್ ಭಾರತದ ಬಗ್ಗೆ ನಡೆಸಿದ ಈ ವಿಶೇಷ ಅಧ್ಯಯನಗಳನ್ನು ಪ್ರಗತಿ ಪ್ರಕಾಶನದ 'ಪ್ರಥಮ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ 1857-59' ಎಂಬ ಪುಸ್ತಕದಲ್ಲಿ ಕಾಣಬಹುದಾಗಿದೆ.

ಈ ಹೋರಾಟ 1850ರ ದಶಕದಲ್ಲಿ ಸುಮಾರಾಗಿ ಏಷ್ಯಾದಲ್ಲೆಲ್ಲಾ ಕಂಡು ಬಂದ ಮರ್ದಿತ ರಾಷ್ಟ್ರಗಳ ಸಾರ್ವತ್ರಿಕ ವಸಾಹತುಶಾಹಿ ವಿರೋಧಿ ವಿಮೋಚನಾ ಹೋರಾಟದ ಅವಿಭಾಜ್ಯ ಭಾಗವಾಗಿತ್ತೆಂದೇ ಶ್ರಮಜೀವಿ ವರ್ಗದ ಮಹಾನ್ ನಾಯಕ ಕಾರ್ಲ್ ಮಾರ್ಕ್ಸ್ ಅಭಿಪ್ರಾಯ ಪಟ್ಟಿದ್ದರು. ಇದಕ್ಕೂ, ಆ ಕಾಲದಲ್ಲಿ ಯುರೋಪಿಯನ್ ದೇಶಗಳಲ್ಲೂ ಅಮೇರಿಕಾದ ಸಂಯುಕ್ತ ಸಂಸ್ಥಾನಗಳಲ್ಲೂ ಹಬ್ಬುತ್ತಿದ್ದ ಜಾಗತಿಕ ಆರ್ಥಿಕ ಮುಗ್ಗಟ್ಟಿನ ಪರಿಣಾಮವಾಗಿ ಯುರೋಪಿನಲ್ಲಿ ಹೊರ ಹೊಮ್ಮಲಿದ್ದ ಕ್ರಾಂತಿಗೂ ಸಂಬಂಧವಿತ್ತೆಂದು ಅವರು ಅಭಿಪ್ರಾಯ ಪಟ್ಟಿದ್ದರು.

ಭಾರತದಲ್ಲಿ ಕೈ ಮಗ್ಗ ಮತ್ತು ನೂಲುವ ರಾಟೆ ಲಕ್ಷೋಪಲಕ್ಷ ನೇಕಾರರಿಗೆ ಹಾಗೂ ನೂಲುಕಾರರಿಗೆ ಜೀವನೋಪಾಯವನ್ನು ಒದಗಿಸಿತ್ತು. ಬ್ರಿಟಿಷ್ ಆಕ್ರಮಣಕಾರರು ಭಾರತದ ಕೈ ಮಗ್ಗ ಮತ್ತು ನೂಲುವ ರಾಟೆಯನ್ನು ನಾಶಮಾಡಿದರು. ಭಾರತೀಯ ಬಟ್ಟೆಗಳನ್ನು ಯುರೋಪಿನ ಮಾರುಕಟ್ಟೆಗಳಿಂದ ಮೊದಲು ಹೊರಗಟ್ಟಲಾಯಿತು. ಆ ನಂತರ ಬ್ರಿಟಿಷರು ಹತ್ತಿ ಬಟ್ಟೆಗಳ ತವರು ನೆಲವಾಗಿದ್ದ ಭಾರತದಲ್ಲೂ ತಮ್ಮದೇ ಹತ್ತಿ ಬಟ್ಟೆಗಳನ್ನು ತುಂಬಿಬಿಟ್ಟರು. 1818 ರಿಂದ 1836 ರವರೆಗೆ ಗ್ರೇಟ್ ಬ್ರಿಟನ್ನಿನಿಂದ ಭಾರತಕ್ಕೆ ರಫ್ತಾದ ಹೊಸೆದ ನೂಲಿನ ಪ್ರಮಾಣವು 5200 ಪಟ್ಟು ಹೆಚ್ಚಿತು. 1824 ರಲ್ಲಿ ಭಾರತಕ್ಕೆ ಬ್ರಿಟಿಷ್ ಮಸ್ಲಿನ್ ಬಟ್ಟೆಯ ರಫ್ತು ಕೇವಲ 10,00,000 ಗಜಗಳಾಗಿದ್ದಿತು. 1837ರಲ್ಲಿ ಅದು 64,000,000 ಗಜಗಳಿಗೂ ಮೀರಿದ್ದಿತು. ಈಸ್ಟ್ ಇಂಡಿಯಾ ಕಂಪನಿಯಿಂದ ಆಮದು ಮಾಡಿಕೊಳ್ಳಲಾದ ಸರಕುಗಳನ್ನು ಇತರ ದೇಶಗಳಲ್ಲಿ ಮಾರಿ ಅಪಾರ ಪ್ರಮಾಣದ ಲಾಭವನ್ನು ಈಸ್ಟ್ ಇಂಡಿಯಾ ಕಂಪನಿಯ ಗುತ್ತಿಗೆದಾರರು ಮಾಡಿಕೊಳ್ಳುತ್ತಿದ್ದರು. ಇಂಗ್ಲೆಂಡಿನಲ್ಲಿ ಮುಕ್ತ ವ್ಯಾಪಾರವನ್ನು ಮೊದಲು ಬೋಧಿಸಿದವರು ಆ ಈಸ್ಟ್ ಇಂಡಿಯಾ ಗುತ್ತೇದಾರಿಗಳೇ ಎಂದು ಮಾರ್ಕ್ಸ್ ತಮ್ಮ ಅಧ್ಯಯನಗಳಲ್ಲಿ ಬೊಟ್ಟು ಮಾಡಿ ತೋರಿಸಿದ್ದಾರೆ. ಇಂಗ್ಲೆಂಡಿನ ಕೈಗಾರಿಕಾ ಹಿತಗಳು ಭಾರತೀಯ ಮಾರುಕಟ್ಟೆಯ ಮೇಲೆ ಹೆಚ್ಚು ಅವಲಂಬಿತವಾದಂತೆ ಅವು ಭಾರತದ ಸ್ಥಳೀಯ ಕೈಗಾರಿಕೆಯನ್ನು ನಾಶಗೊಳಿಸಿದ ನಂತರ, ಹೊಸ ಉತ್ಪಾದಕ ಶಕ್ತಿಗಳನ್ನು ಸೃಜಿಸುವ ಅವಶ್ಯಕತೆಯನ್ನು ಅಷ್ಟು ಹೆಚ್ಚಾಗಿ ಕಾಣತೊಡಗಿದವು. ಒಂದು ದೇಶವು ಬೇರೊಂದು ದೇಶದೊಳಕ್ಕೆ ತನ್ನ ತಯಾರಿಕ ವಸ್ತುಗಳನ್ನು ಸುಮ್ಮನೆ ತುಂಬುತ್ತಲೆ, ಹೋಗುವುದು ಸಾಲದು, ಆ ದೇಶವೂ ತನಗೆ ಪ್ರತಿಯಾಗಿ ಏನನ್ನಾದರೂ ಕೊಡಲು ಸಮರ್ಥವಾಗುವಂತೆ ಮಾಡಲೂ ಬೇಕು. ಹಾಗಾಗಿ ತಮ್ಮ ವ್ಯಾಪಾರವು ಹೆಚ್ಚುವ ಬದಲು ಕುಗ್ಗುತ್ತಾ ಹೋದುದನ್ನು ಬ್ರಿಟನ್ನಿನ ಕೈಗಾರಿಕೆಗಾರರು ಕಂಡುಕೊಂಡರು. ತಮ್ಮ ವಸ್ತುಗಳನ್ನು ಕೊಳ್ಳುವ ಶಕ್ತಿ ಭಾರತದಲ್ಲಿ ಅತ್ಯಂತ ಕಮ್ಮಿ ಮಟ್ಟಕ್ಕಿಳಿದಿತ್ತು. ಇಂಡಿಯನ್ ಅಧಿಕಾರಿಗಳು ಅಡಚಣೆ ಒಡ್ಡುತ್ತಿದ್ದುದನ್ನು, ಕುತರ್ಕ ಹೂಡುತ್ತಿದ್ದುದನ್ನು ಕಂಡುಕೊಂಡರು. ಹೀಗೆ ಭಾರತವು ಒಂದು ಕಡೆ ಬ್ರಿಟನ್ನಿನ ಕೈಗಾರಿಕಾ ಹಿತಗಳು ಹಾಗೂ ಮತ್ತೊಂದು ಕಡೆ ಧನಾಧಿಪತ್ಯ ಹಾಗೂ ಸ್ವಲ್ಪ ಜನಾಧಿಪತ್ಯ ಹಿತಗಳು ಇವುಗಳ ನಡುವೆ ಪೈಪೋಟಿಯ ರಣಾಂಗಣವಾಯಿತು. ತಯಾರಿಕೆಗಾರರು ಇಂಗ್ಲೆಂಡಿನಲ್ಲಿ ತಾವು ಉಚ್ಛ್ರಾಯ ಸ್ಥಿತಿಯಲ್ಲಿರುವುದನ್ನು ಮನಗಂಡು, ಭಾರತದಲ್ಲಿ ತಮಗೆ ವಿರುದ್ಧವಾಗಿರುವ ಈ ಶಕ್ತಿಗಳನ್ನು ನಾಶಗೊಳಿಸಬೇಕೆಂದು, ಇಂಡಿಯಾ ಸರ್ಕಾರದ ಇಡೀ ಪುರಾತನ ಬಂಧವನ್ನು ನಾಶಗೊಳಿಸಬೇಕೆಂದು, ಈಸ್ಟ್ ಇಂಡಿಯಾ ಕಂಪನಿಯನ್ನು ಅಂತಿಮವಾಗಿ ಕೊನೆಗಾಣಿಸಬೇಕೆಂದು ಬಯಸಿದರು.

ಸಾಮ್ರಾಜ್ಯಶಾಹಿಗಳಿಗೆ ಮಾರುಕಟ್ಟೆಯನ್ನು ವಿಸ್ತರಿಸುವ ಹಸಿವು ಅಪಾರವಾಗಿತ್ತು. ಮುಕ್ತ ವ್ಯಾಪಾರವನ್ನು ಹೊಸ ಹೊಸ ಭೂ ಭಾಗಗಳಲ್ಲಿ ವಿಸ್ತರಿಸುವ ಆಕಾಂಕ್ಷೆಗಳಿಂದ ಪ್ರಚೋದಿತವಾಗಿ ಬ್ರಿಟಿಷರು ನಿರಂತರ ವಿಸ್ತರಣಾ ಯುದ್ಧಗಳಲ್ಲಿ ತೊಡಗಿದರು. ಈ ಎಲ್ಲಾ ವಿಸ್ತರಣೆಗಳಲ್ಲಿ ಬ್ರಿಟಿಷ್ ಆಳ್ವಿಕೆಯ ಮುದ್ದಿನ ಕೂಸಾಗಿದ್ದ ಬಂಗಾಳ ಸೈನ್ಯವನ್ನು ಅತ್ಯಂತ ಗರಿಷ್ಠ ಪ್ರಮಾಣದಲ್ಲಿ ಬಳಸುವ ಮೂಲಕ ಅದನ್ನು ಅಪಾರವಾದ ಶೋಷಣೆಗೆ ಗುರಿಪಡಿಸಲಾಯಿತು. ಬಂಗಾಳ ಸೈನಿಕರು ಧಾರ್ಮಿಕ ಪ್ರಚೋದನೆಗಳಿಂದ ಬಂಡೆದ್ದರು ಎಂಬುದಕ್ಕಿಂತಲೂ ಹೆಚ್ಚಾಗಿ ಈ ದೀರ್ಘಕಾಲದ ಸಾಮ್ರಾಜ್ಯ ವಿಸ್ತರಣಾ ಯುದ್ಧಗಳ ದಣಿವನ್ನು ಸಹಿಸಲಾರದೆ ಬಂಡೆದ್ದರು.

1832 ರಲ್ಲಿ ಜಾರಿಗೆ ಬಂದ ಬ್ರಿಟಿಷ್ ಪಾರ್ಲಿಮೆಂಟರಿ ಸುಧಾರಣೆಗಳ ನಂತರ ಅಧಿಕಾರ ಸಂಪೂರ್ಣವಾಗಿ ಬ್ರಿಟಿಷ್ ಕೈಗಾರಿಕೋದ್ಯಮಿಗಳ ವಶವಾಯಿತು. ಬ್ರಿಟಿಷ್ ಕೈಗಾರಿಕಾ ಉತ್ಪಾದಕರು 1833 ರಲ್ಲಿ ಚಾರ್ಟರ್ ಆಕ್ಟ್‌ನ್ನು ಜಾರಿಗೆ ತಂದರು. ಇದರಿಂದ ಮುಕ್ತ ವ್ಯಾಪಾರ ನೀತಿಯನ್ನು ವಸಾಹತು ರಾಷ್ಟ್ರಗಳಲ್ಲಿ ಮುನ್ನುಗ್ಗಿಸಲು ಪ್ರಯತ್ನಿಸಲಾಯಿತು. ಇದಕ್ಕಾಗಿ ವಿಶಾಲ ಸಾಮ್ರಾಜ್ಯವನ್ನು ಸ್ಥಾಪಿಸುವುದು ಅನಿವಾರ್ಯವಾಗಿತ್ತು. ಈ ವಿಸ್ತರಣಾವಾದಿ ಯುದ್ಧಗಳಲ್ಲಿ ಬಂಗಾಳ ಸೈನ್ಯ ಬ್ರಿಟಿಷ್ ಸಾಮ್ರಾಜ್ಯವಾದದ ಹೋರಾಟದ ಖಡ್ಗವೆಂದೇ ಪರಿಗಣಿಸಲ್ಪಟ್ಟಿತ್ತು. ಈ ವಿಸ್ತರಣಾ ಪ್ರಕ್ರಿಯೆಯಲ್ಲಿ ಬಂಗಾಳ ಸೈನ್ಯವನ್ನು ಕ್ರಿಮಿಯಾದಿಂದ ಹಿಡಿದು ಚೈನಾದವರೆಗೆ ನಡೆದ ಯುದ್ಧಗಳ ರಣರಂಗದಲ್ಲಿ ಬಂದೂಕಿನ ಮೇವಾಗಿ ವ್ಯಾಪಕವಾಗಿ ದುರ್ಬಳಕೆ ಮಾಡಿಕೊಳ್ಳಲಾಯಿತು. ಸುಮಾರು 18 ವರ್ಷಗಳ ಕಾಲ ಬಂಗಾಲ ಸೈನ್ಯ ಬಿಡುವಿಲ್ಲದೇ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸುತ್ತಾ ಹೋರಾಟ ಮಾಡಿ ಅಪಾರ ಪ್ರಮಾಣದ ಸಾವು ನೋವುಗಳನ್ನೆದುರಿಸಿ ಬ್ರಿಟಿಷ್ ಸಾಮ್ರಾಜ್ಯವನ್ನು ಅಪಾರವಾಗಿ ವಿಸ್ತರಿಸುವಲ್ಲಿ ಬಹಳ ಪ್ರಧಾನ ಪಾತ್ರ

ಪುಟ 10 ಕ್ಕೆ

ಹ್ಯಾರಿಪಾಟರ್ ಬಗ್ಗೆ ಸ್ವಲ್ಪ ಹೇಳಿ ಸಾರ್

ಇತ್ತೀಚೆಗೆ ಬಿಡುಗಡೆಯಾದ ಹ್ಯಾರಿಪಾಟರ್ ಪುಸ್ತಕದ ಬಗ್ಗೆ ನಿಮಗೆ ಗೊತ್ತಿದೆ. 975 ರೂಪಾಯಿಗಳ ಪುಸ್ತಕ ಒಂದೇ ದಿನದಲ್ಲಿ ವಿಶ್ವದಾದ್ಯಂತ 30 ಲಕ್ಷ ಪ್ರತಿ ಮಾರಾಟ ಆಗಿದೆ. ಅದರಲ್ಲಿ ಭಾರತದಲ್ಲಿ ಒಂದೂವರೆ ಲಕ್ಷ ಪ್ರತಿ ಮಾರಾಟ ಆಗಿದೆ. ಇದರ ಬಗ್ಗೆ ನಮ್ಮ ಸಾಹಿತಿ, ಕವಿ, ಲೇಖಕರು ಇವರನ್ನೆಲ್ಲಾ ಸಂದರ್ಶಿಸಿ ಅದರ ಬಗ್ಗೆ ಅವರ ಅಭಿಪ್ರಾಯ ಸಂಗ್ರಹಿಸಲು ಕಳುಹಿಸಲಾಗಿತ್ತು. ಸಾಹಿತಿಗಳನ್ನು 'ಹ್ಯಾರಿ ಪಾಟರ್ ಬಗ್ಗೆ ಸ್ವಲ್ಪ ಹೇಳಿ ಸಾರ್' ಅಂತ ಕೇಳಿ ನಮ್ಮ ವರದಿಗಾರ ವರದಿ ತಂದಿದ್ದಾನೆ. ಆದರೆ ವರದಿಗಾರ ಹೊಸಬನಾದ್ದರಿಂದ ಒಂದು ಸಣ್ಣ ತಪ್ಪಾಗಿದೆ. ಅಭಿಪ್ರಾಯಗಳನ್ನು ಯಾರು ಹೇಳಿದ್ದು ಎಂಬ ಬಗ್ಗೆ ಅವನಿಗೆ ಗೊಂದಲವಾಗಿದೆ. ಏನು ಹೇಳಿದರು ಎಂಬುದು ಮುಖ್ಯವಾದ್ದರಿಂದ ಅದನ್ನು ಪ್ರಕಟಿಸಿದ್ದೇವೆ. ಯಾರು ಆ ರೀತಿ ಹೇಳಿದರು ಎಂಬುದನ್ನು ಕೈ ಬಿಡಲಾಗಿದೆ.

ಸಾಹಿತಿ1: ನೋಡ್ರೀ... ಅದಕ್ಕೆ ನಾನು ಹೇಳಿದ್ದು ಒಂದನೇ ತರಗತಿಯಿಂದಲೇ ಇಂಗ್ಲೀಷ್ ಕಲಿಸಬೇಕು ಎಂದು, ಇಂಗ್ಲೀಷ್ ಕಲಿತಿದ್ದರಿಂದಲೇ ತಾನೆ ಆ ಮಕ್ಕಳು ಅದನ್ನು ಓದುತ್ತಿರುವುದು. ಅದಕ್ಕೆ ನನ್ನ ಮಕ್ಕಳು ಮೊಮ್ಮಕ್ಕಳು ಇಂಗ್ಲೀಷ್ ಶಾಲೆಯಲ್ಲಿ ಕಲಿತಿದ್ದು. ಅವರು ಇಂಗ್ಲೀಷ್ ಪುಸ್ತಕ ಬರೆದರೆ, ಅವು ಈ ರೀತಿ ಮಾರಾಟವಾಗಬಹುದಲ್ವೇ?

ಸಾಹಿತಿ 2: ನೋಡ್ರೀ... ಅದಕ್ಕೆ ನಾನು ಹೇಳಿದ್ದು ಒಂದನೇ ತರಗತಿಯಿಂದಲೇ ಇಂಗ್ಲೀಷ್ ಕಲಿಸಬಾರದು ಅಂತ. ಅವು ಇಂಗ್ಲೀಷ್ ಕಲಿತಿದ್ದರಿಂದ ಬರಿ ಇಂಗ್ಲೀಷ್ ಪುಸ್ತಕ ಓದುತ್ವೆ. ನಮ್ಮ ಪುಸ್ತಕಗಳನ್ನು ಮೂಸಿಯೂ ನೋಡಲ್ಲ! ಛೇ...

ಸಾಹಿತಿ 3: ನೋಡ್ರಿ, ಎಷ್ಟು ಪುಸ್ತಕ ಮಾರಾಟ ಆಯಿತು? ಎಷ್ಟು ಬೆಲೆ ಎನ್ನುವುದು ಅದರ 'ಬೆಲೆ' ಯನ್ನು ನಿರ್ಧರಿಸಬಹುದಷ್ಟೇ, 'ಮೌಲ್ಯ' ವನ್ನಲ್ಲ. ಈಗ ನೋಡಿ, ನನ್ನ ಪುಸ್ತಕ, ಅಂಗಡಿಯಲ್ಲಿ ಮಾರಾಟವಾಗದೇ ಇರಬಹುದು. ಗ್ರಂಥಾಲಯದಲ್ಲಿ ಯಾರೂ ಓದದೇ ಧೂಳು ಹಿಡಿದಿರಬಹುದು. ಆದರೆ ಅದರ 'ತೂಕ' ಇನ್ನೂ ಹೆಚ್ಚಾಗುತ್ತದೆಯೇ ಹೊರತು ಕಡಿಮೆಯಾಗೋಲ್ಲ ಅಲ್ವೇ?

ಸಾಹಿತಿ 4: ಮಾಟ ಮಂತ್ರದ ತಾಕಲಾಟ, ತೊಳಲಾಟಗಳು ಶ್ರೇಷ್ಠವಲ್ಲ. ನಮ್ಮ ಮಾನವೀಯ ಮೌಲ್ಯಗಳು, ಮನುಷ್ಯ ಮನುಷ್ಯನ ನಡುವಿನ ಸಂಬಂಧ ಅಂತರಾಳ ಹೊಕ್ಕು ಒಳತೋಟಗಳನ್ನು ಹಿಡಿದಿಡುವ, ಕಥಾನಕ ಕಟ್ಟಿಕೊಡುವ, ಸಮಾಜದಲ್ಲಿನ ಸೂಕ್ಷ್ಮ ಸಂಗತಿಗಳ ಬಗ್ಗೆ ಒಳನೋಟ ಹರಿಸಿ, ಎಳೆ ಎಳೆಯಾಗಿ, ಸಮಗ್ರವಾಗಿ, ಜೊತೆಗೆ ಸ್ತ್ರೀ ಸಂವೇದನೆಯಿಂದ ಕೂಡಿ, ನಮ್ಮ ಮುಂದೆ ಪರಿಣಾಮಕಾರಿಯಾಗಿ ಮಂಡಿಸುವ (ಇವರು ಇನ್ನೂ ಏನೇನೋ ಹೇಳಿದರಂತೆ. ನಮ್ಮ ಸಂದರ್ಶಕ ಕಷ್ಟದಿಂದ ಇಷ್ಟನ್ನು ಬರೆದುಕೊಂಡು ಬಂದಿದ್ದಾನಂತೆ ಹಾಗೂ ತಲೆನೋವಿನ ಮಾತ್ರೆ ನುಂಗಿ ಬೇರೆಯವರ ಸಂದರ್ಶನಕ್ಕೆ ಹೋದನಂತೆ).

ಸಾಹಿತಿ 5: ಅಲ್ರೀ... ಅದೇನು ಹುಚ್ಚೋ, ಬೆಪ್ಪೋ, ಶಿವಲೀಲೆನೋ ಗೊತ್ತಿಲ್ಲ. ಆ ಪುಸ್ತಕದ 'ನಕಲಿ' ಪುಸ್ತಕ ಬೇರೆ ಮಾರಾಟ ಆಗುತ್ತಿದೆಯಂತೆ. ನಮ್ಮ 'ಅಸಲಿ' ಪುಸ್ತಕಗಳು ಅದರ 'ನಕಲಿ' ಗಿಂತ ಕಡಿಮೆನಾ? ಏನೋಪ್ಪ ಅರ್ಥ ಆಗ್ತಿಲ್ಲ.

ಸಾಹಿತಿ 6 : ಮೊದಲ ಬಾರಿಗೆ ಕನ್ನಡ ಪುಸ್ತಕಕ್ಕೆ ಒಬ್ಬ 'ಪ್ರಾಯೋಜಕರು' ಸಿಕ್ಕಿದ್ದರು. ಅವರು ಪುಸ್ತಕ ಮಾರಾಟಕ್ಕೇನೋ ವ್ಯವಸ್ಥೆ ಮಾಡಿದರು. ಆದರೆ ಉದ್ದೇಶ ವಿಫಲವಾಯಿತು. ನನ್ನ ಪುಸ್ತಕದ ಬಗ್ಗೆ ಬರೀ ಸಾಹಿತ್ಯಿಕ ಚರ್ಚೆ ನಡೆದು, ಅದರ ವಿರುದ್ಧ ಪುಸ್ತಕಗಳು ಬಂದು ಅವರೂ ಲಾಭ ಮಾಡಿಕೊಂಡರು. ಒಂದು ಫತ್ವಾ ಹೊರಡಬಹುದೆಂಬ ಆಸೆ ನಿರಾಸೆಯಾಯಿತು. ನನ್ನ ದುರದೃಷ್ಟಕ್ಕೆ ಅದೇ ಸಮಯದಲ್ಲಿ ಈ ಬಸವಣ್ಣನ ಪುಸ್ತಕ ಬಂದು ನಮ್ಮದೆಲ್ಲ ಹಾಳಾಯಿತು! ಬಸವಣ್ಣನ ಪುಸ್ತಕ ಬ್ಯಾನ್ ಆಯಿತು. ನಮಗೆ ಆ ಭಾಗ್ಯವೂ ಇಲ್ಲ!

ಸಂದರ್ಶಕ : ಸಾರ್, ಹ್ಯಾರಿ ಪಾಟರ್ ಬಗ್ಗೆ ಸ್ವಲ್ಪ ಹೇಳಿ..

ಸಾಹಿತಿ : ಥತ್ ಹೋಗ್ರೀ ಸುಮ್ನೆ, ಅದೆಲ್ಲ ಬರೀ ಸುಳ್ಳು. ನಾನು ಸತ್ಯವನ್ನು ತೆಗೆದಿಡುವ ಇನ್ನಷ್ಟು ಪುಸ್ತಕ ಬರೀಬೇಕು...

(ಒಬ್ಬರ ಅಭಿಪ್ರಾಯ ಇನ್ನೊಬ್ಬರ ಹೆಸರಿನಲ್ಲಿ ಪ್ರಕಟ ಆಗಬಾರದು ಎಂಬ ಉದ್ದೇಶದಿಂದ ಸಾಹಿತಿಗಳ ಹೆಸರು ಪ್ರಕಟಿಸಿಲ್ಲ. ನೀವು ಈ ಅಭಿಪ್ರಾಯ ಈ ಸಾಹಿತಿಯದು ಎಂದುಕೊಂಡರೆ ಅದು ನಿಮ್ಮ ಕಲ್ಪನೆ ಮಾತ್ರ. ನಿಮ್ಮ ಕಲ್ಪನೆಗೆ ನಾವಾಗಲಿ ಸಂದರ್ಶಕನಾಗಲಿ ಜವಾಬ್ದಾರನಲ್ಲ ಎಂದು ಈ ಮೂಲಕ ಮತ್ತೊಮ್ಮೆ ಸ್ಪಷ್ಟಪಡಿಸುತ್ತಿದ್ದೇವೆ).

■ ವಿ.ಶ್ರೀನಿವಾಸ

ಅಲ್ಲಾಳ ದಲಿತರ ಮೇಲೆ ಹೆಚ್ಚಿದ ದೌರ್ಜನ್ಯ

ದಲಿತ ವಿರೋಧಿ ಸರ್ಕಾರ - ಅನಾಗರೀಕ ಪೊಲೀಸ್

ದಲಿತರ ಮೇಲೆ ನಿಲ್ಲದ ದೌರ್ಜನ್ಯಗಳ ವಿರುದ್ಧ ತೀವ್ರವಾಗಿ ಪ್ರತಿಭಟಿಸಲು ಜನ ಸಜ್ಜಾಗುತ್ತಿದ್ದಾರೆ. ರಕ್ಷಣೆ ನೀಡಬೇಕಾದ ಸರ್ಕಾರ, ಉಸ್ತುವಾರಿ ಸಚಿವರು ದಲಿತರನ್ನು ಶತ್ರುಗಳಂತೆಯೇ ಬೆನ್ನಟ್ಟಿದ್ದಾರೆ.



ಕೊಲೆಯಾದ ಪರಮಣ್ಣ

ಡಾ. ಅಂಬೇಡ್ಕರ್ ರವರ ಜನ್ಮದಿನವಾದ ಏಪ್ರಿಲ್ 14ರಂದು ಸುರುಪುರ ತಾಲ್ಲೂಕಿನ ಅಲ್ಲಾಳ ಗ್ರಾಮದಲ್ಲಿ ಬೋರ್‌ವೆಲ್ ಬತ್ತಿಹೋಗಿರುವುದರಿಂದ ದಲಿತರು ಬಾವಿ ನೀರು ತರಲು ಹೋದ ದಿನದಿಂದ ದಬ್ಬಾಳಿಕೆಗಳು ದಿನೇ ದಿನೇ ಹೆಚ್ಚುತ್ತಿವೆ. ಏಪ್ರಿಲ್ 15ರಂದು ಹಾಕಿದ ಸಾಮೂಹಿಕ ಬಹಿಷ್ಕಾರ ಇನ್ನೂ ಕೂಡಾ ಮುಂದುವರೆಯುತ್ತಿದೆ. ಜೂನ್ 19ರಂದು ಪರಮಣ್ಣ ಎಂಬ ದಲಿತ ರೈತನ ಕೊಲೆಯೂ ನಡೆದಿದೆ. ಇಷ್ಟೆಲ್ಲ ನಡೆದರೂ ಉಸ್ತುವಾರಿ ಸಚಿವರಿಂದ ಪ್ರೇರಿತರಾದ ಪೋಲಿಸರು ಜೂನ್ 19ರಂದು ಪರಮಣ್ಣನ ಕೊಲೆಯಿಂದ ದುಃಖಿಕ್ಕೀಡಾದ ಪರಮಣ್ಣನ ಮಕ್ಕಳನ್ನು ಒಳಗೊಂಡಂತೆ ದಲಿತರ ಮೇಲೆ ಮಾರಣಾಂತಿಕ ಹಲ್ಲೆಗಳನ್ನು ನಡೆಸಿದ್ದಾರೆ. ಪೋಲಿಸರು ಮತ್ತು ಸವರ್ಣೀಯರು ಸೇರಿ ಅಲ್ಲಿನ 18ಜನ ದಲಿತರ ಮೇಲೆ ಎಫ್.ಐ.ಆರ್.ಸಂಖ್ಯೆ 200/236/ರವರೆಗೆ 7 ಸುಳ್ಳು ಕೇಸುಗಳನ್ನು ದಾಖಲೆ ಮಾಡಿದ್ದಾರೆ. ಇದರಲ್ಲಿ ಎರಡು ಕೇಸುಗಳನ್ನು ಸ್ವತ ಪೋಲಿಸರೇ ದೂರು ನೀಡಿ ದಾಖಲೆ ಮಾಡಿಕೊಂಡಿದ್ದಾರೆ. ಒಟ್ಟಾರೆ ದೌರ್ಜನ್ಯಕ್ಕೊಳಗಾದ, ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾದ ಊರಿನ ದಲಿತ ಮುಖಂಡರ ಮೇಲೆ ಸೆಕ್ಷನ್ 307ರ ಅಡಿಯಲ್ಲಿ ಕೊಲೆ ಆರೋಪದ ದೂರನ್ನು ದಾಖಲಿಸಿದ್ದಾರೆ.

ಗುಲಬರ್ಗಾ ಜಿಲ್ಲೆಯ ಸುರಪುರ ಪಟ್ಟಣದಲ್ಲಿ ಜುಲೈ 15, 2007ರಂದು ಮೇಲ್ಜಾತಿಯವರ ಬೃಹತ್ ಮೆರವಣಿಗೆ ಮತ್ತು ಸಂಪೂರ್ಣ ಬಂದ್ ನಂತರ, ತಾಲ್ಲೂಕಿನಾದ್ಯಂತ ದಲಿತರ ಮೇಲೆ ದಾಳಿ ದಬ್ಬಾಳಿಕೆ ಹೆಚ್ಚಾಗಿದೆ. ಜುಲೈ 16ರಂದು ನಡೆದ ಸುರಪುರ ಬಂದ್‌ನ ನೇತೃತ್ವವನ್ನು ಜೆಡಿ(ಎಸ್)ನ ಜಿಲ್ಲಾ ಪಮಚಾಯತ್ ಸದಸ್ಯರಾದ ಶಂಕ್ರಣ್ಣ ಮಾಕ್ಯಾಳ ಮತ್ತು ಸುರೇಶ ಸಜ್ಜನ್ ವಹಿಸಿದ್ದರು. ಇವರಿಬ್ಬರಿಗೂ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪೂರ ಮತ್ತು ಸುರಪುರ ಶಾಸಕ ರಾಜೂಗೌಡರ ಆಶೀರ್ವಾದವಿದೆ.

ನಿಷ್ಕ್ರಿಯ ಪೊಲಿಸ್

ಸುರಪೂರ ಬಂದ್ ಆದ ದಿನ ಎರಡು ಊರುಗಳಲ್ಲಿ ದಲಿತ ಯುವಕರನ್ನು ಹಿಡಿದು ಸಾರ್ವಜನಿಕವಾಗಿ ಸವರ್ಣೀಯರು ಹಲ್ಲೆ ಮಾಡಿದ್ದಾರೆ, ನಂತರ ಜುಲೈ 21ರಂದು ಮುಬೇರಮ್ಮನ ಹಳ್ಳಿಯಲ್ಲಿ ದಲಿತ ಯುವಕರ ಮೇಲೆ ಹಲ್ಲೆಯಾಗಿದೆ.

18 ಜೂನ್, 2007ರಂದು ದಲಿತ ಪರಮಣ್ಣನ ಕೊಲೆಯಾದ ನಂತರ ಕೆಂಬಾವಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ದಲಿತರ ಮೇಲೆಯೇ ಸುಮಾರು 25 ಪ್ರಕರಣಗಳನ್ನು ದಾಖಲಿಸಲಾಗಿದೆ. ಪ್ರತಿಘಟನೆಯಲ್ಲೂ ಪೊಲೀಸರು ರಾಜಿ ಸಂಧಾನದ ಹೆಸರಿನಲ್ಲಿ ದೂರು-ಪ್ರತಿದೂರು ಪಡೆದುಕೊಂಡು ವಾತಾವರಣವನ್ನು ಇನ್ನೂ ಹದಗೆಡಿಸುತ್ತಿದ್ದಾರೆ. ದಲಿತರ ದೂರುಗಳಿಗೆ ಇಲ್ಲಿನ ಪೊಲೀಸ್ ಸ್ಟೇಷನ್ನುಗಳಲ್ಲಿ ಕಿಮ್ಮತ್ತೇ ಇಲ್ಲ.

ದಲಿತರ ಪರಮಣ್ಣನ ಕೊಲೆ ಬೆನ್ನಲ್ಲೇ ಇನ್ನೊಬ್ಬ ದಲಿತ ಯುವಕ ಚನ್ನಬಸಪ್ಪನನ್ನು ಮೇಲ್ಜಾತಿಯ 6 ಜನ ಕೂಡಿಕೊಂಡು ಜಜ್ಜಿ ಕೊಲೆ ಮಾಡಲು ಯತ್ನಿಸಿದ್ದು ಆತ ಸಾವು ಬದುಕಿನ ನಡುವೆ ಹೋರಾಡುತ್ತಿದ್ದಾನೆ. ಕೊಲೆಗೀಡಾದ ದಲಿತನ ತಾಯಿ, ತಂಗಿ ಮತ್ತು ತಮ್ಮನನ್ನು ಸಿಕ್ಕಾಪಟ್ಟೆ ಹೊಡೆಯಲಾಗಿದೆ. ಅವರೆಲ್ಲರೂ ಗುಲಬರ್ಗಾದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಈ ಎಲ್ಲಾ ಘಟನಾವಳಿಗಳನ್ನು ಗಮನಿಸಿದರೆ, ಸುರಪೂರ ಶಹಾಪೂರಿನಲ್ಲಿ, ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಸರಮಾಲೆಯ ಹಿಂದೆ ಒಂದು ಯೋಜನಾಬದ್ಧವಾದ ಪಿತೂರಿ ಇದೆ ಎಂದು ಭಾಸವಾಗುತ್ತಿದೆ. 2002ರ ಗುಜರಾತ್‌ನಲ್ಲಿ ನಡೆದ ಅಲ್ಪಸಂಖ್ಯಾತರ ಮಾರಣಹೋಮ ನಡೆದಾಗ ಅಲ್ಲಿನ ಪೊಲೀಸರು ಆರ್‌ಎಸ್‌ಎಸ್‌ನ ಸದಸ್ಯರಂತೆ ವರ್ತಿಸಿದಂತೆ ಸುರಪೂರ, ಶಹಪೂರಗಳಲ್ಲಿನ ಪೊಲೀಸರು ಮೇಲ್ಜಾತಿಯವರ ಸಂಘಟನೆಯ ಸದಸ್ಯರಂತೆ, ಜೆಡಿ(ಎಸ್) ಮಂತ್ರಿಯ ಸೇವಕರಂತೆ ವರ್ತಿಸುತ್ತಿದ್ದಾರೆ.

ಇನ್ನೊಂದು ಸೋಜಿಗದ ಸಂಗತಿ ಎಮದರೆ, ದಲಿತ ಇಷ್ಟೆಲ್ಲಾ ಅನಾಗರಿಕ ಕೃತ್ಯಗಳಿಗೆ ಒಳಪಡಿಸಿದರು, ಇಲ್ಲಿಯವರೆಗೆ ಜಿಲ್ಲೆಯ ಯಾವುದೇ ಬಂಡವಾಳಶಾಹಿ ಪಕ್ಷಗಳಾಗಲಿ, (ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್), ಜೆಡಿಯು ರಾಜ್ಯಮಟ್ಟದ ಅಥವಾ ಜಿಲ್ಲಾಮಟ್ಟದ ಕೆಲವು ಮುಖಂಡರಾಗಲಿ ಸುರಪೂರ, ಶಹಾಪೂರ ದಲಿತರ ಪರವಾಗಿ ಒಂದು ಹೇಳಿಕೆ ಕೂಡಾ ನೀಡದೇ ಇರುವುದು ರಾಜ್ಯ ಮತ್ತು ಜಿಲ್ಲೆಯ ರಾಜಕೀಯ ಪೊಳ್ಳುಗಾರಿಕೆಗೆ ಕನ್ನಡಿ ಹಿಡಿದಂತಾಗಿದೆ.

ಸುರಪುರ ಶಹಾಪೂರದಲ್ಲಿ ಅಲ್ಲಿನ ಪೊಲೀಸರು ವಹಿಸಿರುವ ದಲಿತ ವಿರೋಧಿ ನಿಲುವಿನ ವಿರುದ್ಧ



ಗುಲ್ಬರ್ಗಾಜೈಜೆಪಿ ಕಛೇರಿ ಎದುರಿಗೆ, ಸಿ.ಪಿ.ಐ(ಎಂ) ಮತ್ತು ಸೂರಪುರ, ಶಹಾಪೂರಿನ ಸಂಘಟನೆಗಳು ದಲಿತ ಯುವಕರು ಕೂಡಿ 31.7.07ರಂದು ಒಂದು ದಿನದ ಧರಣಿ ಕಾರ್ಯಕ್ರಮ ಹಾಕಿಕೊಂಡಿದ್ದಾರೆ.

ವರದಿ : **ಗಂಗಾ**

ದಲಿತರ ದೌರ್ಜನ್ಯಕ್ಕೆ ಸರ್ಕಾರದ ಕುಮ್ಮಕ್ಕು

ದೌರ್ಜನ್ಯಗಳನ್ನು ಖಂಡಿಸಿರುವ ಸಿಪಿಐ(ಎಂ) ಪಕ್ಷವು ಅದನ್ನು ನಿಲ್ಲಿಸಲು ದಬ್ಬಾಳಿಕೆ ನಡೆಸುವ ಭೂಮಾಲೀಕ ಮೇಲ್ಜಾತಿಗಳ ಮೇಲೆ ಕ್ರಮ ಜರುಗಿಸಲು ಸಿಪಿಐ(ಎಂ) ನಾಯಕರಾದ ಮಾರುತಿ ಮಾನ್ಪಡೆ, ಜಿ.ಎನ್.ನಾಗರಾಜ್ ಬೆಂಗಳೂರಿನ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು. ಮತ್ತು ಈ ಬೇಡಿಕೆಗಳನ್ನು ಮಂಡಿಸಲಾಗಿದೆ

1. ಪರಮಣ್ಣನ ಕೊಲೆ ಆರೋಪಿಗಳನ್ನು ಬಂಧಿಸಬೇಕು
2. ಈ ಎಲ್ಲಾ ಅನಾಹುತಗಳಿಗೆ ಕಾರಣರಾದ ಕೆಂಬಾವಿ ಠಾಣೆಯ ಪೋಲಿಸ್ ಸಬ್ ಇನ್‌ಸ್ಪೆಕ್ಟರ‌ರಾಗಿದ್ದ ಪ್ರಭುಗೌಡರವರನ್ನು ಅಮಾನತ್ತುಗೊಳಿಸಬೇಕು
3. ಸಾಮಾಜಿಕ ಬಹಿಷ್ಕಾರ ವಾಪಾಸು ಪಡೆಯಬೇಕು.
4. ಕಷ್ಟಕ್ಕೊಳಗಾದ ದಲಿತ ಕುಟುಂಬಗಳಿಗೆ ಪರಿಹಾರ ನೀಡಬೇಕು.
5. ಸುಳ್ಳು ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಬೇಕು. ಅಮಾಯಕರನ್ನು ಬಂಧಿಸುವುದನ್ನು ನಿಲ್ಲಿಸಬೇಕು.



ಎಸ್‌ಇಝಡ್ : ರೈತರಿಂದ ವ್ಯಾಪಕ ವಿರೋಧ

ಕೈಗಾರಿಕರಣದ ಹೆಸರಿನಲ್ಲಿ ನಂದಗುಡಿಯ ಫಲವತ್ತಾದ 18000 ಎಕರೆ ಭೂಮಿಯನ್ನು ಕೇಂದ್ರ-ರಾಜ್ಯ ಸರ್ಕಾರಗಳೆರಡು ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡಹೊರಟಿರುವುದನ್ನು ವಿರೋಧಿಸಿ ನಂದಗುಡಿ ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿಯಡಿಯಲ್ಲಿ ನಂದಗುಡಿಯ ಸುಮಾರು 36 ಗ್ರಾಮಗಳ ರೈತರು, ಕೃಷಿ ಕಾರ್ಮಿಕರು ಮತ್ತು ವಿವಿಧ ಸಂಘಟನೆಗಳು ಜುಲೈ 25, 2007ರಂದು ರಾಜ್ಯಭವನ ಛಲೋ ಕೈಗೊಂಡಿದ್ದವು.

ನಂದಗುಡಿ ಹೋಬಳಿಯಲ್ಲಿ ಎಸ್.ಇ.ಝಡ್ ಹಾಗೂ ಉಪನಗರ ಸ್ಥಾಪನೆಯನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಬೇಕು. ಕೃಷಿಯನ್ನೇ ಅವಲಂಬಿಸಿ ಬದುಕುತ್ತಿರುವ ರೈತರನ್ನು ಒಕ್ಕಲೆಬ್ಬಿಸುವುದನ್ನು ಕೈಬಿಡಬೇಕು. ರೈತರ, ಕಾರ್ಮಿಕರ ಹಕ್ಕುಗಳನ್ನು ದಮನ ಮಾಡುವ ನೀತಿಯನ್ನು ಸರ್ಕಾರ ಜಾರಿ ಮಾಡಬಾರದೆಂದು ನೂರಾರು ಸಂಖ್ಯೆಯಲ್ಲಿ ಸೇರಿದ ರೈತರು ಮಹಾತ್ಮಗಾಂಧಿ ಪ್ರತಿಮೆ ಬಳಿ ಭಾರಿ ಪ್ರತಿಭಟನೆ ಮಾಡಿದರು.

ಇದೇ ವೇಳೆ ಸಂಯುಕ್ತ ಜನತಾದಳದ ರಾಜ್ಯಾಧ್ಯಕ್ಷ, ನಂದಗುಡಿ ಹೋರಾಟ ಸಮಿತಿ ಮುಖಂಡ ಬಿ.ಸೋಮಶೇಖರ ಮಾತನಾಡಿ, ರೈತರಿಗೆ ಬೆನ್ನೆಲುಬಾದ ಭೂಮಿಯನ್ನು ಕಿತ್ತುಕೊಳ್ಳುವುದು ಅಕ್ಷಮ್ಯ ಅಪರಾಧ. ಅಭಿವೃದ್ಧಿಯ ನೆಪದಲ್ಲಿ ರೈತರ ಮೇಲೆ ಬಡವರ ಮೇಲೆ ಆಕ್ರಮಣ ಮಾಡಿ ಭೂಮಿಯನ್ನು ವಶಪಡಿಸಿಕೊಳ್ಳುವ ನೀತಿಯನ್ನು ಸರ್ಕಾರ ಹಿಂತೆಗೆದುಕೊಳ್ಳಬೇಕೆಂದರು.

ಕೃಷಿಯೋಗ್ಯ ಭೂಮಿಯನ್ನು ವಿದೇಶಿ ಕಂಪನಿಗಳಿಗೆ ನೀಡಿ, ರೈತರ ಹಿತ ಕಾಪಾಡುತ್ತೇವೆ ಎನ್ನುವ ಸರ್ಕಾರಕ್ಕೆ ನೈತಿಕ ಹಕ್ಕಿಲ್ಲ. ಕಾರ್ಮಿಕ ಹಕ್ಕುಗಳನ್ನು ಧಮನ ಮಾಡುವ, ಸರ್ಕಾರದ ಬೊಕ್ಕಸಕ್ಕೆ ತೀವ್ರ ನಷ್ಟ ಮಾಡುವ ಈ ನೀತಿ ಬೇಡವೇ ಬೇಡವೆಂದು ರೈತ ಮುಖಂಡರಾದ, ರಾಧಾಕೃಷ್ಣ, ಅದೀಪ್ ಖಾನ್, ಹೆಚ್.ಎಸ್.ಕೆಂಪೇಗೌಡ ಆಗ್ರಹಿಸಿದರು.

ಸಿ.ಪಿ.ಎಂ.ನ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ, ಕೃಷಿಯೋಗ್ಯಭೂಮಿ ಬದಲು ಕೃಷಿಗೆ ಯೋಗ್ಯವಲ್ಲದ ಭೂಮಿಯಲ್ಲಿ ಎಸ್‌ಇಝಡ್ ಸ್ಥಾಪನೆಯಾದರೆ ಒಳಿತು ಎಂದರು.

ಪ್ರಾಣ ಕೊಟ್ಟೇವು ಭೂಮಿ ಬಿಡುವುದಿಲ್ಲ : ನಾವು ಬಡಜನ, ನಮಗಿರುವ ತುಂಡುಭೂಮಿಯನ್ನು ನಮ್ಮಿಂದ ಕಿತ್ತುಕೊಳ್ಳಬೇಡಿ. ನಾವು ಪ್ರಾಣ ಒತ್ತೆ ಇಡುತ್ತೇವೆ. ಭೂಮಿಯನ್ನು ಬಿಡುವುದಿಲ್ಲ ಎಂದು ನಂದಗುಡಿಯ ಹಾಗೂ ರಾಮ ಗೋವಿಂದಪುರದ ರೈತರಾದ ಮುನಿರಾಮಪ್ಪ ಹಾಗೂ ಎಸ್.ಪಿ.ರೇವಪ್ಪ ತಮ್ಮ ಅಳಲು ತೋಡಿಕೊಂಡರು.

ರೈತ ಮುಖಂಡರಾದ ಎಚ್.ಕೆ.ನಾರಾಯಣಗೌಡ, ಲಕ್ಷ್ಮೀಶ, ದೇವೇಗೌಡ, ಸಿ.ಪಿ.ಐ.ನ ಸಿದ್ಧನಗೌಡ ಪಾಟೀಲ, ಬಾಗೇಪಲ್ಲಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ, ಕೆ:ಪ್ರಕಾಶ ಇನ್ನಿತರರು ಭಾಗವಹಿಸಿ ಮಾತನಾಡಿದರು.

■ ಗವಿಸಿದ್ಧ ಬಿ.ಹೊಸಮನಿ

ಎಪಿಎಂಸಿ ಕಾಯ್ದೆ ತಿದ್ದು ಪಡಿ ವಿರೋಧಿಸಿ ಆಗಸ್ಟ್ 3ರಿಂದ ಅನಿರ್ಧಿಷ್ಟಾವದಿ ಮುಷ್ಕರ

ಎಪಿಎಂಸಿ ಕಾಯ್ದೆ ತಿದ್ದುಪಡಿ ವಿರೋಧಿಸಿ ಕೂಡಲೇ ಅದನ್ನು ಹಿಂತೆಗೆಯಬೇಕೆಂದು ಸರ್ಕಾರವನ್ನು ಒತ್ತಾಯಿಸಿ ಕರ್ನಾಟಕ ರಾಜ್ಯದಾದ್ಯಂತ ಆಗಸ್ಟ್ 3ರಿಂದ ಅನಿರ್ಧಿಷ್ಟಾವಧಿಗೆ ಮಾರುಕಟ್ಟೆ ಬಂದ್ ನಡೆಸಲು ಕರ್ನಾಟಕ ರಾಜ್ಯ ಛೇಂಬರ್ ಆಫ್ ಕಾಮರ್ಸ್, ಎಪಿಎಂಸಿ ವರ್ತಕರ ಸಂಘ, ತರಕಾರಿ ಹಣ್ಣು ದವಸ ದಾನ್ಯಗಳ ವ್ಯಾಪಾರಿಗಳ ಸಂಘಗಳು ನಿರ್ಧರಿಸಿವೆ. ಈ ಬಂದ್ ಕರೆಗೆ ಕರ್ನಾಟಕ ಪ್ರಾಂತ ರೈತ ಸಂಘ, ಕ.ಪ್ರಾ.ಕೃಷಿ ಕೂಲಿಕಾರರ ಸಂಘ, ಹಮಾಲರ ಸಂಘ(ಸಿಐಟಿಯು), ಮತ್ತು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಸಕ್ರಿಯವಾಗಿ ಬೇಂಬಲಿಸಲು ತೀರ್ಮಾನಿಸಿವೆ.

ಮಾಧ್ಯಮಗಳ ಮೇಲೆ ದಾಳಿ ಹೆಚ್ಚುತ್ತಿವೆ ಏಕೆ?


ಮಂಗಳೂರಿನಲ್ಲಿ ಮಾಧ್ಯಮಗಳ ಮೇಲಿನ ದಾಳಿ ಮತ್ತೆ ಮುಂದುವರಿದಿದೆ. ಕಳೆದ ಭಾನುವಾರ ರಾತ್ರಿ ಟಿ.ವಿ.9 ಕಛೇರಿಯ ಮೇಲೆ ನಡೆದಿರುವ ದಾಳಿ ಕರಾವಳಿಯಲ್ಲಿ ಜನರ, ನಿರ್ಭೀತ ಮಾಧ್ಯಮಗಳಿಗೆ ರಕ್ಷಣೆಯಿಲ್ಲ ಮತ್ತೊಮ್ಮೆ ಸಾಬೀತಾಯಿತು.

ಟಿ.ವಿ.9 ನಲ್ಲಿ ಕಳೆದ ವಾರ ಮಂಗಳೂರಿನಲ್ಲಿ ಬಿಸಿ ಬಿಸಿ ಚರ್ಚೆಗೆ ಕಾರಣವಾಗಿದ್ದ 'ಮುಂಗಾರು ಮಳೆ' ಹೆಸರಿನ ಸೆಕ್ಸ್ ಸಿಡಿಯ ಬಗ್ಗೆ ಕಾರ್ಯಕ್ರಮ ಬಿತ್ತರವಾಗಿತ್ತು. ಆ ಮುಖಾಂತರ ಮಂಗಳೂರಿನಲ್ಲಿ ಸಕ್ರಿಯವಾಗಿರುವ ಬ್ಲೂ ಫಿಲಂ ಮಾಫಿಯಾವನ್ನು ಬಯಲಿಗೆಳೆಯುವ ಪ್ರಯತ್ನವನ್ನು ಟಿ.ವಿ.9 ಮಾಡಿತು. ಈ ಕಾರ್ಯಕ್ರಮ ಬಿತ್ತರವಾದ ಎರಡೇ ದಿನದಲ್ಲಿ ಈ ದಾಳಿ ನಡೆದಿದೆ. ಬ್ಲೂಫಿಲಂ ಮಾಫಿಯಾ ಈ ದಾಳಿಯ ಹಿಂದೆ ಇದೆ ಎನ್ನಲಾಗಿದೆ.

ವ್ಯಾಪಕ ಖಂಡನೆ

ದಾಳಿ ನಡೆದ ತಕ್ಷಣವೇ ಜಿಲ್ಲೆಯಾದ್ಯಂತ ವ್ಯಾಪಕ ಖಂಡನೆ ವ್ಯಕ್ತವಾಯಿತು. ಮರುದಿನ ಮುಂಜಾನೆಯಿಂದಲೇ ನಗರದಾದ್ಯಂತ ಪ್ರತಿಭಟನೆಗಳು ನಡೆದವು. ತಿಂಗಳುಗಳ ಹಿಂದೆ ಕರಾವಳಿ ಅಲೆ ಕಛೇರಿ ಧ್ವಂಸ, ಮಧ್ಯರಾತ್ರಿ ಬಿ.ವಿ.ಸೀ. ದಂಪತಿಗಳ ಬಂಧನವಾದಾಗ ದಾಳಿಯ ಹಿಂದಿರುವ ಬಲಾಢ್ಯ ಶಕ್ತಿಗಳನ್ನು ಎದುರು ಹಾಕಿಕೊಳ್ಳಲು ತಯಾರಿರದೇ ಇತ್ತ ಕರಾವಳಿ ಮಲೆನಾಡಿನ ಪ್ರಭಾವಿ ಪತ್ರಿಕಾ ಸಮೂಹವಾದ ಕರಾವಳಿ ಅಲೆಯಲ್ಲಿ ಮುಂದಕ್ಕೆ ಎಲ್ಲಿ ತಮಗೆ ಪ್ರಚಾರ ತಪ್ಪುತ್ತದೋ ಎನ್ನುವ ಭಯದಲ್ಲಿ ಕತ್ತಲಲ್ಲಿ ಗುಪ್ತವಾಗಿ ಬಿ.ವಿ.ಸೀ. ಯವರನ್ನು ಭೇಟಿ ಮಾಡಿ ಬಹಿರಂಗದಲ್ಲಿ ಪ್ರತಿಭಟನೆಯಲ್ಲಿ ಭಾಗವಹಿಸದೇ ಇದ್ದ ಘಟಾನುಘಟಿ ನಾಯಕರೆಲ್ಲ ಟಿ.ವಿ.9 ವಿಷಯದಲ್ಲಿ ಮುಂಜಾನೆಯಿಂದಲೇ ಬೀದಿಗಿಳಿದು ಪ್ರತಿಭಟನೆಯಲ್ಲಿ ತೊಡಗಿದರು. ಟಿ.ವಿ.9 ನಲ್ಲಿ ಮುಖ ತೋರಿಸಲು ಪೈಪೋಟಿಯೇ ನಡೆಯಿತು.

ಟಿ.ವಿ.9 ಮೇಲಿನ ದಾಳಿಯನ್ನು ವಿರೋಧಿಸಿ ಈಗ ನಡೆಯುತ್ತಿರುವ ಹೋರಾಟ ನಿಜವಾಗಿಯೂ ನಿರ್ಭೀತ ಮಾಧ್ಯಮ ಮಂದಿಯ ನೈತಿಕ ಸ್ಥೈರ್ಯವನ್ನು ಹೆಚ್ಚಿಸುವಂತಹದ್ದೇ. ಆ ಮಟ್ಟಿಗೆ ಮಂಗಳೂರಿನ ನಾಗರೀಕರು, ಸಂಘಟನೆಗಳು, ರಾಜಕೀಯ ನಾಯಕರು ಅಭಿನಂದನೀಯರು.



ಮಂಗಳೂರಿನಲ್ಲಿ ಎಸ್‌ಎಫ್ಐ-ಡಿವೈಎಫ್ಐ-ಜೆಎಂಎಸ್‌ಗಳ ಪ್ರತಿಭಟನೆ

ಆದರೆ ಅಂದು ಕರಾವಳಿ ಅಲೆಯ ಮೇಲಿನ ದಾಳಿಯ ಸಂದರ್ಭದಲ್ಲಿ ಈಗ ನಡೆಯುತ್ತಿರುವ ಪ್ರತಿಭಟನೆಯ ಅರ್ಧದಷ್ಟಾದರೂ ನಡೆಯುತ್ತಿದ್ದರೆ ಇಂದು ಟಿ.ವಿ.9 ಮೇಲೆ ದಾಳಿ ನಡೆಸಲು ದುಷ್ಕರ್ಮಿಗಳಿಗೆ ಧೈರ್ಯ ಸಾಲುತ್ತಿರಲಿಲ್ಲ. ಆ ಸಂದರ್ಭದಲ್ಲಿ ಸಿಪಿಐ(ಎಂ) ಮತ್ತದರ ಸಾಮೂಹಿಕ ಸಂಘಟನೆಗಳು ಮಾತ್ರ ಪ್ರಬಲ ಪ್ರತಿಭಟನೆ ನಡೆಸಿದ್ದವು.

ಪೊಲೀಸ್ ನಿಷ್ಕ್ರಿಯತೆ

ಒಟ್ಟಾರೆಯಾಗಿ ಮಾಧ್ಯಮದ ಮೇಲಿನ ದಾಳಿ ಕರಾವಳಿಯಲ್ಲಿ ಮುಂದುವರೆಯಲು ಪೊಲೀಸರ ನಿಷ್ಕ್ರಿಯತೆ ವಿವಿಧ ಮಾಫಿಯಾಗಳೊಂದಿಗಿನ ಶಾಮೀಲಾತಿಯೇ ಮೂಲ ಕಾರಣ. ಕರಾವಳಿ ಅಲೆಯ ಕಛೇರಿ ಮೇಲಿನ ದಾಳಿಯ ಆರೋಪಿಗಳ ಬಂಧನ ಇನ್ನು ಆಗಿಲ್ಲ. ನಾಗರಾಜಶೆಟ್ಟರು ಉಸ್ತುವಾರಿಯಾಗಿ ಇರುವವರೆಗೆ ಇದನ್ನು ನಿರೀಕ್ಷಿಸುವುದು ತಪ್ಪು.

ಅಂದ ಹಾಗೆ ಕೊನೆಯಕ್ಷಣದ ಲೇಟೆಸ್ಟ್ ಸುದ್ದಿ ಟಿ.ವಿ.9 ದಾಳಿಯ ಆರೋಪಿ ಲಲಿತಾ ರಾವ್ ನಾಗರಾಜಶೆಟ್ಟಿಯ ಆತ್ಮೀಯನಂತೆ. ಹಿರಿಯ ಅಧಿಕಾರಿಗಳಲ್ಲಿ ಈಗಾಗಲೇ ಲಲಿತಾ ರಾವ್ ಅಂತ ದೊಡ್ಡ ತಪ್ಪೇನು ಮಾಡಿಲ್ಲ ಅಂತ ಉಸ್ತುವಾರಿ ನಾಗರಾಜಶೆಟ್ಟಿ ಹೇಳಿದ್ದಾರಂತೆ. ಕರಾವಳಿಯನ್ನು ರಕ್ಷಿಸುವವರು ಯಾರು?

ರಕ್ಷಣಾ ವೇದಿಕೆಯ 'ಓರಾಟ'

ಟಿ.ವಿ.9 ಮೇಲೆ ದಾಳಿಯಾದದ್ದೇ ಹಬ್ಬದೂಟ ದೊರೆತಂತೆ ವರ್ತಿಸಿದ್ದು ಮಂಗಳೂರಿನ ಕರ್ನಾಟಕ ರಕ್ಷಣಾ ವೇದಿಕೆ. ಧರ್ಮದ ಹೆಸರಿನಲ್ಲಿ ಕಾರ್ಯಾಚರಿಸುವ ವೇದಿಕೆ, ದಳ ಸೇನೆಗಳ ಕಾರ್ಯಾಚರಣೆಗಳಿಂದ ಬಸವಳಿದಿರುವ ಕರಾವಳಿಯಲ್ಲಿ ರಕ್ಷಣಾ ವೇದಿಕೆ ಆರಂಭವಾಗಿದೆ.

ಮಂಗಳೂರಿನಲ್ಲಿ ಸರಿಯಾಗಿ 15 ಜನರೂ ಇಲ್ಲದ ಈ ವೇದಿಕೆ ಬೆಂಗಳೂರಿನಲ್ಲಿ ರಕ್ಷಣಾ ವೇದಿಕೆ ನಡೆಸುತ್ತಿರುವ 'ಓರಾಟ' ರೀತಿಯ ವ್ಯವಹಾರ ಮಂಗಳೂರಿನಲ್ಲಿ ಆರಂಭಿಸಲು ಸಮಯ ಕಾಯುತ್ತಿತ್ತು. ಟಿ.ವಿ.9 ದಾಳಿ ನಡೆದ ತಕ್ಷಣವೇ ಸ್ವರ್ಗವೇ ಧರೆಗಿಳಿದ ರೀತಿ ವರ್ತಿಸಿದ 'ಕನ್ನಡ ರಕ್ಷಕರು' ತಮ್ಮ 15 ಜನರನ್ನು ಹಿಡಿದು ರಸ್ತೆ ತಡೆ, ಪ್ರತಿಕೃತಿ ದಹನ ನಡೆಸಿದರು. ರಾತ್ರಿಯಾಗುವಾಗ ಪ್ರತಿಭಟನೆಗಳ ತೀವ್ರತೆಯನ್ನು ಮನಗಂಡು ಮರು ದಿವಸ ಮಂಗಳೂರು ಬಂದ್‌ಗೆ ಏಕಾಏಕಿ ಕರೆ ನೀಡಿದರು. ಈ ಕರೆಗೆ ಧರ್ಮದ ಹೆಸರಿನ ದಳ-ಸೇನೆಗಳ ಬೆಂಬಲ ಪಡಕೊಂಡರು. ಟಿ.ವಿ. 9 ಈ ಬಂದ್‌ಗೆ ವ್ಯಾಪಕ ಪ್ರಚಾರ ನೀಡಿತು.

ಧರ್ಮದ ಹೆಸರಿನ ದಳ, ಸೇನೆಗಳ ಬಂದ್, ಕಾರ್ಯಾಚರಣೆಗಳಿಂದ ಬೇಸತ್ತಿರುವ ಮಂಗಳೂರಿನ ಜನ ಈ ಬಂದ್ ಕರೆಯನ್ನು ಕಣ್ಣೆತ್ತಿಯೂ ನೋಡಲಿಲ್ಲ. ಬಂದ್ ಸಂಪೂರ್ಣ ವಿಫಲವಾದಾಗ ಇಂಗುತಿಂದ ಮಂಗನಂತಾದ ಈ 'ಕರವೇ' ಮಧ್ಯಾಹ್ನದ ಹೊತ್ತಿಗೆ ಬಂಧಿಸಿರುವ ಆರೋಪಿಯನ್ನು ಸಾರ್ವಜನಿಕವಾಗಿ ತೋರಿಸಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟು ಕದ್ರಿ ಠಾಣೆಗೆ ಮುತ್ತಿಗೆ-ಇದಕ್ಕೆ ಎಲ್ಲಾ ಸಂಘಟನೆಗಳ ಬೆಂಬಲವಿದೆ ಎಂಬ ವರಾತ ಶುರು ಹಚ್ಚಿಕೊಂಡಿತು. ಆದರೆ ಈ ಕಾರ್ಯಕ್ರಮ ಜನರೆ ಇಲ್ಲದೆ ರದ್ದುಗೊಂಡಿತು. ಕರವೇ ಜೊತೆ ಟಿ.ವಿ.9 ಕೂಡಾ ಮುಖಭಂಗಕ್ಕೊಳಗಾಯಿತು.

ಈ ಪ್ರಕರಣವನ್ನು ಬಳಸಿಕೊಂಡು ಮಂಗಳೂರನ್ನು 'ಆಳುವ' ಕನಸು ಕಂಡಿದ್ದ ಕರವೇ ಈಗ ಮಂಗಳೂರಿನಲ್ಲಿ ಹಾಸ್ಯದ ವಸ್ತುವಾಗಿದೆ. ಇವರ ಮಂಗಾಟಗಳಿಗೆ ವ್ಯಾಪಕ ಪ್ರಚಾರ ನೀಡಿದ ಟಿವಿ9 ಸುಸ್ತು ಹೊಡೆದಿದೆ.

ಇನ್ನಾದರೂ ಟಿ.ವಿ.9 ಕರ್ನಾಟಕ ಅಂದರೆ ಕರ್ನಾಟಕ ರಕ್ಷಣಾ ವೇದಿಕೆ ಮಾತ್ರ ಅಲ್ಲ ಎಂಬುದನ್ನು ಅರ್ಥ ಮಾಡಿಕೊಂಡರೆ ಒಳಿತು.

- ಮುನೀರ್ ಕಾಟಿಪಳ್ಳ

ಕಿವುಡು, ಕುರುಡು ಸರ್ಕಾರದ ನಿರ್ಲಕ್ಷ್ಯಕ್ಕೆ ಅಕ್ಷರ ದಾಸೋಹ ನೌಕರರ ಪ್ರತಿಭಟನೆ

ಅಕ್ಷರದಾಸೋಹ ಯೋಜನೆಯುನ್ನು ಖಾಸಗೀಕರಣಗೊಳಿಸಿರುವುದನ್ನು ವಿರೋಧಿಸುವುದು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ಅಕ್ಷರದಾಸೋಹ ನೌಕರರ ಸಂಘ (ಸಿಐಟಿಯು) ಜುಲೈ 25ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನಾ ರ್‍ಯಾಲಿಯನ್ನು ನಡೆಸಿತು.

ಬೆಂಗಳೂರು ರೈಲ್ವೆ ನಿಲ್ದಾಣದಿಂದ ಆರಂಭವಾದ ಈ ಮೆರವಣಿಗೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಸಂಘದ ಸಾವಿರಾರು ಸದಸ್ಯರು ಪಾಲ್ಗೊಂಡಿದ್ದರು. ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ, ಯೋಜನೆಯನ್ನು ಖಾಸಗೀಕರಣಗೊಳಿಸಬಾರದು ಎಂದು ಘೋಷಣೆ ಕೂಗುತ್ತಾ ಬನ್ನಪ್ಪ ಪಾರ್ಕ್ ಬಳಿ ಧರಣಿ ನಡೆಸಿದರು.



ಜೊತೆಗೆ ಈಗಾಗಲೇ ಖಾಸಗೀಕರಿಸಿರುವ ಶಾಲೆಗಳನ್ನು ವಾಪಸ್ಸು ಪಡೆಯುವುದು. ನೌಕರರಿಗೆ 2006ರ ಒಪ್ಪಂದದಂತೆ ಸಂಬಳ ಹೆಚ್ಚಳ, ಹೆರಿಗೆ ಭತ್ಯೆ, ಅಫಘಾತ ವಿಮೆ ಜಾರಿಗೆ ತರುವುದು. ನೌಕರರ ಹೆಸರಿನ ಬ್ಯಾಂಕ್ ಖಾತೆಗೆ ಅವರ ಸಂಬಳ ಜಮಾವಣೆ ಆಗಬೇಕು, ಈ ಯೋಜನೆಯನ್ನು ಶಿಕ್ಷಣ ಇಲಾಖೆಯಡಿಯಲ್ಲಿ ತರುವುದು, ಶಾಲೆಗಳಲ್ಲಿ ಪ್ರತ್ಯೇಕ ಅಡುಗೆ ಮನೆ ಇವು ಇತರೆ ಬೇಡಿಕೆಗಳಾಗಿವೆ. ಇವು ಈಡೇರಬೇಕೆಂಬ ಉದ್ದೇಶದಿಂದ ಈ ರ್‍ಯಾಲಿಯನ್ನು ನಡೆಸಲಾಯಿತು.

ಈ ರ್‍ಯಾಲಿಯಲ್ಲಿ ಯೋಜನೆಯುನ್ನು ಖಾಸಗೀಕರಣ ಮಾಡಬಾರದು. ಕಳಪೆ ರೇಷನ್ ಕೊಟ್ಟು ನಮ್ಮ ಹಳ್ಳಿಗಳ ಬಡಮಕ್ಕಳಿಗೆ ಕಳಪೆ ಊಟ ನೀಡುತ್ತಿದ್ದಾರೆ. ಇವೆಲ್ಲವನ್ನು ಸರ್ಕಾರ ತಡೆಯಬೇಕು. ಈ ಎಲ್ಲಾ ಬೇಡಿಕೆಗಳು ಈಡೇರುವವರೆಗೂ ಈ ಹೋರಾಟ ಮುಂದುವರಿಯುತ್ತದೆ ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ರಾಜ್ಯಾಧ್ಯಕ್ಷ ನಿತ್ಯಾನಂದಸ್ವಾಮಿ ತಿಳಿಸಿದರು.

ಈಗಾಗಲೇ ಖಾಸಗೀಕರಣ ವಿರುದ್ಧ ಎರಡು ಮೂರು ಬಾರಿ ಹೋರಾಟಗಳು ನಡೆದರೂ ಸಹ ಸರ್ಕಾರ ಇದಕ್ಕೆ ಯಾವುದೇ ಬೆಲೆ ನೀಡಿಲ್ಲ, ಖಾಸಗೀಕರಣ, ಜಾಗತೀಕರಣ ಎಂಬುವುದು ನಮ್ಮ ಜನಸಾಮಾನ್ಯರ ಬದುಕನ್ನು ಬರಡು ಮಾಡುವುದಾಗಿದೆ. ಇದರಿಂದ ಇಷ್ಟೆಲ್ಲಾ ಸಮಸ್ಯೆಗಳಿವೆ ಎಂಬುದು ಸರ್ಕಾರಕ್ಕೆ ತಿಳಿದಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲ. ಇದೊಂದು ಕಿವುಡು, ಕುರುಡು ಸರ್ಕಾರ ಎಂದು ಸರ್ಕಾರದ ನಿರ್ಲಕ್ಷ್ಯವನ್ನು ಉಗ್ರವಾಗಿ ಖಂಡಿಸಿದರು.

ಈ ಯೋಜನೆಯನ್ನು ಇಸ್ಕಾನ್‌ನಂತಹ ಖಾಸಗೀಯವರಿಗೆ ನೀಡಿದರೆ, ಅದು ಮೇಲ್ಜಾತಿಯ ಆಹಾರಪದ್ಧತಿ ಅಳವಡಿಸಿ ಆಹಾರಪದ್ಧತಿಯಲ್ಲೂ ಜಾತಿಪದ್ಧತಿ ಮೆರೆಯುವಂತೆ ಮಾಡುತ್ತದೆ. ಇದರಿಂದ ಇಲ್ಲಿ ಕೆಲಸ ಮಾಡುವ ಹಿಂದುಳಿದ ಜಾತಿಯ ಜನತೆ ಕೆಲಸ ಕಳೆದುಕೊಳ್ಳುವ ಸಂದರ್ಭ ಹೆಚ್ಚಿದೆ. ಆದ್ದರಿಂದ ಖಾಸಗೀಕರಣವನ್ನು ಕೂಡಲೇ ನಿಲ್ಲಿಸಬೇಕು. ಹಿಂದು, ಮುಸ್ಲಿಂ ಕ್ರೈಸ್ತ ಹಾಗೂ ದಲಿತ, ಹಿಂದುಳಿದ ಎಂಬ ಬೇಧಭಾವವಿಲ್ಲದೆ ಎಲ್ಲರೂ ಹೋರಾಟಕ್ಕೆ ಬಂದಿರುವುದು ನಿಜಕ್ಕೂ ಸಂತೋಷದ ವಿಷಯ. ಇದರಿಂದ ಜಾತಿ ವ್ಯವಸ್ಥೆಯನ್ನು ಬಗ್ಗು ಬಡೆಯುವಂತಾಗಿದೆ ಎಂದು ಅವರು ನುಡಿದರು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ವಿ.ಜೆ.ಕೆ.ನಾಯರ್, ಪ್ರಸನ್ನಕುಮಾರ್, ಎಸ್.ವರಲಕ್ಷ್ಮಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಮುಂತಾದವರು ಈ ಸಂದರ್ಭದಲ್ಲಿ ಮಾತನಾಡಿ ಹೋರಾಟಕ್ಕೆ ಬೆಂಬಲ ನೀಡಿದರು.

○ ಪಿ.ಎನ್. ಶ್ರೀರಂಗ

'ಬಿಸಿಯೂಟ ಯೋಜನೇನ ಖಾಸಗೀಕರಣ ಗೊಳಿಸಬಾರದು, ಕೆಲಸ ಖಾಯಂ ಗೊಳಿಸೋತನಕ ಕನಿಷ್ಠ ವೇತನ ಕೊಡಬೇಕು. ಎಸ್‌ಡಿಎಂಸಿ ಜೊತೆಗೆ ಜಂಟಿ ಖಾತೆ ಇರಬಾರದು. ಐದು ವರ್ಷದಿಂದ ಈಗಿನವರೆಗೂ 650 ರೂಪಾಯಿ ಸಂಬಳ ಬರ್‌ತಾ ಇದೆ. ಅರಿಯರ್ಸ್ ಕೂಡ ಬಿಡುಗಡೆ ಆಗ್ಬೇಕ್, ಪೆನ್ಶನ್ ಕೊಡ್ಬೇಕ್. ಇದು ನಮ್ ಬೇಡಿಕೆ.

- ಭಾಗ್ಯಲಕ್ಷ್ಮಿ
ಅಕ್ಷರದಾಸೋಹ ನೌಕರರ ಸಂಘದ
ತಾಲ್ಲೂಕು ಕಾರ್ಯದರ್ಶಿ

★

'ಸಂಬಳ ಜಾಸ್ತಿ ಕೊಡ್ಬೇಕು. ಹೆಡ್‌ಕುಕ್‌ಗೆ 650 ರೂಪಾಯಿ ನನಗೆ (ಅಡುಗೆ ಸಹಾಯಕಿ) 450 ರೂಪಾಯಿ, ಹೆಲ್ಪರ್‌ಗೆ 300 ರೂಪಾಯಿ ಕೊಡ್ತಾರೆ. ಇದು ಐದಾರ್‌ತಿಂಗ್ಳಿಗೆ ಕೊಡ್ತಾರೆ. ಹೀಗಾದ್ರೆ ಜೀವನ ನಡೆಸೋದು ಕಷ್ಟ. ಮಕ್ಕಳ್ ಜಾಸ್ತಿ ಇದ್ರೂ ರೇಷನ್ ಕೊಡಲ್ಲ ಸರ್. ಮಕ್ಕಳು ಹೊಟ್ಟೆ ತುಂಬಾ ಊಟ ಮಾಡಲಿ ರೇಷನ್ ಕೊಡಿ ಟೀಚರ್ ಅಂದ್ರೆ ಅವ್ರು ನಮ್ಮನ್ನೇ ಗದ್ರಿಸಿ ಆಷ್ಟೇ ಇರೋದ್ರಿ ಅಂತಾರೆ. ಇಂತಹ ಸಮಸ್ಯೆಯೆಲ್ಲಾ ಸರಿ ಮಾಡ್ಬೇಕ್ ಸರ್.

ನರಸಮ್ಮ (ಅಡುಗೆ ಸಹಾಯಕಿ)
ಸರ್ಕಾರಿ ಉರ್ದು ಶಾಲೆ

★

ಪಗಾರ್ (ಸಂಬಳ) ಹೆಚ್ಗ್ ಮಾಡ್ಬೇಕ್, ಖಾಸಗೀಕರಣ್ಕೆ ಕೊಡ್ಬಾರ್ದ್ರಿ, ಕೊಟ್ರೆ ನಾವ್ ಮತ್ತೆ ಹೋರಾಟ ಮಾಡ್ತೇವೆ. ನಮ್ ದುಡ್ ಬರ್‍ತೇತ್ರಿ. ಎಸ್.ಡಿ.ಎಂ ಅಧ್ಯಕ್ಷರಿಗೆ ಜಂಟಿ ಖಾತೆಯಿದೆ ಇದ್ವಾ ತೆಗೀಬೇಕ್ರಿ. ಇವೆಲ್ಲ ಭದ್ರ ಆಗಂಗೆ ಸರ್ಕಾರ ಮಾಡ್ಬೇಕ್ರಿ. ಆದ್ರೆ ಹೋರಾಟ ಮ್ಯಾಡ್ಲಾಕ್ ಬಂದೀವ್ರಿ.

ಶಿವಮ್ಮ (ಅಡಿಗೆ ಸಹಾಯಕಿ)
ಕೆರೂರ್ ಗ್ರಾಮ
ಗಂಗಾವತಿ ತಾಲ್ಲೂಕ್

ಜನಶಕ್ತಿ ಕನ್ನಡ ವಾರಪತ್ರಿಕೆ

ಭಾರತದ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಇದೇ ಮೊದಲಬಾರಿಗೆ ಮಹಿಳೆಯೊಬ್ಬರು ಆಯ್ಕೆಯಾಗಿದ್ದಾರೆ. ಚುನಾವಣೆಯಲ್ಲಿ ಅತ್ಯಂತ ಕೀಳುಮಟ್ಟದ ಪ್ರಚಾರಕ್ಕಿಳಿದ ಬಿಜೆಪಿ ಮತ್ತು ಮಿತ್ರರು ತೀವ್ರ ಮುಖಭಂಗಕ್ಕೆ ಗುರಿಯಾಗಿದ್ದಾರೆ.

ಪ್ರಥಮ ಮಹಿಳಾ ರಾಷ್ಟ್ರಾಧ್ಯಕ್ಷೆ ಕೋಮುವಾದಿ ಕೂಟಕ್ಕೆ ಗುದ್ದು

ಇದೀಗ ತಾನೆ ಮುಗಿದ ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ಎಡಪಕ್ಷಗಳ ಬೆಂಬಲಿತ ಯುಪಿಎ ಅಭ್ಯರ್ಥಿ ಶ್ರೀಮತಿ ಪ್ರತಿಭಾ ಪಾಟೀಲ್‌ರವರು ಗೆದ್ದು ಕೋಮುವಾದಿ ಎನ್‌ಡಿಎ ಕೂಟಕ್ಕೆ ಬಲವಾದ ಗುದ್ದು ಕೊಟ್ಟಿದ್ದಾರೆ. ಇದು ಸ್ವಾಗತಾರ್ಹ. ಈ ಚುನಾವಣೆಯಲ್ಲಿ ಹಲವಾರು ಪ್ರಶ್ನೆಗಳನ್ನು ಎತ್ತಲಾಗಿದ್ದು ಅವುಗಳತ್ತ ಗಮನಹರಿಸುವುದು ಈಗ ಸಕಾಲಿಕವೆನಿಸಿದೆ. ಅಧ್ಯಕ್ಷೀಯ ಚುನಾವಣೆಗೆ ನಿಲ್ಲುವ ಅಭ್ಯರ್ಥಿಯು ರಾಜಕೀಯ ಅನುಭವಿಯಾಗಿದ್ದು, ಧರ್ಮನಿರಪೇಕ್ಷಿತ ಮೌಲ್ಯಗಳಲ್ಲಿ ನಂಬುಗೆ ಹೊಂದಿರಬೇಕೆಂದು ಸಿಪಿಐ(ಎಂ) ಮತ್ತು ಎಡಪಕ್ಷಗಳು ಸ್ಪಷ್ಟವಾಗಿ ಪ್ರತಿಪಾದಿಸಿದ್ದವು. ಈ ಪ್ರತಿಪಾದನೆಯೇ ಅಧ್ಯಕ್ಷೀಯ ಚುನಾವಣೆಯಲ್ಲಿ ಮೂಡಿಬಂದ ವಿವಾದಗಳಿಗೆ ಮೂಲ ಕಾರಣವೆಂದು ಕಟುವಾಗಿ ಟೀಕಿಸಲಾಯಿತು.

ಅಂತಹ ಪ್ರತಿಪಾದನೆಯನ್ನು ಅಸಂಬದ್ಧ ನಿಬಂಧನೆಯೆಂದು ಕೆಲವರು ಕರೆದರಾದರೂ, ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾದ ವ್ಯಕ್ತಿ ಅಂತಿಮವಾಗಿ ತೆಗೆದುಕೊಳ್ಳಬೇಕಾದ ನಿರ್ಧಾರಗಳೆಲ್ಲ ರಾಜಕೀಯ ಸ್ವಭಾವದವೇ ಆಗಿರುತ್ತದೆಂಬ ವಿಷಯವನ್ನೇ ಮರೆತುಬಿಟ್ಟರು. ಉದಾಹರಣೆಗೆ, ದ್ವಿ-ಪಕ್ಷ ವ್ಯವಸ್ಥೆಯನ್ನು ಜಾರಿಗೆ ತರುವುದು ಉತ್ತಮವೆಂದು ಡಾ. ಅಬ್ದುಲ್ ಕಲಾಮ್ ರವರು ಹೇಳಿರುವುದು ವಾಸ್ತವವಾಗಿ ದೊಡ್ಡ ಬಂಡವಾಳಶಾಹಿ ಮಾಧ್ಯಮವನ್ನು ಒಳಗೊಂಡಂತೆ ನಮ್ಮ ಸಮಾಜದ ಪ್ರಬಲ ವರ್ಗಗಳ ರಾಜಕೀಯ ಅಭಿಪ್ರಾಯವನ್ನು ಅವರು ಹಂಚಿಕೊಂಡರಷ್ಟೆ.

ಅಧ್ಯಕ್ಷೀಯ ಅಭ್ಯರ್ಥಿಯನ್ನು ಆಯ್ಕೆ ಮಾಡುವುದು ಒಂದು ರಾಜಕೀಯ ನಿರ್ಧಾರದಿಂದಷ್ಟೆ. 2002 ರಲ್ಲಿ ಅಬ್ದುಲ್ ಕಲಾಂರನ್ನು ಬಿಜೆಪಿ ಮತ್ತು ಎನ್‌ಡಿಎ ಕೂಟವು ಸಮಾಜವಾದಿ ಪಕ್ಷ, ಟಿಡಿಪಿ ಮತ್ತು ಅಂತಿಮವಾಗಿ ಕಾಂಗ್ರೆಸ್ ಮತ್ತು ಇತರೆ ಪಕ್ಷಗಳ ಬೆಂಬಲದೊಂದಿಗೆ ಆಯ್ಕೆ ಮಾಡಿದ್ದು ರಾಜಕೀಯ ನಿರ್ಣಯವೇ ಆಗಿದೆ. ಎಡಪಕ್ಷಗಳು ಆ ಅಭ್ಯರ್ಥಿಯನ್ನು ವಿರೋಧಿಸಿದ್ದು ಆ ಅಭ್ಯರ್ಥಿಯ ವ್ಯಕ್ತಿತ್ವವನ್ನಲ್ಲ. ಹಾಗೆಯೇ, ಭೈರೋನ್ ಸಿಂಗ್ ಶೇಖಾವತ್‌ರನ್ನು ಎನ್‌ಡಿಎ ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದು, ಎಡಪಕ್ಷಗಳ ಸಮಾಲೋಚನೆಯೊಂದಿಗೆ ಯುಪಿಎ ಯು ಪ್ರತಿಭಾ ಪಾಟೀಲ್‌ರನ್ನು ಆಯ್ಕೆ ಮಾಡಿದಂತೆಯೇ ಅದೊಂದು ರಾಜಕೀಯ ಆಯ್ಕೆಯೇ ಆಗಿದೆ.



ಪ್ರಮಾಣವಚನ ಬೋಧಿಸುತ್ತಿರುವ ಮುಖ್ಯ ನ್ಯಾಯಮೂರ್ತಿಗಳು

ರಾಜಕೀಯ ಧೋರಣೆ

ಕಾಂಗ್ರೆಸ್ ಪಕ್ಷವು ಪ್ರಾಬಲ್ಯವಾಗಿದ್ದ ಈ ಹಿಂದಿನ ವರ್ಷಗಳಲ್ಲೂ ಕೂಡ ಒಂದೇ ಸಾಮಾನ್ಯ ಅಧ್ಯಕ್ಷೀಯ ಅಭ್ಯರ್ಥಿಯನ್ನು ನಿಲ್ಲಿಸಲು ಇತರೆ ವಿರೋಧ ಪಕ್ಷಗಳೊಂದಿಗೆ ಸಿಪಿಐ(ಎಂ) ಸಹಕರಿಸುತ್ತಾ ಬಂದಿದೆ. 1969 ರಲ್ಲಿ ಮಾತ್ರ, ಕಾಂಗ್ರೆಸ್ ಪಕ್ಷವು ಇಬ್ಭಾಗಗೊಂಡು ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್‌ನ ಬೆಂಬಲ ಪಡೆದಿದ್ದ ವಿ.ವಿ. ಗಿರಿಯವರಿಗೆ ಸಿಪಿಐ(ಎಂ) ಮತ್ತು ಎಡಪಕ್ಷಗಳು ತಮ್ಮ ಬೆಂಬಲ ನೀಡಿದ್ದವು. ಏಕೆಂದರೆ, ಆ ಸಮಯದಲ್ಲಿ ಬಲಪಂಥೀಯರು ರಹಸ್ಯವಾಗಿ ಒಗ್ಗೂಡಿ ಬೆಂಬಲಿಸಿದ್ದ ಸಂಜೀವರೆಡ್ಡಿ ಯವರಿಗೆ ಇದಿರಾಗಿ ಕಾಂಗ್ರೆಸ್‌ನ ಇಂದಿರಾಗಾಂಧಿ ಬಣವು ಬ್ಯಾಂಕುಗಳ ರಾಷ್ಟ್ರೀಕರಣದಂಥಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು.

1967 ರಿಂದ 1987ರವರೆಗೆ ತ್ರಿದೇವ್ ಚೌಧುರಿ, ನ್ಯಾ. ಖನ್ನಾ ಮತ್ತು ನ್ಯಾ. ವಿ.ಆರ್ ಕೃಷ್ಣ ಐಯ್ಯರ್‌ರವರನ್ನು ಸಿಪಿಐ(ಎಂ) ಬೆಂಬಲಿಸಿತ್ತು. ಈ ಅವಧಿಯಲ್ಲೂ ಸಹ, ಪ್ರಧಾನಮಂತ್ರಿ ಮತ್ತು ಕ್ಯಾಬಿನೆಟ್ ಸಚಿವರ ನಿರ್ಣಯವನ್ನೇ ಧಿಕ್ಕರಿಸುವಂಥಹ ಅಧಿಕಾರವನ್ನು ರಾಷ್ಟ್ರಪತಿಗಳು ಹೊಂದಿರಬಾರದೆಂದೇ ಸ್ಪಷ್ಟಪಡಿಸಿತ್ತು.

1992 ರ ಹತ್ತನೇ ಅಧ್ಯಕ್ಷೀಯ ಚುನಾವಣೆ ವೇಳೆಗೆ ಕಾಂಗ್ರೆಸ್ ದುರ್ಬಲಗೊಂಡು ಕೋಮುವಾದಿ ಶಕ್ತಿಗಳು ಮತ್ತು ರಾಮಮಂದಿರ ಚಳುವಳಿಯು ಪ್ರಬಲಗೊಂಡಿದ್ದರ ಹಿನ್ನೆಲೆಯಲ್ಲಿ ಬಿಜೆಪಿಯು ಅತಿ ದೊಡ್ಡ ವಿರೋಧ ಪಕ್ಷವಾಗಿ ಮೂಡಿಬಂತು. ಅಂದಿನ ರಾಜಕೀಯ ಪರಿಸ್ಥಿತಿಯನ್ನು ಅಂದಾಜು ಮಾಡಿದ ಸಿಪಿಐ(ಎಂ) ಮುಂದಿನ ರಾಷ್ಟ್ರಪತಿಯು ಧರ್ಮನಿರಪೇಕ್ಷಿತ ಮೌಲ್ಯದಲ್ಲಿ ದೃಢ ನಂಬುಗೆಯಿರುವವರೇ ಆಗಬೇಕೆಂದು ತೀರ್ಮಾನಿಸಿತ್ತು. ಆದ್ದರಿಂದಲೇ ಡಾ. ಶಂಕರ್ ದಯಾಳ್ ಶರ್ಮ ಕಾಂಗ್ರೆಸ್ಸಿನವರಾಗಿದ್ದರೂ ಅವರನ್ನು ಎಡಪಕ್ಷಗಳು ಬೆಂಬಲಿಸಿದವು. ಉಪರಾಷ್ಟ್ರಪತಿಯು ನಂತರ ರಾಷ್ಟ್ರಪತಿಯಾಗುವರೆಂಬ ಆಧಾರದ ಮೇಲೆ ಕೆ.ಆರ್ ನಾರಾಯಣ್‌ರನ್ನು ಸಹ ಉಪರಾಷ್ಟ್ರಪತಿ ಸ್ಥಾನಕ್ಕೆ

ಪುಟ 12 ಕ್ಕೆ

ತೀವ್ರಗೊಂಡ ಭೂ ಹೋರಾಟ : ಸಾವಿರಾರು ಬಂಧನ, ಆಂಧ್ರ ಬಂದ್

ಲಾಠಿ ಗಾಯಗಳಿಂದ ಸುರಿಯುತ್ತಿರುವ ರಕ್ತ.. ಮುಷ್ಟಿಯಿಂದ ಗುದ್ದಿರುವುದು..ಪೊಲೀಸರ ಬೂಟಿನ ಸದ್ದು... ಪ್ರತಿಭಟನಾ ನಿರತ ಅಮಾಯಕ ಜನರ ಆಕ್ರಂದನ... ಪೊಲೀಸರ ದಾಳಿಗಳಿಂದ ಸ್ಮೃತಿ ತಪ್ಪಿ ಬಿದ್ದ ಮಹಿಳೆಯರು.. ಇದು ಬದುಕಲು ಗಜದಷ್ಟು ಭೂಮಿ ಕೇಳಿದ ಜನರೊಂದಿಗೆ ಆಂಧ್ರಪ್ರದೇಶ ಸರ್ಕಾರ ನಡೆದುಕೊಳ್ಳುತ್ತಿರುವ ರೀತಿ.



ಸಿಪಿಎಂ, ಸಿಪಿಐ ನೇತೃತ್ವದಲ್ಲಿ 195 ಸಂಘಟನೆಗಳು ಒಟ್ಟುಗೂಡಿ ಆಂಧ್ರಪ್ರದೇಶದಲ್ಲಿ ನಡೆಸುತ್ತಿರುವ ಭೂಮಿ ಹೋರಾಟ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿದೆ. ಗುರುವಾರ ಮತ್ತು ಶುಕ್ರವಾರ ಪ್ರತಿಭಟನಾ ನಿರತರ ಮೇಲೆ ಪೊಲೀಸರು ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ನೂರಾರು ಮಂದಿ ಮಹಿಳೆಯರು ಸಹ ಗಂಭೀರ ಹಲ್ಲೆಗೆ ಗುರಿಯಾಗಿದ್ದಾರೆ. ಸಾವಿರಾರು ಮಂದಿ ಪ್ರತಿಭಟನಾ ನಿರತರನ್ನು ಬಂಧಿಸಲಾಗಿದೆ.

ಹೈದರಾಬಾದ್, ಕರ್ನೂಲ್, ಅನಂತಪುರ, ವಿಜಯವಾಡ, ಧರ್ಮಾವರಂ, ಅದಿಲಾ ಬಾದ್, ಮಹಬೂಬ್‌ನಗರ್, ಖಮ್ಮಂ, ನಿಜಾಮಾಬಾದ್, ಕಾಕಿನಾಡ, ವಿಶಾಖಪಟ್ಟಣ ಸೇರಿದಂತೆ ನೂರಾರು ಕಡೆ ಪ್ರತಿಭಟನೆಗಳು ನಡೆಯುತ್ತಿವೆ. ನಿವೇಶನ, ಭೂಮಿ ಕೋರಿ ಲಕ್ಷಾಂತರ ಬಡವರು ಈ ಹೋರಾಟಗಳಲ್ಲಿ ಭಾಗವಹಿಸಿದ್ದಾರೆ.

ಇಷ್ಟೆಲ್ಲ ಹೋರಾಟಗಳು ನಡೆಯುತ್ತಿದ್ದರೂ, ವಿಧಾನಮಂಡಳ ಅಧಿವೇಶನ ನಡೆಯುತ್ತಿದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದೆ ಪೊಲೀಸರು ಮತ್ತು ಅಧಿಕಾರಿಗಳನ್ನು ಬಳಸಿ ಚಳವಳಿಯನ್ನು ಹತ್ತಿಕ್ಕಲು ಎಲ್ಲ ರೀತಿಯ ಪ್ರಯತ್ನಗಳನ್ನು ಕೈಗೊಳ್ಳುತ್ತಿದೆ. ಸರ್ಕಾರದ ಈ ನೀತಿಯನ್ನು ಖಂಡಿಸಿ, ಪ್ರತಿಭಟನಾ ನಿರತರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜುಲೈ 28 ಶನಿವಾರ ಸಿಪಿಎಂ, ಸಿಪಿಐ ಮತ್ತು ಇತರ ಸಂಘಟನೆಗಳು ಆಂಧ್ರಪ್ರದೇಶ ಬಂದ್‌ಗೆ ಕರೆ ನೀಡಿವೆ.

ಪಶ್ಚಿಮ ಗೋದಾವರಿ ಜಿಲ್ಲೆಯಲ್ಲಿ ಗುರುವಾರ ದವರೆಗೆ 50 ವಿವಿಧ ಕೇಂದ್ರಗಳಲ್ಲಿ ನಡೆಯುತ್ತಿದ್ದ ಪ್ರತಿಭಟನೆಗಳು ಶುಕ್ರವಾರ 61ಕೇಂದ್ರಗಳಿಗೆ ವಿಸ್ತರಣೆಯಾಗಿದೆ. ವಾರಂಗಲ್ ಜಿಲ್ಲೆಯಲ್ಲೂ ಸಹ ಸಾವಿರಾರು ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ನಲಗೊಂಡ ಜಿಲ್ಲೆಯ ಭುವನಗಿರಿಯಲ್ಲಿ ಬೃಹತ್ ಪ್ರಮಾಣದ ಚಳುವಳಿಗಳನ್ನು ನಡೆಸಲಾಗಿದೆ.

ನೆಲ್ಲೂರು ಜಿಲ್ಲೆಯ ಉದಯಗಿರಿಯಲ್ಲಿ ನಿವೃತ್ತ ಪೊಲೀಸ್ ಮಹಾನಿರ್ದೇಶಕರು ಅತಿಕ್ರಮವಾಗಿ ಕಬಳಿಸಿದ್ದ 170 ಎಕರೆ ಭೂಮಿಯನ್ನು ವಶಕ್ಕೆ ತೆಗೆದುಕೊಂಡಿರುವ ಪ್ರತಿಭಟನಕಾರರು ಆ ಪ್ರದೇಶದಲ್ಲಿ ಸಿಪಿಎಂ ಬಾವುಟಗಳನ್ನು ಹಾರಿಸಿದ್ದಾರೆ. ಈ ಸಂದರ್ಭದಲ್ಲಿ ನಡೆದ ಪೊಲೀಸ್ ಲಾಠಿ ಪ್ರಹಾರದಲ್ಲಿ ಮಹಿಳೆಯರು ಸೇರಿದಂತೆ ನೂರಾರು ಮಂದಿ ಗಾಯಗೊಂಡಿದ್ದು 13ಮಂದಿ ಸಿಪಿಎಂ ಕಾರ್ಯಕರ್ತರನ್ನು ಬಂಧಿಸಲಾಗಿದೆ. ನಿಜಾಮಾಬಾದ್‌ನ ಜಿಲ್ಲಾಧಿಕಾರಿ ಕಚೇರಿ ಮುಂದೆ 48ಗಂಟೆಗಳ ಕಾಲ ಧರಣೆ ಆರಂಭಿಸಲಾಗಿದೆ. ಅನಂತಪುರದಲ್ಲಿ ಬೃಹತ್ ಸಂಖ್ಯೆಯಲ್ಲಿ ಜನತೆ ಜಮಾವಣೆಗೊಂಡು ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಪೊಲೀಸರು ಮತ್ತು ಪ್ರತಿಭಟನಾ ನಿರತರ ನಡುವೆ ಘರ್ಷಣೆಗಳು ಸಂಭವಿಸಿ ಸುಮಾರು ಎರಡು ಸಾವಿರಾರು ಮಂದಿಯನ್ನು ಬಂಧಿಸಲಾಗಿದೆ. ಬಡವರಿಗೆ ಸರ್ಕಾರಿ ಭೂಮಿ ವಿತರಿಸ ಬೇಕೆಂದು ಸಿಪಿಎಂ ಪಕ್ಷದ ನೇತೃತ್ವದಲ್ಲಿ ಸತತ 85ದಿನಗಳಿಂದ ಚಳವಳಿಯನ್ನು ನಡೆಸಲಾಗುತ್ತಿದೆ. ಭೂಮಿ ಹಂಚಿಕೆ ಕುರಿತು ಮುಖ್ಯಮಂತ್ರಿ ವೈ.ಎಸ್.ರಾಜಶೇಕರ ರೆಡ್ಡಿ ವಿಧಾನಸಭೆಯಲ್ಲಿ ನೀಡಿರುವ ಹೇಳಿಕೆ ಸ್ಪಷ್ಟವಾಗಿಲ್ಲ ಎಂದು ಸಿಪಿಎಂ ರಾಜ್ಯ ಕಾರ್ಯದರ್ಶಿ ಬಿ.ವಿ.ರಾಘವುಲು ಹೇಳಿದ್ದಾರೆ.

■ ಅಪ್ಪು

ಖಮ್ಮಂನಲ್ಲಿ ಪೋಲೀಸ್ ಗೋಲಿಬಾರ್ 8 ಜನರ ಬಲಿ

"ಭೂಮಿ ಹೋರಾಟವನ್ನು ದಮನಿಸಲಾಗದು"

- ಪ್ರಕಾಶ್‌ಕಾರಟ್

ಪತ್ರಿಕೆ ಮುದ್ರಣಕ್ಕೆ ಹೋಗುವ ಹೊತ್ತಿಗೆ ಒಂದು ಅಘಾತಕಾರಿ ಸುದ್ದಿ ಬಂದಿದೆ. ಆಂಧ್ರಪ್ರದೇಶ ಖಮ್ಮಂ ಜಿಲ್ಲೆಯಲ್ಲಿ ಹೋರಾಟ ನಿರತ ಜನರ ಮೇಲೆ ಗೋಲಿಬಾರ್‌ನಡೆಸಿದ ಪೋಲಿಸರು ಒಬ್ಬ ಬಾಲಕ ಸೇರಿದಂತೆ ಎಂಟು ಜನರನ್ನು ಕೊಂದಿದ್ದಾರೆ. ಜನರ ಮೇಲೆ ಕ್ರೂರ ಧಾಳಿ ಮಾಡಿದ್ದಾರೆ. ಬೆಂಗಳೂರಿನಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಪ್ರಕಾಶ್ ಕಾರಟ್ ಇದನ್ನು ತೀವ್ರವಾಗಿ ಖಂಡಿಸಿದ್ದಾರೆ. ಅವರ ಹೇಳಿಕೆ ಇಂತಿದೆ

"ಖಮ್ಮಂ ಜಿಲ್ಲೆಯ ಪೋಲೀಸ್ ಗೋಲಿಬಾರ್ ತೀವ್ರ ಖಂಡನಾರ್ಹ. 8 ಜನರು ಸತ್ತಿದ್ದಾರೆ. ನಿವೇಶನ ಭೂಮಿಯ ತಮ್ಮ ಬೇಡಿಕೆಗಳನ್ನು ಪರಿಗಣಿಸಲು ನಿರಾಕರಿಸುತ್ತಿರುವ ಆಂಧ್ರ ಸರ್ಕಾರದ ವಿರುದ್ಧ ಅಲ್ಲಿ ಕಳೆದ 3 ತಿಂಗಳಿನಿಂದ ಹೋರಾಟ ನಡೆಯುತ್ತಿದೆ.

ರಾಜಶೇಖರರೆಡ್ಡಿ ನೇತೃತ್ವದ ಸರ್ಕಾರವು ಈ ಹೋರಾಟವನ್ನು ಪೋಲೀಸ್ ದಮನದ ಮೂಲಕ ಹತ್ತಿಕ್ಕಲು ಪ್ರಯತ್ನಿಸುತ್ತಿದೆ. ಆದರೆ ಅವರು ಅದರಲ್ಲಿ ವಿಫಲರಾಗುತ್ತಾರೆ. ಏಕೆಂದರೆ ಈ ಹೋರಾಟಕ್ಕೆ ಜನ ಸಮೂಹಗಳ ವ್ಯಾಪಕ ಬೆಂಬಲವಿದೆ.

ಈಗಲಾದರೂ ಸರ್ಕಾರ ತಡಮಾಡದೇ ನಿವೇಶನ ಭೂಮಿಯ ಬೇಡಿಕೆಯನ್ನು ಪರಿಗಣಿಸಬೇಕು. ತಪ್ಪಿತಸ್ಥರ ಮೇಲೆ ಕ್ರಮ ವಹಿಸಬೇಕು. ಸಂತ್ರಸ್ಥ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕು".

ರಾಜಧಾನಿ ಬೆಂಗಳೂರು - ಕರಾವಳಿಯ ಮಂಗಳೂರಿನ ನಡುವೆ ರೈಲು ಓಡಲು ನೂರೆಂಟು ಅಡ್ಡಿಗಳು. ಇದರ ಹಿಂದೆ ಯಾರಿದ್ದಾರೆ?

ಮಂಗಳೂರು -ಬೆಂಗಳೂರು ಹಳಿಗಿಳಿಯದ ರೈಲು



ಕೃಷ್ಣಪ್ಪ ಕೊಂಚಾಡಿ

ಇತಿಹಾಸ ಪ್ರಸಿದ್ಧ 1871 ರ ಪ್ಯಾರೀಸ್ ಕಮ್ಯೂನ್‌ನಿಂದ ಅಂತರಾಷ್ಟ್ರೀಯ ಕಾರ್ಮಿಕ ವರ್ಗ ಎರಡು ಸಂಗತಿಗಳನ್ನು ಕಣ್ಣಿಗೆ ಕಟ್ಟುವಂತೆ ಎತ್ತಿ ತೋರಿಸಿದೆ ಎನ್ನುತ್ತಾ ಭಾರತದ ದುಡಿಯುವ ವರ್ಗದ ಹಿರಿಯ ನಾಯಕ, ಪೀಪಲ್ಸ್ ಡೆಮಾಕ್ರಸಿ ಪತ್ರಿಕೆಯ ಸಂಪಾದಕರಾದ ದಿವಂಗತ ಸುನೀಲ್ ಮೈತ್ರಾರವರು ಬರೆಯುತ್ತಾರೆ 'ಅದೇನೆಂದರೆ ಬೂರ್ಜ್ವಾ ವರ್ಗ ರಾಷ್ಟ್ರೀಯ ಹಿತಾಸಕ್ತಿ ಮತ್ತು ತನ್ನ ವರ್ಗದ ಹಿತಾಸಕ್ತಿ ನಡುವೆ ಒಂದನ್ನು ಆಯ್ಕೆ ಮಾಡಿಕೊಳ್ಳುವ ಅನಿವಾರ್ಯ ಪರಿಸ್ಥಿತಿ ಬಂದಾಗ ಸಹಜವಾಗಿಯೇ ಅವರು ತಮ್ಮ ವರ್ಗದ ಹಿತಾಸಕ್ತಿ ಉಳಿಸಿಕೊಳ್ಳಲು ಅಥವಾ ಪಡೆಯಲು ತಮ್ಮ ದೇಶವನ್ನೇ ಮಾರಲು ಒಂದು ಕ್ಷಣವೂ ಹಿಂಜರಿಯುವುದಿಲ್ಲ. ಬಂಡವಾಳ ಶಾಹಿ ವರ್ಗ ದೇಶ ಪ್ರೇಮದ ಬಗ್ಗೆ ಎಷ್ಟೇ ಉದ್ದುದ್ದ ಮಾತನಾಡಿದರೂ ತನ್ನ ವರ್ಗ ಹಿತಾಸಕ್ತಿ ಪ್ರಶ್ನೆ ಬಂದಾಗ ಅದಕ್ಕಾಗಿ ದೇಶವನ್ನೇ ಮಾರಲು ಅದು ಕಿಂಚಿತ್ತೂ ಹೇಸುವುದಿಲ್ಲ'.

ಹೌದು ಈ ಔಪಚಾರಿಕ ಪ್ರಸ್ತಾವನೆ ಯಾವುದೇ ಒಂದು ತಾರ್ಕಿಕತೆಯ ವಿಶ್ಲೇಷಣೆಗೆ ಒಳಪಟ್ಟು ಪ್ರಯೋಗಿಸಲಿಲ್ಲ. ಬದಲಾಗಿ ದ.ಕ., ಉಡುಪಿ ಮತ್ತು ನೆರೆಯ ಕಾಸರಗೋಡು ಜಿಲ್ಲೆಯ ಜನರ ಬಹುದಿನದ ಆಕಾಂಕ್ಷೆಯ ಮೂರ್ತ ರೂಪ 'ಮಂಗಳೂರು-ಬೆಂಗಳೂರು' ರೈಲ್ವೇ ಕನಸಿನ ಕೂಸಾಗಿಯೇ ಇರುವಾಗ ಒಂದು ದಶಕಕ್ಕೂ ಮಿಕ್ಕಿ ಅಂದಿನಿಂದ ಇಂದಿನವರೆಗೂ ದೇಶ ಪ್ರೇಮದ ಜನ ಹಿತಾಸಕ್ತಿಯ ಬಗ್ಗೆ ಉದ್ದುದ್ದ ಮಾತನಾಡುವ ಬಿಜೆಪಿಯ ಲೋಕಸಭಾ ಸದಸ್ಯರು, ಮಂತ್ರಿಗಳು, ಶಾಸಕರುಗಳು ಈ ವ್ಯಾಪ್ತಿಯವರೇ ಆಗಿದ್ದರೂ ಇನ್ನೂ ದಶಕ ಕಳೆದರೂ ರೈಲು ಪ್ರಾರಂಭವೇ ಆಗದಿರುವಾಗ ಇವರುಗಳು ಯಾತಕ್ಕಾಗಿ ಸುಮ್ಮನಿದ್ದಾರೆ? ಕಳೆದ 11 ವರುಷಗಳಲ್ಲಿ ಏನಿಲ್ಲವೆಂದರೂ ಒಂದು ನೂರು ಬಾರಿ 'ಉದ್ಘಾಟನೆಯಾಗಲಿದೆ' ಎಂದು ಬಡಾಯಿ ಕೊಚ್ಚಿದ್ದಾರೆ. ಮಾಜಿ ಸಂಸದ ಧನಂಜಯಕುಮಾರ್, ಹಾಲಿ ಸದಸ್ಯ ಡಿ.ವಿ. ಸದಾನಂದ ಗೌಡರು ಕಾರಣಗಳಿಲ್ಲದೆ ಕುಂಟು ನೆಪಗಳಿಂದ ಪ್ರಯಾಣಿಕ ರೈಲು ಉದ್ಘಾಟನೆಯಾಗದಿದ್ದಾಗ ಪ್ರತಿಭಟನೆಗೆ ದಿನ ನಿಗದಿ ಎಂದು ಹೇಳಿ ಪತ್ರಿಕೆಯಲ್ಲಿ ದಪ್ಪಕ್ಷರದ ಸುದ್ದಿಗೆ 'ಆಹಾರವಾಗಿ' ಮತ್ತೆ ಮಿಂಚುತ್ತಾರೆ.

ಲೋಕಸಭೆಯಲ್ಲಿ ಗುಮ್ಮನಂತೆ ಬಾಯಿ ಮುಚ್ಚಿ ಕೂರುವ ಸದಾನಂದಗೌಡರು ಮಾಧ್ಯಮದವರೊಂದಿಗೆ ಗಾಯಗೊಂಡ ಚಿರತೆಯಂತೆ ತೋಳು ಎತ್ತಿ ಹಾವಭಾವ, ಕಣ್ಣಗುಡ್ಡೆಗಳನ್ನು ಗಿರಗರನೆ ತಿರುಗಿಸುತ್ತಾ ನಟಿಸುತ್ತಾರೆ. ಅಂತು ಇಂತು ಪ್ರತಿಭಟನೆಯ ದಿನ ಬಂದಾಗ ಅದು ಠುಸ್ಸಾಗುತ್ತದೆ. ಈ ಬಾರಿಯ ಇಂತಹ ಪ್ರತಿಭಟನೆಯ ದಿನಾಂಕವನ್ನು ಈ ಲೋಕಸಭಾ ಸದಸ್ಯರು ಜೂನ್ 30 ಎಂದು ಘಂಟಾಘೋಷವಾಗಿ ಹೇಳಿಕೊಂಡಿದ್ದರು. ಆ ಜೂನ್ 30 ರಂದು ಅವರು ನೀಡಿದ ಎಚ್ಚರಿಕೆಯಂತೆ ಪ್ರಯಾಣಿಕ ರೈಲು ಪ್ರಾರಂಭವಾಗಲೇ ಇಲ್ಲ. ಆದರೆ ವಿಚಿತ್ರವೆಂದರೆ ಆ ದಿನ ಲೋಕಸಭಾ ಸದಸ್ಯರು ಅಮೇರಿಕಾಕ್ಕೆ ಹಾರಿದ್ದರು. ಇತ್ತ ಪ್ರತಿಭಟನೆಯೂ ಮಾಯ. ಹೇಗಿದೆ ಇವರ ರೈಲು ರಾಜಕೀಯ. ಸಕಲೇಶಪುರ- ಮಂಗಳೂರು ಮಧ್ಯದ ರೈಲ್ವೇ ಹಳಿ ಬ್ರಾಡ್‌ಗೇಜ್ ಪರಿವರ್ತನೆಯಾಗಿ ಒಂದು ವರುಷ ಕಳೆದಿದೆ. ಗೂಡ್ಸ್ ರೈಲು ಸಾಗಾಣಿಕೆ ಪ್ರಾರಂಭವಾಗಿ 7 ತಿಂಗಳು ಕಳೆದಿದೆ. ಈ ಅವಧಿಯಲ್ಲಿ ಒಂದೇ ಒಂದು ಬಾರಿ ಗೂಡ್ಸ್ ಹಳಿ ತಪ್ಪಿದ ಘಟನೆ ನಡೆದಿದೆ. ರೈಲ್ವೇ ಸುರಕ್ಷಾ ಮಂಡಳಿ ಕಳೆದ ಮೇ ತಿಂಗಳಲ್ಲಿ ಎರಡು ದಿನ ಸೂಕ್ಷ್ಮ ತಾಂತ್ರಿಕ ಪರೀಕ್ಷೆ ನಡೆಸಿ ಪ್ರಯಾಣಿಕ ರೈಲು ಓಡಬಹುದೆಂದು ಆದೇಶ ನೀಡಿದೆ ಎಂದು ವರದಿಯಾಗಿದೆ.

ರೈಲ್ವೇಯು ಪ್ರತಿ ವರುಷ ಜುಲೈ ತಿಂಗಳಲ್ಲಿ ತನ್ನ ಟೈಮ್‌ಟೇಬಲ್‌ನ್ನು ಬಿಡುಗಡೆ ಮಾಡುತ್ತದೆ. 2006 ರ ದಕ್ಷಿಣ ರೈಲ್ವೇಯ ಟೈಮ್ ಟೇಬಲ್‌ನಲ್ಲಿ ಮಂಗಳೂರು -ಬೆಂಗಳೂರು ರೈಲ್ವೆಯ ಸಂಬಂಧಿತವಾದ ಪ್ರಯಾಣಿಕ ರೈಲಿನ ಟೈಮಿಂಗ್ಸ್ ಇದೆ. ವಾಸ್ತವಿಕತೆ ಹೀಗಿರುವಾಗ ಈ ರೈಲ್ವೆ ಉದ್ಘಾಟನೆಗೆ ಅಡ್ಡಿಯಾದ ಮಾಫಿಯಾಗಳು ಯಾರೆಂಬುದು ಎಲ್ಲರಿಗೂ ತಿಳಿದಿದೆ. ಜಿಲ್ಲೆಯ ಜನ ಜೀವನದ ಎಲ್ಲಾ ಆಗುಹೋಗುಗಳಲ್ಲಿ ಅಗೋಚರವಾಗಿ ಜಿಲ್ಲಾಡಳಿತ, ಪೋಲೀಸ್ ವ್ಯವಸ್ಥೆಗಳಲ್ಲಿ ಕೈಯಾಡಿಸಿರುವ ಟ್ರಾನ್ಸ್‌ಪೋರ್ಟ್ ಮಾಫಿಯಾ (ಖಾಸಗಿ ಬಸ್ಸು ಮಾಲಕರ ಮಾಫಿಯಾ)ವೇ ಇದಕ್ಕೆ ನೇರ ಕಾರಣವಾಗಿದೆ. ಮಂಗಳೂರು, ಬೆಂಗಳೂರು ಮತ್ತು ಮೈಸೂರು ಭಾಗಗಳಲ್ಲಿ ನೂರಾರು ಸಂಖ್ಯೆಯಲ್ಲಿ ಓಡಾಡುತ್ತಿರುವ ಬಸ್ಸಿನ ಮಾಲಕರುಗಳು ನಿಯಮಿತವಾಗಿ ಪ್ರತಿ ತಿಂಗಳು ತಪ್ಪದೇ ಸಲ್ಲಿಸುತ್ತಿರುವ ಕಪ್ಪ ಕಾಣಿಕೆಗಳ ಬಟವಾಡೆಯೇ ಎಲ್ಲೆಲ್ಲೂ ಕಾರ್ಯಾಚರಿಸುತ್ತಿರುವುದು. ಕೇಂದ್ರದ ರೈಲ್ವೇ ಇಲಾಖೆಯಲ್ಲೂ ಇದು ಪ್ರವಹಿಸುತ್ತದೆ.

ಕೊಂಕಣ ರೈಲ್ವೆ ಒಂದೂವರೆ ವರ್ಷದಲ್ಲಿ ಪೂರ್ಣಗೊಂಡ ಇತಿಹಾಸವಿದ್ದರೆ ಅಂದು ಅದರ ಹಿಂದೆ ಇದ್ದ ರಾಜಕೀಯ ವ್ಯಕ್ತಿಗಳ ಇಚ್ಛಾಶಕ್ತಿ ನೇರವಾಗಿ ಕಾರಣವಾಗಿದೆ. ಆದರೆ ಇಂದು ಬಿಜೆಪಿ ಮತ್ತು ಕಾಂಗ್ರೆಸ್‌ನ ಚುನಾಯಿತ ಪ್ರತಿನಿಧಿಗಳು ಈ ಟ್ರಾನ್ಸ್‌ಪೋರ್ಟ್ ಮಾಫಿಯಾಗಳ ಕೈಗೊಂಬೆಯಾಗಿರುವಾಗ ಇನ್ನು ಒಂದು ದಶಕ ಕಳೆದರೂ ಇದು 'ಕನಸಿನ ಕೂಸು' ಆಗಿಯೇ ಉಳಿಯಬಹುದು. ಯಡಿಯೂರಪ್ಪನವರ 'ಕನಸಿನ ಕೂಸು' ಜನ್ಮ ತಾಳುವ ಸಂದರ್ಭದಲ್ಲಿ ಈ ಭಾಗದ ಜನರ ಕನಸಿನ ಕೂಸು ಅಕಾಲಿಕ ಭ್ರೂಣದಲ್ಲೇ ಹತ್ಯೆಯಾಗುತ್ತದೆ.

ಜನಪ್ರತಿನಿಧಿಗಳು ಪ್ರತಿನಿಧಿಸುವ ಹಿತಾಸಕ್ತಿಯ ಹಿನ್ನೆಲೆಯನ್ನು ಅಂದಾಜಿಸಲು ಕಾಮ್ರೇಡ್ ಸುನೀಲ್ ಮೈತ್ರಾರವರು ನೀಡಿರುವ ವಿಶ್ಲೇಷಣೆ ಇಲ್ಲಿ ಅನುಚಿತವಾಗಲಾರದು.

ಮಹಾವಂಚನೆಯ ವಿರುದ್ಧ ಬೀಡಿ ಕಾರ್ಮಿಕರ ಸಮರ

ಕರ್ನಾಟಕ ರಾಜ್ಯದ ಒಂದು ಪ್ರಮುಖ ಉದ್ದಿಮೆಯಾದ ಬೀಡಿ ಕ್ಷೇತ್ರದಲ್ಲಿ ಮಾಲೀಕರು ಕಾರ್ಮಿಕರಿಗೆ ನ್ಯಾಯಬದ್ಧವಾಗಿ ಕೊಡಬೇಕಾದ ತುಟ್ಟಿಭತ್ಯೆಯ ಬಾಕಿಯಲ್ಲಿ ಮೂರುಕಾಸು ಕೈಗಿಟ್ಟು 12 ಕಾಸು ಕೊಟ್ಟನೆಂದು ಒತ್ತಾಯ, ಬಲತ್ಕಾರದಿಂದ ಕಾರ್ಮಿಕರ ಸಹಿ ಪಡೆಕೊಳ್ಳ ಹೊರಟಿದ್ದಾರೆ. ಮಾಲೀಕರ ಈ ವಂಚನೆಯನ್ನು ಕಾರ್ಮಿಕರು ರಾಜ್ಯಾದ್ಯಂತ ಪ್ರತಿಭಟಿಸಿದ್ದಾರೆ.

ಬಿ.ಮಾಧವ

ದೇಶದ ಔದ್ಯಮಿಕ ಇತಿಹಾಸದಲ್ಲೇ ಹಿಂದೆಂದೂ ಕಂಡು ಕೇಳರಿಯದ ಮಹಾ ವಂಚನೆಯನ್ನು ಗಣೇಶ ಬೀಡಿ ಸಂಸ್ಥೆಯ ಆಡಳಿತ ರಾಜ್ಯದ ಬೀಡಿ ಕಾರ್ಮಿಕರ ಮೇಲೆ ಪ್ರಯೋಗಿಸಿದೆ. ಬೀಡಿ ಕಾರ್ಮಿಕರಿಗೆ 1996ರಿಂದ ಸಿಗಬೇಕಾಗಿದ್ದ ತುಟ್ಟಿಭತ್ಯೆಯ ಬಾಕಿ ಕಂತುಗಳ ಬಾಬ್ತು ರೂ.4500 ರ ಏಕಗಂಟಿನ ಪರಿಹಾರವನ್ನು ಜೂನ್ 30 ರೊಳಗೆ ನೀಡಲು ಒಪ್ಪಿಕೊಂಡು ಜನವರಿ 31 ರಂದು ಜಂಟಿ ಕಾರ್ಮಿಕ ಆಯುಕ್ತರ ಸಮಕ್ಷಮದಲ್ಲಿ ಮಾಡಿಕೊಂಡ ಒಪ್ಪಂದವನ್ನು ಬೀಡಿ ಮಾಲೀಕರೆಲ್ಲರೂ ಸಾರಾಸಗಟಾಗಿ ಉಲ್ಲಂಘಿಸಿದರು. ಕರ್ನಾಟಕದ ಬೀಡಿ ಮಾಲಕರಲ್ಲೇ ಅತ್ಯಂತ ಬಲಿಷ್ಠರಾದ ಗಣೇಶ ಬೀಡಿಯವರು ಕಾರ್ಮಿಕರ ಐಕ್ಯತೆಯನ್ನು ಮುರಿಯುವ ಹೊಸತೊಂದು ದುಸ್ಸಾಹಸಕ್ಕೆ ಕೈ ಹಾಕಿದರು. ಅವರು ತಮ್ಮ ಗುತ್ತಿಗೆದಾರರ ಮೂಲಕ ಕಾರ್ಮಿಕರಿಗೆ ರೂ.1000, ರೂ.600, ರೂ.500 ಮತ್ತು ಇನ್ನೂ ಕಡಿಮೆ ಹಣ ನೀಡಿ ಖಾಲಿ ಕಾಗದದ ಹಾಳೆಗಳಲ್ಲಿ ಸಹಿ ಪಡೆಯಲಾರಂಭಿಸಿದರು. ಅದರ ಜೊತೆಗೆ ತಮಗೆ ಒಪ್ಪಂದದ ಪ್ರಕಾರ ಸಲ್ಲತಕ್ಕ ಪೂರ್ತಿ ಹಣ ಸಂದಾಯವಾಗಿದೆ, ಈ ಬಗ್ಗೆ ಇನ್ನು ತಾನೂ ಯಾವುದೇ ದೂರನ್ನೂ ನೀಡುವುದಿಲ್ಲ ಎಂದು ಇಂಗ್ಲಿಷಿನಲ್ಲಿ ಮುದ್ರಿಸಿದ ಮುಚ್ಚಳಿಕೆಗೆ ಬಲವಂತವಾಗಿ ಸಹಿ ಪಡೆದರು. ಈ ರೀತಿ ಹಣ ತೆಗೆದುಕೊಳ್ಳಲು ನಿರಾಕರಿಸಿದವರಿಗೆ ಇನ್ನು ಮುಂದೆ ಕೆಲಸ ಕೊಡುವುದಿಲ್ಲವೆಂಬ ಬೆದರಿಕೆ ಹಾಕಿದರು. ಗುತ್ತಿಗೆದಾರರು ರಾತ್ರಿ ವೇಳೆಗೆ ಕೆಲವು ಮಹಿಳಾ ಕಾರ್ಮಿಕರ ಮನೆಗಳಿಗೆ ಹೋಗಿ ಅವರ ಗಂಡಂದಿರನ್ನು ಪುಸಲಾಯಿಸಿ ಕಾರ್ಮಿಕರ ಸಹಿ ಪಡೆದು ಹಣ ನೀಡಿದರು. ಕೆಲವು ಗುತ್ತಿಗೆದಾರರ ಬ್ರಾಂಚುಗಳಲ್ಲಿ ಇಂತಹ ವಂಚನೆಯ ಕೃತ್ಯಗಳನ್ನು ಸಿಐಟಿಯು ಕಾರ್ಯಕರ್ತೆಯರು ತಡೆದಾಗ ಅವರಿಗೆ ಜೀವ ಬೆದರಿಕೆಯನ್ನು ಒಡ್ಡಲಾಯಿತು. ಬಂಧನ ಮಾಡಿಸುವುದಾಗಿ ಬೆದರಿಸಲಾಯಿತು. ಆದರೂ ಸಿಐಟಿಯು ಕಾರ್ಯಕರ್ತೆಯರು ಇಂತಹ ಬೆದರಿಕೆಗಳನ್ನು ದಿಟ್ಟವಾಗಿ ಎದುರಿಸಿ ಹೆಚ್ಚಿನ ಕಡೆಗಳಲ್ಲಿ ವಂಚನೆಯ ಕೃತ್ಯಗಳನ್ನು ತಡೆದು ಕಾರ್ಮಿಕರಿಗೆ ಅವರ ಹಕ್ಕಿನ ಕುರಿತು ಮನವರಿಕೆ ಮಾಡಿಕೊಟ್ಟು ಅವರನ್ನು ವಾಪಸ್ಸು ಕಳುಹಿಸಿದರು.

ಮತ್ತೆ ಮುರಿದ ಒಪ್ಪಂದ

ಈ ಮಧ್ಯೆ ಮಂಗಳೂರಿನಲ್ಲಿ ಭಾರತ್ ಬೀಡಿಯ ಮಾಲಕರು ಸಿಐಟಿಯು ಪ್ರತಿನಿಧಿಗಳ ಜತೆಗೆ ಮಾತನಾಡುವ ಇಂಗಿತ ವ್ಯಕ್ತಪಡಿಸಿದರು. ಅದರಂತೆ ಜುಲೈ 19, 2007 ರಂದು ಭಾರತ ಬೀಡಿಯ ಪ್ರಧಾನ ಕಛೇರಿಯಲ್ಲಿ ನಡೆದ ಮಾತುಕತೆಗಳಲ್ಲಿ ಸಿಐಟಿಯು ಪರವಾಗಿ ಸಂಗಾತಿಗಳಾದ ವಿ.ಜೆ.ಕೆ.ನಾಯರ್, ಬಿ.ಮಾಧವ, ಕೆ.ಆರ್.ಶ್ರೀಯಾನ್, ಜೆ.ಬಾಲಕೃಷ್ಣ ಶೆಟ್ಟಿ ಮತ್ತು ಸುಕುಮಾರ್ ಭಾಗವಹಿಸಿದ್ದರು. ಭಾರತ ಬೀಡಿಯ ಅಧ್ಯಕ್ಷರಾದ ಬಿ.ಗಣಪತಿ ಪೈಯವರ ನೇತೃತ್ವದಲ್ಲಿ ಪ್ರಕಾಶ್ ಬೀಡಿ, ಗಣೇಶ್‌ಬೀಡಿ, ಟೆಲಿಫೋನ್ ಬೀಡಿ, ಸದರನ್ ಇಂಡಿಯಾ, ದೇಸಾಯಿ, ಸಿ.ಜೆ.ಟೊಬೆಕೊ ಇತ್ಯಾದಿ ಪ್ರಮುಖ ಸಂಸ್ಥೆಗಳ ಪ್ರತಿನಿಧಿಗಳು ಹಾಜರಿದ್ದರು. ಸುದೀರ್ಘ ಮಾತುಕತೆಗಳ ಕೊನೆಯಲ್ಲಿ ಬೀಡಿ ಮಾಲಕರು ಒಪ್ಪಂದದ ಪ್ರಕಾರ ಪೂರ್ತಿ ಹಣವನ್ನು ಕೊಡುವ ಭರವಸೆ ನೀಡುತ್ತಾ ರೂ.2000 ನ್ನು ದೀಪಾವಳಿಗೆ ಕೊಡುವ ಪ್ರಸ್ತಾಪ ಮುಂದಿಟ್ಟರು. ಈ ಪ್ರಸ್ತಾಪವನ್ನು ಒಳಗೊಂಡ ಪತ್ರವನ್ನು ಅಂದು ಸಂಜೆಯೊಳಗೆ ಸಿಐಟಿಯುಗೆ ತಲುಪುವುದಾಗಿ ಭರವಸೆ ನೀಡಿದ ಶ್ರೀಮಾನ್ ಗಣಪತಿ ಪೈಯವರು, ತಾನು ಕೊಟ್ಟ ಮಾತಿಗೆ ಎಂದೂ ತಪ್ಪಿದವನಲ್ಲ ಎಂದು ಪದೇ ಪದೇ ಹೇಳಿದರು. ಆದರೆ ಆ ದಿನವೆಲ್ಲಾ ಸುಮ್ಮನಿದ್ದ ಬೀಡಿ ಮಾಲಕರು ಮರುದಿನ ಸಂಜೆಗೆ ಫೋನ್ ಮಾಡಿ, ತಮ್ಮ ಪ್ರಸ್ತಾಪಕ್ಕೆ ಗಣೇಶ್ ಬೀಡಿಯವರು ಒಪ್ಪದಿರುವುದರಿಂದ ಪ್ರಸ್ತಾಪವನ್ನು ಹಿಂತೆಗೆಯುವುದಾಗಿ ತಿಳಿಸಿದರು.

ವಂಚನೆಯ ವಿರುದ್ಧ ....

ಈ ರೀತಿ ವಂಚನೆಗಳ ಸರಣಿಯನ್ನೇ ಎದುರಿಸುವ ಸನ್ನಿವೇಶದಲ್ಲಿ ರಾಜ್ಯಾದ್ಯಂತ ಜುಲೈ 24 ರಂದು ಹೋರಾಟಗಳನ್ನು ನಡೆಸಲು ಸಿಐಟಿಯು ಕರೆ ನೀಡಿತು. ಮಂಗಳೂರಿನ ಲಾಲ್‌ಬಾಗ್ ನಲ್ಲಿರುವ ಗಣೇಶ ಬೀಡಿ ಡಿಪೋದ ಮುಂದೆ ನಡೆದ ಹೋರಾಟ ಅಭೂತಪೂರ್ವಕವಾಗಿ ಯಶಸ್ವಿ ಯಾಯಿತು. ಸುಮಾರು ಐದು ಸಾವಿರಕ್ಕಿಂತಲೂ ಹೆಚ್ಚು ಬೀಡಿ ಕಾರ್ಮಿಕರು ದಿನವಿಡೀ ಡಿಪೋಗೆ ಮುತ್ತಿಗೆ ಹಾಕಿದರು. ಬಿಸಿಲಿನ ಬೇಗೆ, ಹಸಿವು, ಬಾಯಾರಿಕೆ, ಯಾವುದೂ ಅವರ ಸ್ಫೂರ್ತಿಯನ್ನೂ ಕ್ರೋಧವನ್ನೂ ಕುಗ್ಗಿಸಲಿಲ್ಲ. ಡಿಪೋದಲ್ಲಿದ್ದ ಇಬ್ಬರು

ಪುಟ 12 ಕ್ಕೆ

ಮಂಗಳೂರಿನಲ್ಲಿ ವಂಚಕ ಗಣೇಶ್ ಬೀಡಿ ಕಂಪನಿ ಎದುರು ಸಹಸ್ರಾರು ಕಾರ್ಮಿಕರ ಬೃಹತ್ ಪ್ರತಿಭಟನೆ



ಮುಸ್ಲಿಮರು : ತಾರತಮ್ಯದ ಸುಳಿಯಲ್ಲಿ

ಭಾರತದಲ್ಲಿ ಅಲ್ಪಸಂಖ್ಯಾತರನ್ನು ಅದರಲ್ಲೂ ಮುಸ್ಲಿಮರನ್ನು ಓಲೈಸಲಾಗುತ್ತಿದೆ. ತುಷ್ಟೀಕರಣ ನಡೆಸಲಾಗುತ್ತಿದೆ. ಸರ್ಕಾರಗಳು ಅವರಿಗೆ ವಿಪರೀತ ಸೌಲಭ್ಯ, ಸೌಕರ್ಯ, ವಿನಾಯಿತಿ ನೀಡಿ ತಲೆಯ ಮೇಲೆ ಕೂರಿಸಿಕೊಂಡಿವೆ ಎಂದು ಸಂಘ ಪರಿವಾರ ನಿತ್ಯವೂ ಬೊಬ್ಬೆ ಹೊಡೆಯುತ್ತದೆ. ಆದರೆ ಮುಸ್ಲಿಮರ ಬದುಕಿನ ಭೀಕರ ವಾಸ್ತವವನ್ನು ತೆರೆದಿಟ್ಟಿರುವ ರಾಜೇಂದ್ರ ಸಾಚಾರ್ ವರದಿ ಕಂಡುಕೊಂಡಿರುವ ಸತ್ಯವೇ ಬೇರೆ.



ನ್ಯಾಯಮೂರ್ತಿ ಸಾಚಾರ್ ಸಮಿತಿ ಮುಸ್ಲಿಂ ಸಮುದಾಯದ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಹಿಂದುಳಿಯುವಿಕೆಯ ಬಗ್ಗೆ ಅಧ್ಯಯನ ಮಾಡಿ ವರದಿ ಕೊಟ್ಟ ಮೇಲೆ ಈ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಈ ಹಿಂದೆ 1980ರಲ್ಲಿಯೂ ಇಂತಹ ಒಂದು ಸಮಿತಿ ನೇಮಿಸಲಾಗಿದ್ದು, ಡಾ.ಗೋಪಾಲ್‌ಸಿಂಗ್ ಅಧ್ಯಕ್ಷತೆಯ ಈ ಸಮಿತಿ 1983ರಲ್ಲಿ ಹಲವು ಶಿಫಾರಸ್ಸುಗಳನ್ನು ಮುಂದಿಟ್ಟಿತು. ಆದರೆ ಆಗ ಅವುಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ.


ಸಾಚಾರ್ ಸಮಿತಿ ನೇಮಕವಾದಾಗ ಬಿಜೆಪಿ ಮತ್ತಿತರ ಬಲಪಂಥೀಯ ಸಂಘಟನೆಗಳು ಮತ್ತೆ ಎಂದಿನಂತೆ ಮುಸ್ಲಿಂ ತುಷ್ಟೀಕರಣದ ಬೊಬ್ಬೆ ಎಬ್ಬಿಸಿದವು. ಆದರೆ ಅವರ ಪ್ರತಿಪಾದನೆಗಳೆಲ್ಲಾ ಹಸೀ ಸುಳ್ಳು. ಅವರ ಬೊಬ್ಬೆಗೆ ಆಧಾರವೇ ಇಲ್ಲ ಎಂಬುದು ಸಾಚಾರ್ ಸಮಿತಿ ಕಲೆ ಹಾಕಿರುವ ವಿವರಗಳಿಂದ ಮತ್ತೊಮ್ಮೆ ಸಾಬೀತಾಗುತ್ತದೆ.

ಮುಸ್ಲಿಂ ಸಮುದಾಯ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷ... ದಯನೀಯ ಸ್ಥಿತಿಯಲ್ಲಿದೆ ಮಾತ್ರವಲ್ಲ ತಾರತಮ್ಯದ ಭಾವನೆ ಬೇರೂರುವಂತೆ ಆಗಿದೆ ಎಂಬುದು ಸಾಚಾರ್ ಸಮಿತಿಯ ವರದಿಯಿಂದ ಮತ್ತೊಮ್ಮೆ ಸ್ಪಷ್ಟವಾಗುತ್ತದೆ.

2001ರ ಜನಗಣತಿ ಪ್ರಕಾರ ದೇಶದ ಜನಸಂಖ್ಯೆಯಲ್ಲಿ 13.4 ಶೇ. ಇರುವ ಮುಸ್ಲೀಮರಲ್ಲಿ ಬಡತನ ಗರಿಷ್ಟ ಮಟ್ಟದಲ್ಲಿದೆ. ಸಾಕ್ಷರತೆಯ ಮಟ್ಟವೂ ಸಮಾಜದ ದಲಿತ ವಿಭಾಗಗಳಿಗಿಂತಲೂ ಕಡಿಮೆಯಿದೆ. ಪದವೀಧರರಲ್ಲಿ ಮತ್ತು ಸ್ನಾತಕೋತ್ತರ ಅಧ್ಯಯನಗಳಲ್ಲೂ ಮುಸ್ಲೀಮರ ಪ್ರಮಾಣ ಬಹಳ ಕಡಿಮೆ. ಮದ್ರಸಾಗಳಲ್ಲಿ ಧಾರ್ಮಿಕ ಶಿಕ್ಷಣವನ್ನು ಮುಸ್ಲಿಂ ಪೋಷಕರು ಬಯಸುತ್ತಾರಾದ್ದರಿಂದ ಮುಸ್ಲಿಮರ ನಡುವೆ ಸಾಕ್ಷರತೆಯ ಮಟ್ಟ ಕೆಳಗಿದೆ ಎಂಬ ಗ್ರಹಿಕೆಗೂ ಏನೂ ಆಧಾರವಿಲ್ಲ ಎಂಬುದನ್ನು ಸಮಿತಿ ತೋರಿಸಿಕೊಟ್ಟಿದೆ. ಕೇವಲ 3 ಶೇಕಡಾ ಶಾಲಾ ವಯಸ್ಸಿನ ಮಕ್ಕಳು ಮದ್ರಸಾಗಳಿಗೆ ಹೋಗುತ್ತಾರಷ್ಟೇ. ಕಿತ್ತು ತಿನ್ನುವ ಬಡತನ ಮತ್ತು ಕನಿಷ್ಟ ಶೈಕ್ಷಣಿಕ ಸೌಲಭ್ಯಗಳ ಮತ್ತು ಭದ್ರತೆಯ ಅಲಭ್ಯತೆಯೇ ಮುಖ್ಯ ಕಾರಣ ಎಂದು ಕಂಡುಬಂದಿದೆ.

ಸರ್ಕಾರಿ ಮತ್ತು ಸಾರ್ವಜನಿಕ ಉದ್ದಿಮೆಗಳ ಉದ್ಯೋಗಗಳಲ್ಲಿ ಮುಸ್ಲಿಮರ ಪ್ರಮಾಣ ಶೇಕಡಾ 5ನ್ನೂ ಮೀರಿಲ್ಲ (ಜನಸಂಖ್ಯೆಯಲ್ಲಿ 13.4 ಶೇ.ದೊಂದಿಗೆ ಹೋಲಿಸಿ ನೋಡಿ) ಇನ್ನೊಂದೆಡೆ ಯಾವುದೇ ರೀತಿಯ ನಿರಂತರತೆ ಅಥವಾ ಸಾಮಾಜಿಕ ಭದ್ರತೆಯಿಂದ

ಪುಟ 11 ಕ್ಕೆ



ಯಾರಬ್‌ನಗರವೆಂಬ ಭಾರತದ ಪ್ರತಿಬಿಂಬ

ಯಾರಬ್ ನಗರ ಬೆಂಗಳೂರು ಮಹಾನಗರದ ಒಂದು ಪುಟ್ಟ ಬಡಾವಣೆ. ಬೆಂಗಳೂರಿನ ಪ್ರಸಿದ್ಧ ಬನಶಂಕರಿ ದೇವಾಲಯದ ಸಮೀಪದಲ್ಲೇ ಇದು ಇದೆ. ಮುಸ್ಲೀಮರು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದಿದ್ದಾರೆ ಎಂದು ಹೇಳುವುದಕ್ಕೆ ಸಾಚಾರ್ ಸಮಿತಿ ಅಥವಾ ಅಂತಹ ಮತ್ಯಾವುದೋ ದೊಡ್ಡ ದೊಡ್ಡ ಸಮಿತಿಗಳ ಅಧ್ಯಯನ ವರದಿ, ಬೃಹತ್ ಗ್ರಂಥಗಳೇನನ್ನೂ ಓದಬೇಕಾಗಿಲ್ಲ.

ಸ್ವಲ್ಪ ಕಣ್ಣು, ಕಿವಿ ತೆರೆದಿಟ್ಟುಕೊಂಡು ಇಂತಹ ಬಡಾವಣೆಯಲ್ಲಿನ ಎರಡು ಗಲ್ಲಿಯನ್ನು ಸುತ್ತು ಹೊಡೆದರೂ ಸಾಕು. ಬೆಂಗಳೂರಿನಲ್ಲೇ ಇಂತಹ ಹತ್ತಾರು ಮುಸ್ಲಿಂ ಬಡಾವಣೆಗಳು ಸಿಗಬಹುದು. ದೇಶದಲ್ಲಿ ಇಂಥವು ನೂರಾರು ಸಾವಿರಾರು ಸಿಗಬಹುದು. ಅವುಗಳ ಮೂಲಭೂತ ಲಕ್ಷಣಗಳು ಮಾತ್ರ ಬಹುತೇಕ ಒಂದೇ.

ಇದೋ ಇಲ್ಲಿ ಇಬ್ಬರು ಹುಡುಗರು ಮೂರೋ ಅಥವಾ ನಾಲ್ಕೋ ಕ್ಲಾಸಿನ ತರಗತಿಗೆ ಹೋಗಿ ಕೂರಬೇಕಾದ ವಯಸ್ಸಿನವರು ಯಾರಬ್‌ನಗರದ ಮುಖ್ಯರಸ್ತೆಯ ವರ್ಕ್‌ಶಾಪ್‌ನಲ್ಲಿ ಮೈ, ಕೈ ಎಲ್ಲಾ ಮಸಿ ಮೆತ್ತಿಕೊಂಡು ದುಡಿಮೆ ಮಾಡುತ್ತಿದ್ದಾರೆ. ಇಂಥದ್ದೊಂದು ದೃಶ್ಯ ಕಂಡರೆ ಸಾಕು. ಇಲ್ಲೆಲ್ಲೋ ಹತ್ತಿರದಲ್ಲಿ ಮುಸ್ಲಿಮರ ಬಡಾವಣೆ ಇದೆ ಅಂತ ನೀವು ಥಟ್ಟಂತ ಯೋಚಿಸಬಹುದು. ಇದು ಯಾರಬ್‌ನಗರದ ಮುಖ್ಯರಸ್ತೆ.

ಸ್ವಲ್ಪ ಒಳಗೆ ಗಲ್ಲಿಯಲ್ಲಿ ಹೆಜ್ಜೆ ಹಾಕೋಣ ಅಂತ ಹೊರಟರೆ ನಮಗೆ ಅಲ್ಲಿ ತತ್‌ಕ್ಷಣ ಎದುರಾದ ಪ್ರಕರಣ ಮನೆ ಕುಸಿತದ್ದು. ಕೆಳಗೆ ಎಡಮೂಲೆಯಲ್ಲಿರುವ ಚಿತ್ರದಲ್ಲಿರುವಾಕೆ ಶಾಲತ್ ನಿಸಾ. ಕಳೆದ ವಾರದ ಸುರಿದ ಮಳೆಗೆ ಈಕೆಯ ಗುಡಿಸಲು ಗೋಡೆ ಕುಸಿದು ಬಿದ್ದಿದೆ.

ಅದೃಷ್ಟವಶಾತ್ ಯಾರೂ ಸಾಯಲಿಲ್ಲ. ಆದರೆ ಆಕೆಗೆ ಈಗ ದಿಕ್ಕು ತೋಚುತ್ತಿಲ್ಲ. ಗಂಡನಿಗೆ ಎಲ್ಲಿ ತೋರಿದರೂ ವಾಸಿಯಾಗದ ಖಾಯಿಲೆ. ಜೀವನ ದೂಡುವುದು ಕಷ್ಟ. ಇಷ್ಟಾದರೂ ತಾನು ಹೇಗೋ ದುಡಿದು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದಾಳೆ.

ಮನೆ ಗೋಡೆ ಬಿತ್ತು. ಯಾರು ಕೇಳುವವರಿಲ್ಲ. ಎಂಥ ಪರಿಹಾರದ ಸುಳಿವೂ ಇಲ್ಲ. ಎಂಥಾಂದ್ದರೂ ಒಂದು ಪುಟ್ಟ ಮನೆ ಕಟ್ಟಿಕೊಳ್ಳಲು ಯಾವುದೋ ಸಾಲ, ಸೌಲಭ್ಯವನ್ನು ಆಶ್ರಯ, ಪಾಶ್ರಯ ಎಂಥದ್ದೂ ಈಕೆಯ ಪಾಲಿಗಿಲ್ಲ. 30 ವರ್ಷಗಳ ಹಿಂದೆ 20-25 ಅಡಿಗಳ ಅಳತೆಯ ಈ ಸೈಟೊಂದು ಸರ್ಕಾರದಿಂದ ಸಿಕ್ಕಿದೆ. ಅದು ಬಿಟ್ಟರೆ ಬೇರೆನಿಲ್ಲ.

ನಾಲ್ಕು ಹೆಜ್ಜೆ ದಾಟಿ ಪಕ್ಕದ ಗಲ್ಲಿಗೆ ಬಂದರೆ ಅಲ್ಲಿ ನಮಗೆ ಕಂಡದ್ದು ಇನ್ನೊಂದು ಮುರುಕಲು ಗುಡಿಸಲು. ಇಲ್ಲಿ ಗುಡಿಸಲಿನ ಒಳಗೆ ತನ್ನ ಮಕ್ಕಳು, ಮೊಮ್ಮಕ್ಕಳೊಂದಿಗೆ ಕುಳಿತಿದ್ದಾರಲ್ಲ. ಅವರ ಹೆಸರು ಸಾಜಿದಾ ಬೇಗಂ ವಯಸ್ಸು 50. ಬಂಬೂ ಬಜಾರ್‌ನಲ್ಲಿ ಕಬ್ಬಿಣದ ವ್ಯಾಪಾರ ಮಾಡುತ್ತಿದ್ದ ಗಂಡ 15 ವರ್ಷದ ಹಿಂದೆ ಅಪಘಾತದಲ್ಲಿ ತೀರಿಕೊಂಡಿದ್ದಾರೆ.

7 ಜನ ಮಕ್ಕಳು, 8ನೇ ತರಗತಿ ಓದಿರುವ ಸಬ್ರಿನ್ ತಾಜ್ ಒಬ್ಬಳೇ ಹೈಸ್ಕೂಲು ಮೆಟ್ಟಿಲು ಹತ್ತಿದ್ದು, ಉಳಿದವರೆಲ್ಲಾ 2,3,4ನೇ ಕ್ಲಾಸು ಓದುವಾಗಲೇ ಶಿಕ್ಷಣ ಎನ್ನುವ ಮಲ್ಲ ಕಂಬ ಹತ್ತಲಾರದೇ ಜಾರಿಕೊಂಡಿದ್ದಾರೆ. ಬಡತನ ಇದರನ್ನು ಜಗ್ಗಿ ಹಿಂದಕ್ಕೆಳೆದಿವೆ. ಹುಟ್ಟೇ

ಪುಟ 11 ಕ್ಕೆ

ಕರ್ನಾಟಕದಲ್ಲಿ ಮುಸ್ಲಿಮರು

ಭಿನ್ನವಲ್ಲ ಈ ಬದುಕು

2001 ರ ಜನಗಣತಿಯ ಪ್ರಕಾರ ಕರ್ನಾಟಕದ ಜನಸಂಖ್ಯೆಯ ಶೇಕಡಾ 12.2 ರಷ್ಟಿರುವ ಮುಸ್ಲಿಮರ ಸಂಖ್ಯೆ 64,63,127. ಬೆಂಗಳೂರು, ಕಲಬುರ್ಗಿ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಮುಸ್ಲಿಮರ ಪ್ರಾಬಲ್ಯ ಹೆಚ್ಚಾಗಿರುವ ನಮ್ಮ ದೇಶದ ಮೊದಲ 100 ಜಿಲ್ಲೆಗಳ ಸಾಲಿಗೆ ಈ ಮೂರು ಜಿಲ್ಲೆಗಳು ಸೇರುತ್ತವೆ. ಕರ್ನಾಟಕದ ಮುಸ್ಲಿಮರ ಶೇಕಡಾ 75 ರಷ್ಟು ಮಂದಿಯ ಮಾತೃಭಾಷೆ ಉರ್ದು. ಪಟ್ಟಣ ಪ್ರದೇಶಗಳಲ್ಲಿ ಬದುಕುತ್ತಿರುವ ಮುಸ್ಲಿಮರ ಸಂಖ್ಯೆ ಹೆಚ್ಚು.

ಕರ್ನಾಟಕಧ ಮುಸ್ಲಿಮರ ಸಾಮಾಜಿಕ ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಾನಮಾನ ದೇಶದ ಉಳಿದೆಡೆಗಿಂತ ಭಿನ್ನವಾಗೇನೂ ಇಲ್ಲ. ಅನನ್ಯತೆ, ಭದ್ರತೆ ಹಾಗೂ ಹಿಂದುಳಿಯುವಿಕೆಯ ವಿಷಯಗಳಲ್ಲಿ ಉಳಿದ ರಾಜ್ಯಗಳ ಸ್ಥಿತಿ ಕರ್ನಾಟಕದಲ್ಲೂ ಇದೆ.

ಮುಸ್ಲಿಮರು ಕರ್ನಾಟಕದಲ್ಲಿ ಎದುರಿಸುತ್ತಿರುವ ಬಹು ದೊಡ್ಡ ಸಮಸ್ಯೆ ಭದ್ರತೆಯದು. ನಿಜವಾಗಿ, ಕೋಮು ಗಲಭೆಗಳಲ್ಲಿ ಮುಸ್ಲಿಮರು ಹೆಚ್ಚಿನ ಹಾನಿಗೆ ಒಳಗಾಗಿದ್ದಾರೆ. 1990 ರ ಕೋಮು ದಳ್ಳುರಿಯಲ್ಲಿ ಗಣನೀಯ ಸಂಖ್ಯೆಯ ಮುಸ್ಲಿಮರ ಬದುಕು ನಾಶವಾಗಿದೆ. ಚನ್ನಪಟ್ಟಣದ ಬಳಿ ಇರುವ ಕಾಳಮುದ್ದನದೊಡ್ಡಿಯಲ್ಲಿ ಆಟದ ಗೊಂಬೆ ತಯಾರಿಸುವ ಕೈಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಮುಸ್ಲಿಮರು 1990 ರಲ್ಲಿ ಸಂಪೂರ್ಣವಾಗಿ ನಿರ್ನಾಮವಾಗಿ ಹೋಗಿದ್ದಾರೆ. ಅದೇ ರೀತಿಯಲ್ಲಿ, ಪದೇ ಪದೇ ಕೋಮು ವಿಷಜ್ವಾಲೆಯಲ್ಲಿ ಬೆಂದ ಭಟ್ಕಳದಲ್ಲಿ ಮುಸ್ಲಿಮರ ವ್ಯಾಪಾರ ಮತ್ತು ವಾಣಿಜ್ಯದ ಮೇಲೆ ತೀವ್ರತರದ ಪರಿಣಾಮ ಉಂಟಾಗಿದೆ. ಕೋಲಾರದಲ್ಲಿ ಮುಸ್ಲಿಮರ ಅಂಗಡಿ ಮುಗ್ಗಟ್ಟುಗಳು ಹಾಗೂ ಮಾವಿನ ತೋಪುಗಳು ಕೋಮು ಘರ್ಷಣೆಯಲ್ಲಿ ನಾಶಗೊಂಡಿವೆ. ಜನತಾದಳ(ಜಾ) ಪಕ್ಷದ ಜತೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲಂತೂ ಮುಸ್ಲಿಮರ ಸ್ಥಿತಿ ಇನ್ನೂ ಹದಗೆಟ್ಟಿದೆ. ಇತ್ತೀಚಿಗೆ ಬೆಂಗಳೂರು ಮತ್ತು ಮಂಗಳೂರಿನಲ್ಲಿ ಕೋಮುಗಲಭೆ ಗಳಾದಾಗ, ಸರ್ಕಾರ ಮತ್ತು ಪೋಲಿಸ್ ತಾರತಮ್ಯದ ಧೋರಣೆ ಅನುಸರಿಸಿದವು. ಹುಬ್ಬಳ್ಳಿಯ ಈದ್ಗಾ ಮೈದಾನ ಹಾಗೂ ಬಾಬಾಬುಡನ್ ಗಿರಿಯ ದತ್ತಪೀಠ ವಿವಾದಗಳನ್ನು ಜೀವಂತವಾಗಿಡುವುದರ ಮೂಲಕ ಬಿಜೆಪಿ ಕರ್ನಾಟಕದಲ್ಲಿ ಕೋಮುವಿದ್ವೇಷದ ಕಾವನ್ನು ಹೆಚ್ಚಿಸುತ್ತಿದೆ. ಇವುಗಳ ಫಲವಾಗಿ, ಮುಸ್ಲಿಮರು ಸದಾ ಭೀತಿ ಮತ್ತು ಅಭದ್ರತೆಯ ನೆರಳಲ್ಲೇ ಬದುಕುವಂತಾಗಿದೆ.



ಸಾಮಾನ್ಯವಾಗಿ, ಕರ್ನಾಟಕದ ಮುಸ್ಲಿಮರ ಬದುಕಿನ ಸ್ಥಿತಿ ಕೆಳಸ್ತರದಲ್ಲೇ ಇದೆ. ಪಟ್ಟಣ ಹಾಗೂ ಗ್ರಾಮೀಣ ಪ್ರದೇಶ ಎರಡೂ ಕಡೆಗಳಲ್ಲಿ ಬಡತನದ ಹೊರೆ ಹೆಚ್ಚೇ ಇದೆ. ರಾಜ್ಯದ ನಗರ ಪ್ರದೇಶಗಳ ಬಡತನದ ಸರಾಸರಿ ಶೇಕಡಾ 30 ಕ್ಕೆ ಹೋಲಿಸಿದರೆ ಮುಸ್ಲಿಮರಲ್ಲಿನ ಬಡವರು ಶೇಕಡಾ 45 ರಷ್ಟಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲೂ ಹೆಚ್ಚೂಕಮ್ಮಿ ಇದೇ ಪರಿಸ್ಥಿತಿ ಇದೆ. ಮುಸ್ಲಿಮರು ದೊಡ್ಡ ಪ್ರಮಾಣದಲ್ಲಿ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದರಿಂದ ಜಮೀನು ಹೊಂದಿರುವವರ ಸಂಖ್ಯೆ ಬಹಳ ಕಡಿಮೆ.

ಶೈಕ್ಷಣಿಕವಾಗಿ ಕರ್ನಾಟಕದ ಮುಸ್ಲಿಮರು ಹಿಂದಿದ್ದಾರೆ. 7 ನೇ ತರಗತಿಯ ನಂತರ ಶಿಕ್ಷಣ ಪಡೆದ ಮುಸ್ಲಿಮರ ಸಂಖ್ಯೆ ಅತ್ಯಂತ ಕಡಿಮೆ. ಮುಸ್ಲಿಮರಲ್ಲಿ ಕೇವಲ ಶೇಕಡಾ 3 ರಷ್ಟು ಮಾತ್ರ ಪದವೀಧರರಿದ್ದಾರೆ. ಹೀಗಿದ್ದಾಗ್ಯೂ, ಸಾಕ್ಷರತೆಯ ಮಟ್ಟ ಮತ್ತು 7 ರಿಂದ 16 ವಯಸ್ಸಿನವರೆಗಿನ ಶಾಲೆಗೆ ಹೋಗುವವರ ಸಂಖ್ಯೆ ರಾಜ್ಯ ಸರಾಸರಿಗೆ ಹೋಲಿಸಿದರೆ ಮುಸ್ಲಿಮರಲ್ಲಿ ಕಡಿಮೆಯೇನಿಲ್ಲ. ಉರ್ದು ಮಾತನಾಡುವ ಮಕ್ಕಳಿಗೆ ಅವರ ಮಾತೃಭಾಷೆಯಲ್ಲೇ ಶಿಕ್ಷಣ ನೀಡುವ ಉರ್ದು ಶಾಲೆಗಳ ಸಂಖ್ಯೆ ಹೆಚ್ಚಿರುವುದೇ ಇದಕ್ಕೆ ಕಾರಣವಿರಬಹುದು. "ಉರ್ದು ಮಾಧ್ಯಮ ಶಾಲೆಗಳಲ್ಲಿನ ಉಪಾಧ್ಯಾಯರ ಸಂಖ್ಯೆ ಹೆಚ್ಚಾಗಿರುವುದೊಂದೇ ಅಲ್ಲ, ಅವರ ಲಿಂಗಾಧಾರಿತ ವಿಭಜನೆ

ಪುಟ 11 ಕ್ಕೆ



ಜನಶಕ್ತಿ ಕನ್ನಡ ವಾರಪತ್ರಿಕೆ
ಆಗಸ್ಟ್ 05, 2007



ಪಿಸುಮಾತು ಬಹುದೂರ ಕೇಳುತ್ತೆ

- ಚೀನಿ ಗಾದೆ



ಪ್ರೀತಿ ಸ್ನೇಹದ ಸೇತುವೆಯನ್ನು ಮುರಿದು ಹಾಕಲು ನಡೆಯುತ್ತಿರುವ ಈ ಕೇಂದ್ರಗಳು ಯಾರಿಗಾದರೂ ಒಪ್ಪಿಕೊಳ್ಳಲು ಸಾಧ್ಯವೇ...?

ಹಾಲ್ದಿಂಗಳ ಕೆಳಗೆ ಸ್ನೇಹದ ಸೇತು

ಕಳೆದ ವರ್ಷವದು ಜನವಾದಿಯ ಬೆಳ್ಳಿ ಹಬ್ಬದ ಸಂಭ್ರಮ ಮತ್ತು ನಿಭಾಯಿಸಬೇಕಾದ ಜವಾಬ್ದಾರಿಯ ನೊಗವನ್ನು ಹೆಗಲಿಗೇರಿಸಿಕೊಂಡು ಊರೂರು ಸುತ್ತುವ ಹೊತ್ತಲ್ಲಿ ದಣಿವೆಂಬುದು ಅಕ್ಷರಶಃ ಅರಿವಿಗೆ ಬರುತ್ತಿರಲಿಲ್ಲ. ಭೂಮಂಡಲ ಸುತ್ತಲಿಕ್ಕೆಂದೇ ಹುಟ್ಟಿದ ಜನದಂತೆ ನಾಲ್ಕೈದು ಸಂಗಾತಿಗಳು ಎಲ್ಲೆಂದರಲ್ಲಿ ಥಟ್ಟಂತ ಅವತರಿಸಿ ಬಿಡುತ್ತಿದ್ದೆವು. ಆ ಉಮೇದು, ಉತ್ಸಾಹ, ಛಲದ ಕಾರಣವಾಗಿ ಹಾದಿಯುದ್ದಕ್ಕೂ ಹರಡಿಕೊಂಡ ಮೊನಚು ಮುಳ್ಳುಗಳು, ಚೂಪುಗಲ್ಲುಗಳು ಲೆಕ್ಕಕ್ಕೇ ಬರುತ್ತಿರಲಿಲ್ಲ. ನೇತಾಡುವ ಬ್ಯಾಗಿನೊಳಗಿಷ್ಟು ಹಣ, ಕಂಡದ್ದನ್ನೆಲ್ಲ ದಾಖಲಿಸಲಿಕ್ಕಾಗಿ ಡೈರಿ ಪೆನ್ನು, ಟೇಪ್ ರೆಕಾರ್ಡರ್ ಹೊತ್ತು ಹೊರಟರೆ ಮರಳಿ ಊರು ಸೇರುವ ದಿನ ನಿಖರವಿರುತ್ತಿರಲಿಲ್ಲ.

ಅಂದು ಹಾಗೆಯೇ .ಆಯಿತು. ನಾವು ಭೇಟಿಯಾಗಬೇಕಾದ ವ್ಯಕ್ತಿ ಸಿಗಲಿಲ್ಲ. ಸರಿ, ಮಾಡುವುದೇನು...? ತುಂಬ ಚಿಕ್ಕವಳಿದ್ದಾಗ ಒಮ್ಮೆ ಮಾಣಿಕ ಪ್ರಭುವಿನ ಸಂಸ್ಥಾನಕ್ಕೆ ಬಂದಿದ್ದು ಬಿಟ್ಟರೆ ಈ ನಡುವೆ ಆ ಕಡೆ ಬಂದಿರಲಿಲ್ಲ. ಸುಮ್ಮನೆ ಸುತ್ತಾಡಿ ಬಂದರಾಯ್ತೆಂದು 'ಮಾಣಿಕ ಪ್ರಭು' ಸಂಸ್ಥಾನದತ್ತ ಹೊರಟೆವು.ರಸ್ತೆ ತುಂಬ ಕೆಮ್ಮಣ್ಣು ಹರಿದು ಬರುವ ಗಾಳಿ ಮೈಗೆ ಬಣ್ಣ ಸವರುತ್ತಿತ್ತು. ಬಿಟ್ಟು ಬಿಟ್ಟು ಬಿಸಿ ಚೆಲ್ಲುವ ಸೂರ್ಯನಡಿಯಲ್ಲಿ ನಮ್ಮ ಹೆಜ್ಜೆಗಳು ಬಿರುಸಾಗಿ, ಮಾಣಿಕಪ್ರಭುವಿಗೊಂದು ಸುತ್ತು ಬಂದೆವು. ಹಸಿರಂಗಿ, ತಲೆಗೊಂದು ಪಗಡಿ, ಸರ್ವಧರ್ಮಗಳ ಸಂಕೇತದಂತೆ ಕಾಣುವ ಅರೆಬಿರಿದ ಕಣ್ಗಳ ಮಾಣಿಕ ಪ್ರಭುವಿನ ಬಗ್ಗೆ ಮಾತಾಡುತ್ತ ಬಲಗಡೆ ಪ್ರಾಂಗಣದಲ್ಲಿ ಕಾಣಿಸಿಕೊಳ್ಳುವ ಮೆಟ್ಟಿಲು ಹತ್ತಿ ಮೇಲೆ ಹೋದರೆ, ಉದ್ದಕ್ಕೂ ಹತ್ತಾರು ಕೋಣೆಗಳು, ಬೋಡು ತಲೆಯ, ನೂಲುಧಾರಿ ಪುಟ್ಟ ಪುಟ್ಟ ಮಕ್ಕಳು ಕಾಣಿಸಿದರು. ನಮಗೆ ಕುತೂಹಲವಾಗಿ, ಆ ಮಕ್ಕಳನ್ನು ಮಾತಾಡಿಸಿದೆವು.

ಎಂಟು ವರ್ಷದ ಬಾಲಕ. ಬೋಡು ತಲೆಯ ಹಿಂಭಾಗಕ್ಕೆ ನೇತಾಡುವ ಪುಟ್ಟ ಜುಟ್ಟು. ಅಂಗಿಯಿಲ್ಲದ ಎದೆಯ ಮೇಲೆ ಅಡ್ಡಲಾಗಿ ಜನಿವಾರ. ಮಾಸಿದ ನೂಲಿನ ಧೋತರ. ಏನು ಕೇಳಿದರೂ ಪಟಪಟನೇ ಮಾತಿನ ದಾಳ ಉರುಳಿಸುವ ಪರಿಗೆ ಬೆರಗಾಗಲೇಬೇಕು. ವೇದಾಧ್ಯಯನಕ್ಕೆಂದು ನೂರು ಬ್ರಾಹ್ಮಣ ವಟುಗಳು ಸುಮಾರು ನಾಲ್ಕು ರಾಜ್ಯಗಳಿಂದ ಬಂದವರು. 'ನೀವು ಅಧ್ಯಯನ ಮಾಡುವ ಪುಸ್ತಕ ಕೊಡಿ' ಎಂದರೆ ಥಟ್ಟಂತ 'ಇಲ್ಲ... ಇಲ್ಲ...ನೀವು ಹೆಂಗಸರು ಅದನ್ನು ಮುಟ್ಟಿದರೆ ಪಾಪ ತಗಲುತ್ತದೆ' ಎಂದು ಬಲು ಮುಗ್ಧತೆಯಿಂದ ಉತ್ತರಿಸಿದ್ದಕ್ಕೆ ನಾವು ನಗುತ್ತಾ, 'ಪಾಪ ತಗಲಿದ್ರೆ ನಮಗೆ ತಗಲ್ತದೆ. ನಿನಗಲ್ಲಲ್ಲ..' ಎಂದೆವು. ಆ ಹುಡುಗ ತಕ್ಷಣಕ್ಕೆ ನಕ್ಕರೂ ತುಂಬ ಚಾಲಾಕಿನಂತೆ ವರ್ತಿಸಿದ. ಖಾನಾಪುರ, ನಾನು ಮತ್ತು ಗೆಳತಿಯರೆಲ್ಲ ಬೇಕೆಂದೇ ಅನೇಕ ವಿಷಯ ಕೆದಕಿ ತೆರೆದರೆ ಗಾಬರಿಯಾಗುವಂತಹ ಸಂಗತಿಗಳು ಈಚೆ ಬಂದವು. ಸರ್ವಧರ್ಮಗಳ ಸಮನ್ವಯ ಆಚರಣೆಯ ಕೇಂದ್ರವಾಗಿರುವ ಮಾಣಿಕ ಪ್ರಭುವಿನ ಮಠವು ಸಂಪೂರ್ಣ 'ಸನಾತನಿ' ಗಳ ಅಡ್ಡೆಯಾಗಿರುವುದು ಮತ್ತು ಈಚೆಗೆ 6 ವರ್ಷಗಳಿಂದ ಬ್ರಾಹ್ಮಣ ವಟುಗಳಿಗಾಗಿ 'ವೇದ ಪಾಠಶಾಲೆ' ಸುರುವಾಗಿರುವುದು, ಮಕ್ಕಳಿಗೆ ಪಾಠ ಮಾಡಲು ಶೃಂಗೇರಿಯಿಂದ ಶಿಕ್ಷಕನೊಬ್ಬ ಇಲ್ಲಿಯೇ ಠಿಕಾಣಿ ಹೂಡಿರುವುದು ಎಲ್ಲವೂ ಬಯಲಾದವು, ನನಗೆ ಸಾಗರದ, ವನಾರಣ್ಯದ ನಡುವೆ ಇರುವ ವೈದಿಕ ಶಿಕ್ಷಣ ಕೇಂದ್ರವಾದ ಶ್ರೀಧರಾಶ್ರಮ ನೆನಪಿಗೆ ಬಂದಿತು. ಹಿಂದೂ ಮಂದಿರಗಳ ಪೂಜಾರಿಕೆ, ಹಿಂದೂ ಧರ್ಮ ಪ್ರಚಾರದ ಪ್ರಮುಖ ಉದ್ದೇಶ ಹೊಂದಿರುವ ವೈದಿಕ ಪಾಠಶಾಲೆಗಳು ಸನಾತನ ವ್ಯವಸ್ಥೆಯನ್ನು ಗಟ್ಟಿಗೊಳಿಸಲೆಂದೇ ಇರುವ ತಾಣಗಳು. ಅದೂ 'ಮಾಣಿಕ ಪ್ರಭು' ಸಂಸ್ಥಾನದಂಥದಲ್ಲಿ ಇವರ ಚಟುವಟಿಕೆ! ಮಲೆನಾಡಿನ ಕಾಡಲ್ಲಿ ಹಿಂಸೆ ಪ್ರತಿಪಾದಿಸುವ ತಪ್ಪು ಸಿದ್ಧಾಂತಗಳು ಬಂದೂಕು ಹಿಡಿದು ಠಳಾಯಿಸುತ್ತಿದ್ದರೆ ಮಲೆನಾಡಿನಾದ್ಯಂತ ಮಾನವೀಯತೆಯನ್ನೇ ಹೊಸಕಿ ಹಾಕುವಂಥ ಸಂಘ ಪರಿವಾರಗಳನ್ನು ಸಿದ್ಧಗೊಳಿಸುವ ಇಂಥ ಸನಾತನ ಕೇಂದ್ರಗಳು ಬಹಳ ವರ್ಷಗಳಿಂದ ಕಾರ್ಯತತ್ಪರವಾಗಿವೆ.

ಸರ್ವಮತಾಚಾರ್ಯ ಕೇಂದ್ರ ಸ್ಥಾಪಿಸಿದ ಮೊದಲನೆಯ ಮಾಣಿಕ ಪ್ರಭು ನಾಥ ಪರಂಪರೆಯ ಪ್ರತಿಪಾದಕ. ಮಾನವೀಯತೆ ಬೋಧಿಸುವ ಈತ ಅವಧೂತ ದತ್ತ, ನಾಥ, ಅವಧೂತ, ಆರೂಢ ಪರಂಪರೆಗಳೆಲ್ಲ ತಮ್ಮ ಇತಿಮಿತಿಯಲ್ಲಿಯೇ ಈ ನೆಲದ ಸೌಹಾರ್ದತೆಯ ಬೇರನ್ನು ಮತ್ತಷ್ಟು ಗಟ್ಟಿಗೊಳಿಸಿವೆ. ಅಂತೆಯೇ ಎಲ್ಲ ಧರ್ಮಗಳ ಜನತೆಯು ಎರಡರಿಯದ ಭಕ್ತಿಯಿಂದ ನಡೆದುಕೊಳ್ಳುವುದಿದೆ. ಪಾಳೇಗಾರಿ ಜಾತಿ, ವರ್ಗ, ವರ್ಣ, ಲಿಂಗ ವ್ಯವಸ್ಥೆಯ ತಾರತಮ್ಯದ ವಿರುದ್ಧ ದನಿಯೆತ್ತಿದ ಕ್ರಾಂತಿಯ ನಾಡು ಬಸವಕಲ್ಯಾಣ ತಾಲ್ಲೂಕಿನ ಲಾಡವಂತಿಯಲ್ಲಿ ಜನಿಸಿದ ಶ್ರೀ ಮಾಣಿಕ ಪ್ರಭು ಸ್ಥಾಪಿಸಿದ ಈ ಸಂಸ್ಥಾನವು ಜೀವಪರ ಸಾಹಿತ್ಯ ಸಂಸ್ಕೃತಿಗೂ ಹೆಸರುವಾಸಿಯಾಗಿದೆ. ಪ್ರತಿ ವರ್ಷ ಡಿಸೆಂಬರ್‌ನಲ್ಲಿ ನಡೆಯುವ ಸಂಗೀತ ದರ್ಬಾರ್‌ನಲ್ಲಿ ದೇಶದ ಪ್ರಖ್ಯಾತ ಸಂಗೀತ ದಿಗ್ಗಜರೆಲ್ಲ ಬಂದು ಕಲಾ ಸುಧೆ ಹರಿಸಿದ್ದಾರೆ. ಹೀಗೆ ಸೂಫಿ ಸಂತರು, ನಾಥ, ಅವಧೂತ, ಆರೂಢರು, ವಚನಕಾರರು, ಪ್ರಗತಿಪರ ಸಂಘ ಸಂಸ್ಥೆಯ ಚಳುವಳಿಗಾರರು ಕಟ್ಟಿ ಬೆಳೆಸಿದ ಶಾಂತಿ ಸೌಹಾರ್ದ ನಾಡಿನಲ್ಲಿ ಸಂಘಪರಿವಾರಗಳು ಹಿಂಬಾಗಿಲಿನಿಂದ ಪ್ರವೇಶಿಸಿ ಕೋಮು ಬೀಜ ಬಿತ್ತುತ್ತಿರುವುದು ತೀವ್ರ ಆತಂಕದ ಸಂಗತಿಯಲ್ಲದೆ ಮತ್ತೇನು...? ಎಲ್ಲ ಜನಪರ ನೆಲೆಗಳನ್ನು ಪಲ್ಲಟಗೊಳಿಸುವ, ಹುನ್ನಾರಗಳ ಭಾಗವಾಗಿಯೇ ಬಾಬಾಬುಡನ್‌ಗಿರಿ, ಹಂಪಿ, ಹುಬ್ಬಳ್ಳಿ, ವಿಜಾಪುರದಂಥ ಘಟನೆಗಳು ಮತ್ತೆ ಮತ್ತೆ ಮರುಕಳಿಸುತ್ತಿವೆ. ಹೇಗಾದರೂ ಮಾಡಿ ಸುಳ್ಳು ಸೃಷ್ಟಿಸಿ ದಂಗೆ ಎಬ್ಬಿಸಿ ತಮ್ಮ ಅಧಿಕಾರದ ಬೇಳೆ ಬೇಯಿಸಿಕೊಳ್ಳುವ ಕೋಮುವಾದಿಗಳ ಕುತಂತ್ರಕ್ಕೆ ಸಾಮಾನ್ಯ ಜನರೇಕೆ ಬಲಿಯಾಗಬೇಕು?

ತೆರೆ ಮರೆಯ ಹಿಂದೆ ಹತ್ತಾರು ವರ್ಷಗಟ್ಟಲೆಯಿಂದ ನಡೆಯುತ್ತಿರುವ ಈ ಜನ ವಿರೋಧಿ ಪ್ರಯತ್ನಗಳು ಮುಂದೊಮ್ಮೆ ಈ ನಾಡನ್ನು ಅಪಾಯದ ಕುಂಡದಲ್ಲಿ ಬೇಯಿಸದೆ ಬಿಟ್ಟಾವೆಯೇ? ಭಕ್ತಿ, ಧರ್ಮ, ಆಧ್ಯಾತ್ಮದ ಮುಖವಾಡದ ಹಿಂದಿನ ಕ್ರೌರ್ಯವನ್ನು ಅರಿಯದಿದ್ದರೆ ಹೇಗೆ?

ಎಲ್ಲರಿಗೂ ಗೊತ್ತಿರುವಂತೆ ಸಂಘಪರಿವಾರಗಳು ಬೀದರ್ ಜಿಲ್ಲೆಯನ್ನು ಕೋಮುವಾದಿ ಜಿಲ್ಲೆಯಾಗಿಸಲು 'ದತ್ತು' ಮಾಡಿಕೊಂಡಿದ್ದಾರೆ. ಅದಕ್ಕೆಂದೇ 'ರಜಾಕಾರ್' ಚಳುವಳಿಯ ನೆನಪನ್ನು ಹಿಂದೂ ಮುಸ್ಲಿಂ ವೈಷಮ್ಯಕ್ಕೆ ಬಳಸಲು ಮುಂದಾಗಿದ್ದಾರೆ. ಆ ಚಳುವಳಿ ಅಂದಿನ ರಾಜಕೀಯ, ಆರ್ಥಿಕ, ಸಾಮಾಜಿಕ ಪ್ರಶ್ನೆ ಎಂಬುದನ್ನು ಮರೆ ಮಾಚಿ ಕೋಮುಗಳ ನಡುವಿನ ದಂಗೆ ಎಂಬ ಸುಳ್ಳನ್ನು ಪ್ರಚುರಗೊಳಿಸುತ್ತಿದ್ದಾರೆ. 'ರಜಾಕಾರ್' ಅಂದರೆ ಕೇವಲ ಮುಸ್ಲಿಂರೇ ಆಗಿರಲಿಲ್ಲ. ಅನೇಕ ಜನ ಹಿಂದೂಗಳೂ 'ರಜಾಕಾರ್' ಆಗಿದ್ದರು ಎಂಬ ಸತ್ಯವನ್ನು ಮರೆ ಮಾಚುತ್ತಿದ್ದಾರೆ.

ಇದೆಲ್ಲವನ್ನು ಹೀಗೆ ನಡೆಯಲು ಬಿಟ್ಟರೆ ಕ್ರಾಂತಿಯ ಕಲ್ಯಾಣ ಭೂಮಿ ಮುಂದೊಮ್ಮೆ ಏನಾಗಬೇಡ? ಎಳೆ ಮಕ್ಕಳನ್ನು ಜೀವ ವಿರೋಧಿಯಾಗಿ ಬೆಳೆಸುತ್ತಿರುವ ಪಳಗಿಸುತ್ತಿರುವ ಯಾವುದೇ ಕೋಮಿನ ಧಾರ್ಮಿಕ ಕೇಂದ್ರಗಳು ಖಂಡಿತ ಅಪಾಯಕಾರಿಯೇ.ಯಾಕೋ ಕಣ್ಣ ಕೊನೆಯಲ್ಲಿ ಆತಂಕದ ಹನಿ ಹನಿಯಾಗಿಸಿತು. ನಾನು ಹತ್ತಾರು ವರ್ಷಗಳ ಹಿಂದೆ ಹಣಿಕಿದೆ.

ನಾನಾಗ ಪಿಯುಸಿ. ನಮ್ಮ ಮನೆಯ ಬಾಜು ಮುಸ್ಲಿಂ ಮನೆ ಬಟ್ಟೆ ವ್ಯಾಪಾರಿ ಸೈಯದ್ ಭೈಯ್ಯಾನ ಹೆಂಡತಿ ಬಲು ಸುಂದರಿ. ಅವರ ಮನೆಯ ಹೆಬ್ಬಾಗಲು ಯಾವತ್ತೂ ಪರಧಾ ಹೊದ್ದಿರುತ್ತಿತ್ತು. ಎರಡೂ ಮನೆಯ ನಡುವೆ ಒಂದು ದೊಡ್ಡ ಗೋಡೆ ಬಿಂಕದಿಂದ ನಿಂತಿತ್ತು. ಮಕ್ಕಳಿಲ್ಲದ ಆ ಮನೆಯಲ್ಲಿ ಇಡೀ ದಿನ ಭೈಯ್ಯನ ಹೆಂಡತಿ ಅದು ಹೇಗೆ ದಿನ ಕಳೆಯುತ್ತಿದ್ದಳೋ... ನಮ್ಮ ಪಾಲಿಗೆ ಅದೊಂದು ಬೇರೆ ಲೋಕವೇ. ಒಂದು ಮಳೆಗಾಲ ಧೋ ಎಂದು ಸುರಿದ ಮಳೆಗೆ ಮಣ್ಣಿನ ಅಡ್ಡಗೋಡೆ ಅರ್ಧ ಕುಸಿದು ಆಚೆ ಮನೆಯು ಥಟ್ಟಂತ ನಮಗೆ ಗೋಚರಿಸಿತು. ಕ್ರಮೇಣ ಆ ಹೆಂಗಸು ನಮಗೆ ಭಾಭಿಯಾದಳು. ನಮ್ಮ ಮನೆಯ ಬೇಳೆ ಹೋಳಿಗೆಯ ಗಂಗಾಳ ಗೋಡೆಯಾಚೆ ಹೋದರೆ, ರುಚಿಕಟ್ಟಾದ ಕೊಬ್ಬರಿ ಹೋಳಿಗೆಯ ತಾಟು ಈಚೆ ಬರುತ್ತಿತ್ತು. ಅಜ್ಮೀರ್‌ನಿಂದ ತಂದ ಸುರಮಾ ಕರಡಿಕೆಯ ಚಿತ್ತಾರಕ್ಕೆ ಮನಸೋತು ಕಪಾಳದಾಚೆಗೂ ಕಡ್ಡಿ ಕೊರೆದು ಹಚ್ಚಿಕೊಂಡ ಕಾಡಿಗೆಯ ವೈಭವಕ್ಕೆ ಕಣ್ಣ ಕಾಂತಿ ಹೆಚ್ಚಿದಂತಾಗಿತ್ತು. ಸಂಜೆ ಇಳಿ ಹೊತ್ತಿನವರೆಗೂ ಮೋಟು ಗೋಡೆಯ ಮೇಲೆ ಕೈಯೂರಿ ಹಂಚಿಕೊಳ್ಳುವ ಮಾತುಗಳು. ಕಿಲ ಕಿಲ ನಗು, ಸರಿದ ದಿನಗಳು.... ಮಣ್ಣಿನ ಗೋಡೆ ಕರಕರಗಿ ಅರ್ಧಮರ್ಧ ಬಿದ್ದೇ ಹೋದಂತೆ. ಭಾಭಿಯ ಬಣ್ಣ ಹೊಳಪಾಗಿ ಮೈ ಕೈ ತುಂಬಿಕೊಂಡು ಅದೊಂದು ಮುಂಜಾನೆ ಒಳಬೋಲಿಯಲ್ಲಿ ಪುಟ್ಟ ಕಂದ ತುಟಿಯಗಲಿಸಿ ನಗುವುದನ್ನು ನೋಡಲು ಗೋಡೆ ದಾಟಿ ಹೋಗುವಾಗ ಇದ್ದ ಬದ್ದ ಗೋಡೆಯು ನೆಲಸಮವಾಗಿತ್ತು. ಶುಭ್ರ ನಿಲುವಂಗಿಯ ಭೈಯ್ಯ ಹೊಳೆವ ಕೂಸನ್ನು ನನ್ನ ಕೈಗಿಡುತ್ತ "ದೇಖೋ ಮುನ್ನಾ ತುಮ್ಹಾರಾ ಫುಫ್ಫಿ' (ನೋಡು ಕೂಸೆ ನಿನ್ನ ಸೋದರತ್ತೆ) ಅಂತ ಎದೆತುಂಬಿ ಹೇಳಿದ್ದನು. ಭಾಭಿ ಕಣ್ಣಲ್ಲಿ ಸ್ನೇಹದ ಕಡಲಿತ್ತು.

ಆ ಪ್ರೀತಿ ಸ್ನೇಹದ ಸೇತುವೆಯನ್ನು ಮುರಿದು ಹಾಕಲು ನಡೆಯುತ್ತಿರುವ ಈ ಕೇಂದ್ರಗಳು ಯಾರಿಗಾದರೂ ಒಪ್ಪಿಕೊಳ್ಳಲು ಸಾಧ್ಯವೇ...? ನಾನು ಟೇಪ್ ಆನ್ ಮಾಡಿದೆ. ಕಟ್ಟುತ್ತೇವೆ ನಾವು ಕಟ್ಟುತ್ತೇವೆ ನಾವು ಒಡೆದ ಮನಸುಗಳ, ಕಂಡ ಕನಸುಗಳ ಕಟ್ಟೇ ಕಟ್ಟುತ್ತೇವೆ... ಎನ್ನುವ ಹಾಡು ಕೇಳಿ ಬರತೊಡಗಿತು.

1857ರ ಬಂಡಾಯ.............

ಪುಟ 4 ರಿಂದ

ವಹಿಸಿತು. ಬಂಗಾಳ ಸೈನ್ಯ ನಡೆಸಿದ ಅತ್ಯಂತ ಪ್ರಮುಖ ಯುದ್ದಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

1. 1839-42ರ ಅವಧಿಯಲ್ಲಿ ಮೊದಲ ಆಫ್‌ಘನ್ ಯುದ್ಧ
2. 1840-42 ರಲ್ಲಿ ಕುಖ್ಯಾತ, ಅಫೀಮ್ ಯುದ್ಧದಲ್ಲಿ ಮತ್ತು 1856-60 ರಲ್ಲಿ ಮತ್ತೊಮ್ಮೆ ಚೈನಾದಲ್ಲಿ ಯುದ್ಧ ಮಾಡಬೇಕಾಯಿತು.
3. 1843ರಲ್ಲಿ ನಡೆದ ಗ್ವಾಲಿಯರ್ ಕದನ ಎರಡೂ ಪಕ್ಷಗಳಿಗೆ ಅಪಾರ ನಷ್ಟವನ್ನುಂಟು ಮಾಡಿದ ಯುದ್ಧವಾಗಿತ್ತು.
4. 1844ರ ಸಿಂಧ್ ಪ್ರಾಂತ್ಯದ ಮೇಲಿನ ಯುದ್ಧ ಮತ್ತು
5. 1845-46ರ ಪಂಜಾಬ್ ಯುದ್ಧಗಳು ಬಂಗಾಳ ಸೈನ್ಯಕ್ಕೆ ಅಪಾರ ಹಾನಿಯನ್ನುಂಟು ಮಾಡಿದವು.
6. 1848-49 ಮತ್ತು 1852ರಲ್ಲಿ 'ಬರ್ಮಾ' ದೊಂದಿಗೆ ಯುದ್ಧದಲ್ಲಿ ಅತ್ಯಂತ ಅಪಾಯಕಾರಿ ರೋಗಗಳ ನಡುವೆಯೂ ದಕ್ಷಿಣ ಬರ್ಮಾವನ್ನು ವಶಪಡಿಸಿ ಕೊಳ್ಳಲಾಯಿತು.
7. 1854 ರಲ್ಲಿ ರಷ್ಯಾದ ವಿರುದ್ಧ ಹೋರಾಡಲು ಕ್ರಿಮಿಯಾಕ್ಕೆ ಸೈನ್ಯವನ್ನು ಕಳುಹಿಸಲಾಯಿತು.
8. 1856-57 ರ ಅವಧಿಯಲ್ಲಿಯೂ ಭಾರತೀಯ ಪಡೆಗಳು ಪರ್ಶಿಯಾದಲ್ಲಿ ಯುದ್ಧ ನಿರತವಾಗಿದ್ದವು. ಜಗತ್ತಿನ ಯಾವುದೇ ದೇಶದ ಸೈನ್ಯ ಹೀಗೆ ಸತತವಾಗಿ 18 ವರ್ಷಗಳಷ್ಟು ದೀರ್ಘಕಾಲ ಭೀಕರ ಯುದ್ಧಗಳಲ್ಲಿ ನಿರತವಾಗಿದ್ದ ಉದಾಹರಣೆಗಳಿಲ್ಲ. ಬಂಗಾಳ ಸೈನಿಕರಿಗೆ ಬಿಡುವೆಂಬ ಪದದ ಪರಿಚಯವೇ ಇರದಂತೆ ಅವರನ್ನು ಅತ್ಯಂತ ಕ್ರೂರವಾಗಿ ಹಿಂಸಿಸಲಾಯಿತು. ವಿಲಿಯಂ ಕೇ ಪ್ರಕಾರ ಬ್ರಿಟಿಷ್ ಅಧಿಕಾರಿಗಳು ಸಿಪಾಯಿಗಳನ್ನು ದಂಡಿಸುವಾಗ ಅವರನ್ನು ಬರ್ಮಾ ಅಥವಾ ಚೀನಾಕ್ಕೆ ಯುದ್ಧಕ್ಕೆ ಕಳುಹಿಸಲಾಗುವುದೆಂದು ಹೆದರಿಸುತ್ತಿದ್ದರು. ಇತಿಹಾಸಕಾರರು ಭಾವಿಸಿದಂತೆ ಸಿಪಾಯಿಗಳು ಅತಿಯಾದ ಧಾರ್ಮಿಕ ಭಾವನೆಗಳಿಂದ ಪ್ರೇರೇಪಣೆಗೊಂಡು ಬಂಡಾಯ ಹೂಡಲಿಲ್ಲ. ಆದರೆ ಪಶುಗಳಿಗಿಂತಲೂ ಹೀನವಾಗಿ ಕಾಣುತ್ತಿದ್ದ ಜನಾಂಗೀಯ ತಾರತಮ್ಯಕ್ಕೀಡಾಗಿ ಅವಮಾನ, ಮತ್ತು ನಿರಂತರ ದುಡಿಮೆಯ ದಣಿವನ್ನು ತಡೆದು ಕೊಳ್ಳಲಾಗದೆ ಅನಿವಾರ್ಯವಾಗಿ ಬಂಡೇಳ ಬೇಕಾಯಿತು. ಬಂಗಾಳ ಸೈನ್ಯ ವಿದೇಶಿ ಆಕ್ರಮಣ ಗಳಲ್ಲಿ ಪಾಲ್ಗೊಳ್ಳುವುದರ ಜೊತೆಗೆ ದೇಶೀಯ ವಿಸ್ತರಣಾ ಯುದ್ಧಗಳಲ್ಲಿ ಪ್ರಮುಖವಾಗಿ ಭಾಗವಹಿಸಿತು. 1843 ರಿಂದ 1856 ರ ನಡುವಿನ ಅವಧಿಯಲ್ಲಿ ಸಿಂಧ್, ಪಂಜಾಬ್, ಸತಾರಾ, ನಾಗಪುರ, ಔದ್ ಮುಂತಾದ ಭಾಗಗಳನ್ನು ಬ್ರಿಟಿಷರು ವಶಪಡಿಸಿಕೊಂಡರು. ಈ ಅವಧಿಯಲ್ಲಿ ಸುಮಾರು ಭಾರತದ 1/5 ಭಾಗ ಬ್ರಿಟಿಷ್ ಸಾಮ್ರಾಜ್ಯಕ್ಕೆ ಹೆಚ್ಚುವರಿಯಾಗಿ ಸೇರಿಸಲ್ಪಟ್ಟಿತು.

ಮುಸ್ಲಿಮರು ತಾರತಮ್ಯದ ಸುಳಿಯಲ್ಲಿ.....

3 9 ರಿಂದ

ಅನೌಪಚಾರಿಕ ವಲಯದಲ್ಲಿ, ಅಂದರೆ ಬೀಡಿ, ಅಗರಬತ್ತಿ ಮುಂತಾದ ಉದ್ದಿಮೆಗಳಲ್ಲಿ ಮುಸ್ಲಿಮರು ದೊಡ್ಡ ಸಂಖ್ಯೆಯಲ್ಲಿ ದುಡಿಯುತ್ತಿದ್ದಾರೆ. ಸ್ವ ಉದ್ಯೋಗ, ಗೃಹಾಧಾರಿತ ಕೆಲಸಗಳು, ಸಣ್ಣ ಪುಟ್ಟ ವ್ಯಾಪಾರಗಳಲ್ಲಿಯೂ ಮುಸ್ಲೀಮರ ಸಂಖ್ಯೆ ಇತರರಿಗಿಂತ ಹೆಚ್ಚೇ ಇದೆ.

ಬ್ಯಾಂಕ್ ಸಾಲ ಮತ್ತು ಹಣಕಾಸಿನ ಲಭ್ಯತೆಯಲ್ಲಿಯೂ ಇಂತಹ ತಾರತಮ್ಯ ಕಂಡುಬರುತ್ತದೆ. ಮುಸ್ಲೀಮರು ಕಂಡು ಬರುತ್ತದೆ. ಸರ್ಕಾರಿ ಯಂತ್ರಗಳ ತಾರತಮ್ಯ ಕಡೆಗಣನೆ ಒಂದೆಡೆಯಾದರೆ, ನವ ಉದಾರೀಕರಣದ ಧಾಳಿಗಳು ಅವರ ಕರಕುಶಲತೆ ಮತ್ತು ಕಸುಬುದಾರಿಕೆಯ ಮೇಲೆ ಮಾಡುತ್ತಿರುವ ಪರಿಣಾಮಗಳು. ಕಲ್ಯಾಣ ಯೋಜನೆಗಳಿಂದ ಮುಸ್ಲಿಮರು ಪಡೆಯುವ ಸೌಲಭ್ಯಗಳೂ ತೀರ ಕಡಿಮೆ.

ಮುಸ್ಲಿಂ ಬಾಹುಳ್ಯವಿರುವ ಹಳ್ಳಿಗಳು ಮತ್ತು ಪಟ್ಟಣ ಪ್ರದೇಶಗಳಲ್ಲಿನ ನಾಗರಿಕ ಸೌಲಭ್ಯಗಳು ಮುಸ್ಲಿಮರು ಕಡಿಮೆ ಸಂಖ್ಯೆಯಲ್ಲಿರುವ ಪ್ರದೇಶಗಳಿಗೆ ಹೋಲಿಸಿದರೆ ತೀರಾ ದುಸ್ಥಿತಿಯಲ್ಲಿವೆ ಎಂದು ಸಾಚಾರ್ ಸಮಿತಿಯ ವರದಿ ಹೇಳುತ್ತದೆ. ಅಭದ್ರತೆಯ ಭೀತಿ ಮತ್ತು ನಿರಂತರ ಕೋಮುದಳ್ಳುರಿಯಿಂದಾಗಿ ಒಂದೇ ಪ್ರದೇಶದಲ್ಲಿ ವಾಸವಾಗಿರಬೇಕಾದ ಅನಿವಾರ್ಯತೆ ಮುಸ್ಲಿಮರನ್ನು ಇನ್ನಷ್ಟು ಹೀನ ಸ್ಥಿತಿಗಳಿಸಿದೆ. ತಾರತಮ್ಯದ ಇನ್ನೊಂದು ಪ್ರಮುಖ ವಲಯವೆಂದರೆ ರಾಜಕೀಯ ಸಬಲೀಕರಣದ ಸಂಗತಿ. ಒಟ್ಟು ಜನಸಂಖ್ಯೆಯಲ್ಲಿ ಮುಸ್ಲಿಮರ ಪ್ರಮಾಣಕ್ಕೆ ಹೋಲಿಸಿದರೆ ಚುನಾಯಿತ ಸ್ಥಳೀಯ ಸಂಸ್ಥೆಗಳು, ವಿಧಾನ ಮಂಡಲಗಳು ಹಾಗೂ ಸಂಸತ್ತಿನಲ್ಲಿ ಮುಸ್ಲೀಮರ ಪ್ರಾತಿನಿಧ್ಯ ಬಹಳ ಕಡಿಮೆ. 543 ಲೋಕಸಭಾ ಸದಸ್ಯರಲ್ಲಿ ಮುಸ್ಲಿಮ್ ಸದಸ್ಯರು ಕೇವಲ 33.

ಮುಸ್ಲಿಮರನ್ನು ತುಷ್ಟೀಕರಿಸ ಲಾಗುತ್ತಿದೆ ಎಂಬ ಮಿಥ್ಯೆಯನ್ನು ಸಾಚಾರ್ ಸಮಿತಿ ಒಡೆದುಹಾಕಿದೆ. ತದ್ವಿರುದ್ಧವಾಗಿ ಆರ್ಥಿಕ ಮತ್ತು ಸಾಮಾಜಿಕ ಬದುಕಿನ ಪ್ರತಿಯೊಂದು ಆಯಾಮದಲ್ಲಿ ಮುಸ್ಲಿಂ ಸಮುದಾಯ ಬಹುಮಟ್ಟಿನ ಕೊರತೆ ಮತ್ತು ವಂಚನೆಗೆ ಒಳಗಾಗಿದೆ ಎಂಬ ತೀರ್ಮಾನಕ್ಕೆ ಸಾಚಾರ್ ಸಮಿತಿ ಬಂದಿದೆ. "ಯಾವುದೇ ಮಾನದಂಡದಿಂದ ನೋಡಿದರೂ ಮುಸ್ಲಿಮರು ಹೆಚ್ಚು ಕಡಿಮೆ, ಪರಿಶಿಷ್ಟ ಜಾತಿ/ ಬುಡಕಟ್ಟು ಗಳಿಗಿಂತ ಮೇಲಿನ ಸ್ಥಾನದಲ್ಲಿದ್ದರೂ, ಹಿಂದೂ ಮೇಲ್ಜಾತಿ ಸಮುದಾಯಗಳಿಗಿಂತ ಮಾತ್ರವಲ್ಲ, ಇತರ ಹಿಂದುಳಿದ ವರ್ಗಗಳು (ಒಬಿಸಿ)ಗಿಂತಲೂ ಕೆಳಸ್ಥಾನದಲ್ಲೇ ಇದ್ದಾರೆ" ಎಂದಿರುವ ಸಾಚಾರ್ ಸಮಿತಿ 'ಅಭಿವೃದ್ಧಿಯ ವಿಚಾರದಲ್ಲಷ್ಟೇ ಅಲ್ಲ, ತಮ್ಮ ವಿರುದ್ಧ ತಾರತಮ್ಯತೆ ಇದೆ, ತಮ್ಮನ್ನು ಪರಕೀಯರೆಂದು ಕಾಣಲಾಗುತ್ತಿದೆ ಎಂಬ ಭಾವನೆ ಮುಸ್ಲಿಮರಲ್ಲಿ ವ್ಯಾಪಕವಾಗಿದ್ದು ಅದು ಸಮಸ್ಯೆಗಳನ್ನು ಉಲ್ಬಣಗೊಳಿಸುತ್ತದೆ" ಎಂದು ಅಭಿಪ್ರಾಯಪಟ್ಟಿದೆ.

ದೇಶದಲ್ಲಿರುವ ಮುಸ್ಲಿಮರ ಹೀನಸ್ಥಿತಿಗೆ ಪರಿಹಾರ ಕಂಡು ಹಿಡಿಯುವ ನಿಟ್ಟಿನಲ್ಲಿ ಅವರ ವೈವಿಧ್ಯತೆಯನ್ನು ಗೌರವಿಸುತ್ತಲೇ ಅವರನ್ನು ಅಭಿವೃದ್ಧಿಯಲ್ಲಿ ಒಳಗೊಳ್ಳುವ, ಮುಖ್ಯವಾಹಿನಿಗೆ ತರುವ ಬಗ್ಗೆ ತೀವ್ರ ಗಮನಹರಿಸುವಂತಹ ನೀತಿ ನಿರೂಪಣೆಗಳನ್ನು ಕುರಿತಂತೆ ಸಾಚಾರ್ ಸಮಿತಿ ಸಲಹೆಗಳನ್ನು ಮುಂದಿಟ್ಟಿದೆ. ನ್ಯಾಯಭಾವದ ಮತ್ತು ಒಂದು ಬಹುಮುಖಿ ಸಮಾಜದಲ್ಲಿ ಎಲ್ಲರನ್ನು ಒಳಗೊಳ್ಳುವ ಅಗತ್ಯತೆಯನ್ನು ಎಷ್ಟು ಒತ್ತಿ ಹೇಳಿದರೂ ಕಡಿಮೆಯೇ ಎಂಬ ಸಾಚಾರ್ ಸಮಿತಿಯ ಅಭಿಪ್ರಾಯವನ್ನು ಎಲ್ಲರೂ ಒಪ್ಪಬೇಕಾದ್ದೇ. ಆದರೆ ಈ ನ್ಯಾಯಭಾವ ವಿಚಾರವಷ್ಟೇ ಅಲ್ಲ, ಮುಸ್ಲೀಮರ ಅನನ್ಯತೆ ಮತ್ತು ಭದ್ರತೆಯ ಸಮಸ್ಯೆಗಳೂ ಬಹಳ ಮುಖ್ಯವಾಗಿವೆ. ಸಾಚಾರ್ ಸಮಿತಿ ಈ ಬಗ್ಗೆ ಸಾಕಷ್ಟು ಗಮನ ನೀಡಿಲ್ಲ ಎಂಬ ಟೀಕೆಗಳೂ ಇವೆ. ಆದರೂ ಅದು ಅತ್ಯುತ್ತಮ ಕೆಲಸ ಮಾಡಿದೆ. ಅದರ ಶಿಫಾರಸುಗಳು ಅನುಷ್ಠಾನಯೋಗ್ಯ ಎಂಬುದನ್ನು ಪ್ರಜಾಪ್ರಭುತ್ವ ವಾದಿಗಳೆಲ್ಲಾ ಒಪ್ಪಿಕೊಳ್ಳಬೇಕಾಗುತ್ತದೆ. ○

ಸಾಮಾಜಿಕ ಧಾರ್ಮಿಕ ಕೋಮುಗಳಲ್ಲಿನ ಬಡತನದ ಸ್ಥಿತಿಗತಿಯ ಸರಾಸರಿ 2004-05

	ನಗರ	ಗ್ರಾಮೀಣ
ಎಲ್ಲಾ	22.8	22.7
ಹಿಂದೂ ಸಾಮಾನ್ಯ	08.3	09.0
ಎಸ್.ಸಿ/ಎಸ್.ಟಿ	36.4	34.8
ಇತರೆ ಹಿಂದುಳಿದ ವರ್ಗಗಳು	25.1	19.5
ಮುಸ್ಲಿಮರು	38.4	26.9

ವಯಸ್ಸುವಾರು ಜನಸಂಖ್ಯೆಯಲ್ಲಿ ಸಾಕ್ಷರರ ಅನುಪಾತ

ವಯೋಗುಂಪು	ಹಿಂದೂಗಳು ಸಾಮಾನ್ಯ	ಇತರೆ ಹಿಂದುಳಿದ	ಎಸ್‌ಸಿ/ ಎಸ್‌ಟಿ	ಮುಸ್ಲಿಮರು
6-13 ವರ್ಷಗಳು	90.2	80.8	74.7	74.6
14-15 "	95.7	87.5	80.0	79.5
16-17 "	95.0	85.2	78.6	75.5
18-22 "	91.4	76.9	65.0	70.5
23 ಕ್ಕೆ ಮೇಲ್ಪಟ್ಟು	74.0	50.6	36.5	46.1
ಒಟ್ಟು	80.5	63.4	52.7	59.9

(ಸಾಚಾರ್ ಸಮಿತಿ ವರದಿ ಕೋಷ್ಟಕ 4.1)

ಸರ್ಕಾರಿ ವಲಯದ ಉದ್ಯೋಗಗಳಲ್ಲಿರುವ ಮುಸ್ಲಿಮ್ ನೌಕರರು

ಇಲಾಖೆ/ಸಂಸ್ಥೆ	ಒಟ್ಟು ನೌಕರರು	ಮುಸ್ಲಿಂ ನೌಕರರು	ಮುಸ್ಲಿಮರ ಶೇ
ರಾಜ್ಯ ಮಟ್ಟದ ಇಲಾಖೆ	44,52,851	2,78,385	6.3
ರೈಲ್ವೇ	14,18,747	64,066	4.5
ಬ್ಯಾಂಕ್/ಆರ್ ಬಿ ಐ	6,80,833	15,030	2.2
ಭದ್ರತಾ ಸೇವೆಗಳು ?	18,79,134	60,517	3.2
ಪೋಸ್ಟಲ್ ಸೇವೆಗಳು	2,75,841	13,759	5.0
ವಿಶ್ವವಿದ್ಯಾಲಯಗಳು	1,37,263	6,416	4.7
ಒಟ್ಟು ವರದಿಯಾದ ಸರ್ಕಾರಿ ಉದ್ಯೋಗಗಳು (ಪಿ.ಎಸ್.ಯು ಗಳನ್ನು ಬಿಟ್ಟು)	88,44,669	4,38,173	4.9
ಕೇಂದ್ರ ಪಿ.ಎಸ್.ಯು	6,87,512	22,387	3.3
ರಾಜ್ಯ ಪಿ.ಎಸ್.ಯು	7,45,271	80,661	10.8
ಒಟ್ಟು ಪಿ.ಎಸ್.ಯು	14,32,783	1,03,048	7.2

ಯಾರಬ್ ನಗರ.....

ಪುಟ 9 ರಿಂದ

ಕಬ್ಬಿಣ, ಕೊಂಡು ಮಾರುವುದು, ಕಟ್ಟಡಗಳಿಗೆ ಬಣ್ಣ ಹೊಡೆಯುವುದು, ವರ್ಕ್‌ಶಾಪ್‌ನಲ್ಲಿ ವೆಲ್ಡಿಂಗ್ ಕೆಲಸ, ಹೆಣ್ಣು ಮಕ್ಕಳು ಮನೆಯಲ್ಲಿ ಅಗರಬತ್ತಿ ಹೊಸೆಯುವುದು, ಬೀಡಿ ಕಟ್ಟುವುದು ಏನೇನೋ ಪಾಡುಪಡುತ್ತಾರೆ.

ಮದುವೆಯಾಗಿರುವ ಗಂಡು ಮಕ್ಕಳು ಬೇರೆ ಮನೆ (ಗುಡಿಸಲು) ಮಾಡಿಕೊಂಡಿದ್ದಾರೆ. ಅವರ ಬದುಕು ಮಾಡುವುದೇ ಕಷ್ಟವಾಗಿದೆ. ತಾಯಿ ಮನೆಗೆ ಇನ್ನೇನು ಸಹಾಯ ಮಾಡಿಯಾರು.ಒಳಗೆ ಕುಳಿತಿದ್ದರೆ ಒಂದಾದರೂ ಕಿಡಕಿ ಇಲ್ಲದ ಗುಡಿಸಲಿನಲ್ಲಿ ಹತ್ತಾರು ಬೆಳಕಿಂಡಿಗಳು. ಅಲ್ಲಿಂದ ಬೆಳಕಿನ ಕಿರಣಗಳು ನುಗ್ಗುತ್ತಿದ್ದವು. ಮಳೆ ಬಂದರೆ ನೀರೂ ನುಗ್ಗುತ್ತದೆ. ಯಾರೂ ಒಳಗೆ ಇರಲು ಆಗುವುದಿಲ್ಲ. ನೀರಿಗೆ ಒಳಗೆ ಜಾಗ ಕೊಟ್ಟು ಜನ ಹೊರಕ್ಕೆ ಬರಬೇಕು. ಈ ಗುಡಿಸಲು ಇರುವ ಜಾಗವಾದರೂ ಇವರಿಗೆ ಉಚಿತವಾಗಿ ಸಿಕ್ಕಿದ್ದಲ್ಲ. 30 ವರ್ಷಗಳ ಹಿಂದೆ 8 ಸಾವಿರ ಕೊಟ್ಟುಕೊಂಡು ಕೊಂಡರಂತೆ. ಸರ್ಕಾರದ ಸೌಲಭ್ಯಗಳೂ ಬಡವರಿಗೆ ಉಚಿತವಾಗಿ ಸಿಗುವುದಿಲ್ಲ. ಇಲ್ಲಿ ವಾಸಿಸುತ್ತಿರುವ ಹಲವಾರು ಕುಟುಂಬಗಳೂ ಇದೇ ರೀತಿ ಜಾಗವನ್ನು ಕೊಂಡು ಕೊಂಡವರೇ ಆಗಿದ್ದಾರೆ!

ವಿಚಾರಿಸುತ್ತಾ ಹೋದರೆ ಸಾಜಿದಾ ಬೇಗಂ ಅವರ ಒಡಹುಟ್ಟಿದವರ ಕುಟುಂಬದಲ್ಲಾಗಲಿ, ಅಥವಾ ಗಂಡನ ಒಡಹುಟ್ಟಿದವರ ಕುಟುಂಬಗಳಲ್ಲಾಗಲಿ ಯಾರಿಗಾದರೂ ಒಂದಾದರೂ ಸರ್ಕಾರಿ ನೌಕರಿ ಸಿಕ್ಕಿದೆಯೇ ಎಂದರೆ ಇಲ್ಲ. ಎಲ್ಲರೂ ಬೀದಿಯ ಮೇಲೆ ಬನಿಯಾನ್, ಚಿಕನ್ ಮಾರುವುದು, ತರಕಾರಿ ಮಾರುವುದು, ಆಟೋ ಓಡಿಸುವುದು, ಹೀಗೆ. ಜೀವನ ಭದ್ರತೆ ಎಂಬುದು ಬಲುದೂರದ ಮಾತು.

ದೊಡ್ಡದಾದ ಇವರ ಸಂಬಂಧಿಕರ ಬಳಗದಲ್ಲಿ ಸಾಜಿದ ಬೇಗಂರ ಒಬ್ಬಳೇ ಮೊಮ್ಮಗಳು 2ನೇ ಪಿಯುಸಿ ಓದುತ್ತಿದ್ದಾಳೆ. ಇವರ ಹತ್ತಿರದ ಸಂಬಂಧಿಕರ ವಲಯದಲ್ಲಿ ಇದೊಂದೇ ಪ್ರಕರಣ ಕಾಲೇಜು ಮೆಟ್ಟಿಲು ಹತ್ತಿರುವುದು.

ಇಂತಹ ಯಾರಬ್ ನಗರವೇ ಬೆಚ್ಚಿಬೀಳುವಂತಹ ಭೀಕರ ಪರಿಸ್ಥಿತಿಯಲ್ಲಿ ಬೆಂಗಳೂರಿನಲ್ಲಿ ಬೇರೆ ಬೇರೆ ಭಾಗಗಳಲ್ಲಿ ಮುಸ್ಲಿಮರು ಬದುಕುತ್ತಿದ್ದಾರೆ.

ಆದರೆ ಸರ್ಕಾರ ಮುಸ್ಲೀಮರಿಗೆ ಯಾರಿಗೊಕೊಡಲಾರದ್ದನ್ನೆಲ್ಲಾ ಕೊಟ್ಟು ಬಿಟ್ಟಿದೆ ಎನ್ನುವುದಕ್ಕೆ ಇಲ್ಲಿ ಯಾವ ಸುಳಿವು ಇಲ್ಲ. ಇಲ್ಲಿನ ಯಾರಿಗೂ ಬ್ಯಾಂಕ್ ಸಾಲ ಸೌಲಭ್ಯ ಸಿಕ್ಕಿಲ್ಲ. ಖಾಸಗಿ ಲೇವಾದೇವಿಗಾರರೊಂದಿಗೇ ಇವರ ವ್ಯವಹಾರ. ನಾವು ಭೇಟಿ ಮಾಡಿದ ಯಾವ ಮನೆಗೂ ಅಡಿಗೆ ಅನಿಲ ಸಂಪರ್ಕ ಇಲ್ಲ. ಒಂದು ವಿಶೇಷ ಏನು ಗಮನಿಸಿದೆವೆಂದರೆ ಹತ್ತಿರದಲ್ಲೇ ಉರ್ದು ಶಾಲೆ ಇದ್ದರೂ ಶಾಲೆಗೆ ಹೋಗುವವರಲ್ಲಿ ಬಹಳಷ್ಟು ಜನ ಸರ್ಕಾರಿ ಕನ್ನಡ ಶಾಲೆಗೆ ಹೋಗುತ್ತಾರೆ. ಮುಸ್ಲಿಂರು ಮುಖ್ಯವಾಹಿಯಲ್ಲಿ ಬೆರೆಯುವುದಿಲ್ಲ. ಅವರೇ ಪ್ರತ್ಯೇಕವಾಗಿರುತ್ತಾರೆ. ಪಾಕಿಸ್ತಾನಕ್ಕೆ ನಿಷ್ಠರಾಗಿರುತ್ತಾರೆ ಎಂದೆಲ್ಲಾ ಸುಳ್ಳು ಸುಳ್ಳು ಪ್ರಚಾರ ನಡೆಯುತ್ತದೆ.

ಇದಾವುದೂ ತಮಗೆ ಗೊತ್ತಿಲ್ಲ ಎಂಬಂತೆ ಇಲ್ಲಿನ ಜನ ತಮ್ಮ ಮಕ್ಕಳನ್ನು ಕನ್ನಡ ಶಾಲೆಗೆ ಕಳಿಸುತ್ತಾರೆ. ಮನೆಗೆ, ಗುಡಿಸಲ ಬಾಗಿಲಿಗೆ ಬಂದವರನ್ನು ಒಳಗೆ ಕರೆದು, ಕುಡಿಯಲು ತಿನ್ನಲು ಏನು ಕೊಡಲಿ ಎಂದು ಕಾಳಜಿ ತೋರಿರುತ್ತಾರೆ. ಹಿಂದೂವೋ ಮುಸ್ಲಿಮರೋ ಎಂದು ಮುಖ ನೋಡುವುದಿಲ್ಲ.

○ **ಆರ್.ರಾಮಕೃಷ್ಣ**

ಕರ್ನಾಟಕದಲ್ಲಿ ಮುಸ್ಲಿಮರು.....

ಪುಟ 9 ರಿಂದ

ಉರ್ದು ಮಾಧ್ಯಮ ವಿದ್ಯಾರ್ಥಿಗಳ ಲಿಂಗಾಧಾರಿತ ವಿಭಜನೆಗೆ ಸರಿಹೊಂದುತ್ತದೆ ಕೂಡ.? ಎಂದು ಸಾಚಾರ್ ಸಮಿತಿ ಅಭಿಪ್ರಾಯಪಟ್ಟಿದೆ. ಕರ್ನಾಟಕದ ಮುಸ್ಲಿಂ ಮಹಿಳಾ ಸಾಕ್ಷರತೆ ಉತ್ತಮವಾಗಿರುವುದಕ್ಕೆ ಇದು ಕಾರಣವಾಗಿರಬಹುದು. ಆದರೆ, ಇತ್ತೀಚೆಗೆ, ಸರ್ಕಾರದ ನಿರ್ಲಕ್ಷ್ಯದಿಂದಾಗಿ, ಉರ್ದು ಶಾಲೆಗಳ ಮೂಲಸೌಕರ್ಯಗಳು ಕುಸಿಯುತ್ತಿವೆ ಮತ್ತು ದೊಡ್ಡ ಸಂಖ್ಯೆಯ ಹುದ್ದೆಗಳು, ತುಂಬದೆ ಖಾಲಿಬಿದ್ದಿವೆ.

ಸರ್ಕಾರಿ ನೌಕರಿಗಳಲ್ಲಿನ ಮುಸ್ಲಿಮರ ಪ್ರಾತಿನಿಧ್ಯ ಕರ್ನಾಟಕದಲ್ಲೂ ಕಡಿಮೆಯಿದೆ. 1999 ರ ಅಲ್ಪಸಂಖ್ಯಾತರ ಆಯೋಗದ ವರದಿಯ ಪ್ರಕಾರ 16 ಸರ್ಕಾರಿ ಇಲಾಖೆಗಳಲ್ಲಿ ಮುಸ್ಲಿಮರ ಪ್ರಾತಿನಿಧ್ಯ ಶೇಕಡಾ 5 ಕ್ಕಿಂತಲೂ ಕಡಿಮೆ ಇದೆ. 2000 ನೇ ಸಾಲಿನಲ್ಲಿ 50,932 ಸಂಖ್ಯೆಯ ಒಟ್ಟು ಪೋಲಿಸ್ ಬಲದಲ್ಲಿ ಮುಸ್ಲಿಮರ ಸಂಖ್ಯೆ 3,951 ಇದ್ದು ಅದು ಶೇಕಡಾ 7.75 ರಷ್ಟಾಗುತ್ತದೆ. ಇಡೀ ಮುಸ್ಲಿಂ ಸಮುದಾಯವನ್ನು ಇತರೆ ಹಿಂದುಳಿದ ವರ್ಗ ಎಂದು ಕರ್ನಾಟಕದಲ್ಲಿ ಪರಿಗಣಿಸಲಾಗಿದ್ದು, ಉದ್ಯೋಗ ಹಾಗೂ ಶಿಕ್ಷಣದಲ್ಲಿ ಪ್ರತ್ಯೇಕವಾಗಿ ಶೇಕಡಾ 4 ರಷ್ಟು ಮೀಸಲಾತಿಯನ್ನು ವರಮಾನದ ಆಧಾರದಲ್ಲಿ ಕಲ್ಪಿಸಿದ್ದಾಗ್ಯೂ ಮುಸ್ಲಿಮರಿಗೆ ಕಡಿಮೆ ಪ್ರಾತಿನಿಧ್ಯ ಸಿಕ್ಕಿದೆ.

ಕರ್ನಾಟಕದ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ಸ್ವ-ಉದ್ಯೋಗ ಮಾಡಿಕೊಂಡಿದ್ದು ಅನೌಪಚಾರಿಕ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಮುಸ್ಲಿಮರ ಪ್ರಮುಖ ಕಸುಬುಗಳು ದರ್ಜಿ, ನಾಲ್‌ಬಂದ್, ಕಸಾಯಿ, ಕಮ್ಮಾರ, ಬಿದಿರಿ ಕುಶಲ ಕೆಲಸಗಾರ, ಆಟೊಮೊಬೈಲ್ ರಿಪೇರಿ ಮತ್ತು ಆಟೋಡ್ರೈವರ್ ಆಗಿವೆ. ಅಪಾರ ಸಂಖ್ಯೆಯ ಮಹಿಳೆಯರು ಮತ್ತು ಮಕ್ಕಳು ಬೀಡಿ, ಅಗರಬತ್ತಿ ಮುಂತಾದ ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದಾರೆ ಮತ್ತು ಅವರು ಸದಾಫ್ ರಾಗಿಯೂ ಕೆಲಸ ಮಾಡುತ್ತಿದ್ದಾರೆ.


ಚಿಕ್ಕಮಟ್ಟ ಅಂಗಡಿಗಳನ್ನು ಇಟ್ಟುಕೊಂಡು, ಚಿಲ್ಲರೆ ವ್ಯಾಪಾರ ಹಾಗೂ ಬೀದಿಬದಿ ವ್ಯಾಪಾರಗಳಲ್ಲಿಯೂ ಮುಸ್ಲಿಮರು ನಿರತರಾಗಿದ್ದಾರೆ. ರೇಷ್ಮೆ ವ್ಯವಹಾರದಲ್ಲಿ ಶೇಕಡಾ 90 ರಷ್ಟು ಕೆಲಸಗಾರರು ಮತ್ತು ವ್ಯವಹಾರಸ್ಥರು ಮುಸ್ಲಿಮರಾಗಿದ್ದಾರೆ. ಇಂದಿನ ನವ ಉದಾರೀಕರಣದ ಸಂದರ್ಭದಲ್ಲಿ ಈ ಉದ್ದಿಮೆಯು ಸಿಂಥೆಟಿಕ್ ರೇಷ್ಮೆ ಉತ್ಪಾದಕರಿಂದ ತೀವ್ರತರದ ಪೈಪೋಟಿಯನ್ನು ಎದುರಿಸುತ್ತಿದೆ. ಸಾಲದ ಅಲಭ್ಯತೆ ಸ್ವಂತ ಉದ್ಯೋಗ ಮಾಡುತ್ತಿರುವವರನ್ನು ಕಾಡುತ್ತಿದೆ. ಬ್ಯಾಂಕ್ ಸಾಲಗಳು ಮುಸ್ಲಿಮರಿಗೆ ಸುಲಭವಾಗಿ ಸಿಗುತ್ತಿಲ್ಲ. 1985ರಲ್ಲಿ ಸ್ಥಾಪನೆಯಾದ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಸತತವಾಗಿ ಅಗತ್ಯ ಬಂಡವಾಳದ ಕೊರತೆಯ ಬಗ್ಗೆ ದೂರನ್ನು ನೀಡುತ್ತಲೇ ಬರುತ್ತಿದೆ. ಇದರಿಂದಾಗಿ ಈ ಸಮುದಾಯದ ಹಣಕಾಸಿನ ಅಗತ್ಯತೆ ಪೂರೈಕೆಯಾಗುತ್ತಿಲ್ಲ.

ಮುಸ್ಲಿಮರ ವಾಸ್ತವ್ಯ ಒಂದೇ ಸ್ಥಳದಲ್ಲಿ ಕೇಂದ್ರೀಕೃತಗೊಂಡ ಪಟ್ಟಣ ಪ್ರದೇಶದಲ್ಲಿ ನಾಗರಿಕ ಸೌಲಭ್ಯಗಳ ಕೊರತೆ ಸಾಮಾನ್ಯ ದೃಶ್ಯ. ಈ ಪ್ರದೇಶಗಳಲ್ಲಿ ಸಾಮಾಜಿಕ ಮೂಲಸೌಕರ್ಯಗಳ ಕೊರತೆಯೂ ಇದೆ. ಅಭದ್ರತೆಯ ಭೀತಿಯಿಂದಾಗಿ ಮುಸ್ಲಿಮರು ಒಂದೇ ಕಡೆ ವಾಸ್ತವ್ಯ ಮಾಡುವಂತಾಗಿದೆ.

ಕರ್ನಾಟಕ ವಕ್ಫ್ ಮಂಡಳಿಯ ಬಳಿ 28731 ಆಸ್ತಿಗಳಿದ್ದು ಅದರ ವಿಸ್ತೀರ್ಣ 18033 ಎಕರೆ ಇದೆ. ವಕ್ಫ್ ಆಸ್ತಿಗಳಿಂದ ಬರುವ ಆದಾಯದ ದುರುಪಯೋಗ ಅಪಾರ ಮತ್ತು ಮಂಡಳಿಯಲ್ಲಿ ದುರ್ವ್ಯವಹಾರಗಳು ಅತಿಯಾಗಿವೆ. ಪ್ರಭಾವಿ ವ್ಯಕ್ತಿಗಳು ಮಾತ್ರವಲ್ಲದೆ ಸರ್ಕಾರಿ ಸಂಸ್ಥೆಗಳೂ ವಕ್ಫ್ ಆಸ್ತಿಗಳನ್ನು ಅಕ್ರಮವಾಗಿ ಆಕ್ರಮಿಸಿಕೊಂಡಿವೆ. ವಕ್ಫ್ ಮಂಡಳಿಯಲ್ಲಿ ಪ್ರಜಾಸತ್ತೆಯ ಸ್ಥಾಪನೆಯಾಗಬೇಕು, ಮಾರುಕಟ್ಟೆಯ ಪ್ರತಿಫಲಕ್ಕನುಗುಣವಾಗಿ ವರಮಾನ ಹುಟ್ಟುವಂತೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಅದರ ಚಟುವಟಿಕೆಗಳು ಪಾರದರ್ಶಕವಾಗಿರಬೇಕು. ವಕ್ಫ್ ಆಸ್ತಿಗಳಿಂದ ಬರುವ ಆದಾಯವು ಬಡ ಮುಸ್ಲಿಮರಿಗೆ ಅನುಕೂಲವಾಗುವಂತೆ ವಕ್ಫ್ ಮಂಡಳಿಯ ಕಾರ್ಯ ನಿರ್ವಹಣೆಯನ್ನು ನಿಯಂತ್ರಿಸಲು ಸಾಧ್ಯವಾಗಬೇಕು.

ಮುಸ್ಲಿಮರು ತಮ್ಮ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕರ್ನಾಟಕ ಸರ್ಕಾರದಲ್ಲಿ ಬಿಜೆಪಿ ಪ್ರಮುಖ ಸ್ಥಾನ ಹೊಂದಿರುವ ಕಾರಣ ಅದು ಮುಸ್ಲಿಮರ ಸಮಸ್ಯೆಗಳ ಬಗ್ಗೆ ಸಹಾನುಭೂತಿ ಹೊಂದಿರುವುದಿಲ್ಲ. ಆದ್ದರಿಂದ, ಮುಸ್ಲಿಮರ ಅಭಿವೃದ್ಧಿ ಮತ್ತು ಏಳಿಗೆಗಾಗಿ ನೀತಿ ನಿಯಮಗಳನ್ನು ರೂಪಿಸಲು ಸರ್ಕಾರವನ್ನು ಒತ್ತಾಯಿಸಲು ಅವಿಶ್ರಾಂತ ಹೋರಾಟದ ಅವಶ್ಯಕತೆ ಇದೆ.

ಬಡವರಿಗೇಕೆ ಬ್ಯಾಂಕುಗಳು ? ಶ್ರೀಮಂತರಿಗೆ ಅವು ಮೀಸಲು



ಜಿ.ಎಸ್.ಮಣಿ

ಇದು ಉದಾರೀಕರಣದ ಒಳ ಮಾತುಗಳು, ರಾಜಕೀಯ ಕಾರಣಗಳಿಗಾಗಿ, ಅಂದರೆ ಎಡಪಕ್ಷಗಳ ಬೆಂಬಲ ಬೇಕಾಗಿರುವುದರಿಂದ, ಈ ಮಾತುಗಳನ್ನು ಉದಾರೀಕರಣವಾದಿ ಯುಪಿಎ ಸರ್ಕಾರ ಒಡೆದು ಆಡುವಂತಿಲ್ಲ. ಆದರೆ ಅಂತಹ ಒಲವನ್ನು ಅದು ತೋರುತ್ತಿದೆ ಎಂಬುದು ಸ್ಪಷ್ಟ. ಜಾಗತಿಕ ಪರಿಸ್ಥಿತಿಯ ಒತ್ತಡ ಇದು ಎಂಬ ಸಮರ್ಥನೆಯನ್ನು ಯಾವತ್ತೂ ಅವರು ನೀಡಬಹುದು.

ಇಪ್ಪತ್ತೇಳು ಸರ್ಕಾರಿ ಸ್ವಾಮ್ಯದ ರಾಷ್ಟ್ರೀಕೃತ ಬ್ಯಾಂಕುಗಳಿವೆ. ದೇಶದ ಬ್ಯಾಂಕಿಂಗ್‌ನ ಸಿಂಹಪಾಲು ಈ ಬ್ಯಾಂಕುಗಳದ್ದೇ. ಆದರೆ ದೇಶದ ಬಹುತೇಕ ಜನರಿಗೆ ಸೌಲಭ್ಯಗಳನ್ನು ನೀಡುವಲ್ಲಿ ಈ ಬ್ಯಾಂಕುಗಳೂ ಬೇರೆ ಬೇರೆ ಹೆಸರಿನಲ್ಲಿ ಹಿಂದೆ ಸರಿಯುತ್ತಿವೆ.

ಕಂಪ್ಯೂಟರೀಕರಣ

ಈ ಎಲ್ಲ ಬ್ಯಾಂಕುಗಳಲ್ಲಿ ಕಂಪ್ಯೂಟರೀಕರಣ ಭರದಿಂದ ಸಾಗಿದೆ. ಇದರರ್ಥ ಬಹಳ ಜನರಿಗೆ ಉದ್ಯೋಗ ನೀಡುತ್ತಿದ್ದ ಈ ಬ್ಯಾಂಕುಗಳು ಇನ್ನು ಹೆಚ್ಚಿನ ಉದ್ಯೋಗ ನೀಡಲಾರವು. ಈ ಬ್ಯಾಂಕುಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗ ನೀಡಿ ದಶಕಗಳೇ ಕಳೆದಿವೆ. ಈ ನಡುವೆ ಸ್ವಯಂ ನಿವೃತ್ತಿ, ಎಂದಿನಂತೆ ನಿವೃತ್ತಿಗಳೆಲ್ಲ ಬಂದು ಹೋಗಿವೆ. ಕಡಿಮೆಯಾಗಿರುವ ಉದ್ಯೋಗಗಳನ್ನು ತುಂಬುವ ಮಾತಿಲ್ಲ. ಬದಲಿಗೆ ಕಂಪ್ಯೂಟರ್‌ಗಳು ಸಾಮರ್ಥ್ಯ ಹೆಚ್ಚಿಸಿವೆ ಎಂಬ ಹೆಗ್ಗಳಿಕೆಯ ಮಾತುಗಳು. ಕಂಪ್ಯೂಟರ್ ತಂತ್ರಾಂಶಗಳು ಕಂಪನಿಗಳ ದೊಡ್ಡ ಪ್ರಮಾಣದಲ್ಲಿ ವ್ಯಾಪಾರ ಮಾಡುತ್ತಿವೆ ಎಂಬುದು ವಾಸ್ತವ.

ಬಡವರ ಸೇವೆಯಲ್ಲಿ ಲಾಭವಿಲ್ಲ!

ಕಂಪ್ಯೂಟರೀಕರಣ ಬ್ಯಾಂಕುಗಳ ವೆಚ್ಚವನ್ನು ಕಡಿಮೆ ಮಾಡಲಾಗಿಲ್ಲ. ಆದ್ದರಿಂದಲೇ ಉದ್ಯೋಗಗಳಲ್ಲಿ ಕಡಿತ ಮಾಡಲಾಗುತ್ತಿರುವುದು. ಹಾಗೆಯೇ ಬಡವರಿಗೆ ಸೇವೆ ನೀಡುವುದು ಲಾಭದಾಯಕವಲ್ಲ. ಬಡವರಿಗೆ ಸೇವೆ ಇಲ್ಲ. ಈಗಿನ ಸೇವಾ ಶುಲ್ಕಗಳು ಜನಸಾಮಾನ್ಯರಿಗೆ ಬಹುದೊಡ್ಡ ಹೊರೆ.

ಬಡ್ಡಿ ದರಗಳೂ ಅಷ್ಟೇ. ಬಂಡವಾಳಿಗರು ದೊಡ್ಡ ಪ್ರಮಾಣದಲ್ಲಿ ವ್ಯವಹಾರ ಮಾಡುವುದರಿಂದ ಚೌಕಾಸಿ ಮಾಡುತ್ತಾರೆ. ಬಡವರಿಗೆ ಅಂತಹ ಅವಕಾಶವೆಲ್ಲಿ? ಹೆಚ್ಚಿನ ಸೇವಾ ಶುಲ್ಕ ಮತ್ತು ಬಡ್ಡಿದರವನ್ನು ಬಡವರು ಹೊರಬೇಕು. ಇಲ್ಲಿ ಬಡವರೆಂದರೆ ಬಡ ಮಧ್ಯಮ ವರ್ಗ. ಬ್ಯಾಂಕುಗಳು ಎಲ್ಲರನ್ನು ಸಾಲಗಾರರನ್ನಾಗಿ ಮಾಡಲು ಸ್ಪರ್ಧಿಸುತ್ತಿವೆ. ಕಂಡ ಕಂಡವರಿಗೆಲ್ಲ ಫೋನಾಯಿಸಿ 'ನಿಮಗೆ ಸಾಲ ನೀಡುತ್ತೇವೆ ಬನ್ನಿ' ಎಂದು ಕರೆಯುತ್ತಿವೆ. ಖಾಸಗಿ ಬ್ಯಾಂಕುಗಳದ್ದು ಇದರಲ್ಲಿ ಮುಂದಾಳತ್ವದ ಪಾತ್ರ. ಸಾಲ ತೀರಿಸುವಲ್ಲಿ ಅಲ್ಪ ವಿಳಂಬವಾದರೂ ಗೂಂಡಾಗಳಿಂದ ಧಾಳೀ ಬ್ಯಾಂಕಿಂಗ್‌ನ ಚರ್ಯೆಯಲ್ಲಿ ಬದಲಾಗಿರುವುದಕ್ಕೆ ಇದಕ್ಕಿಂತ ಹೆಚ್ಚಿನ ಉದಾಹರಣೆ ಬೇಕೆ.

ಶ್ರೀಮಂತರ ಎಟಿಎಂ

ನಗದಿಗಾಗಿ ವಿಶೇಷ ವ್ಯವಸ್ಥೆ ಎಟಿಎಂ. ಎಲ್ಲ ಬ್ಯಾಂಕುಗಳದ್ದುಈಗ ಎಟಿಎಂಗಳಿವೆ. ನಗದಿಗಾಗಿ 'ನಗದ' ಈ ಮೇಷಿನ್ನುಗಳು ದೊಡ್ಡ ವೆಚ್ಚದಲ್ಲಿ ಬಂದಿವೆ. ಈ ನಗದು ಯಂತ್ರಗಳಲ್ಲಿ ಐನೂರು ಸಾವಿರ ರೂಪಾಯಿಗಳ ನೋಟುಗಳು ಹೆಚ್ಚಾಗಿ ಇರುತ್ತವೆ. ಕಡಿಮೆ ಮೌಲ್ಯದ ಹಣ ಬೇಕಾದವರು ಇಲ್ಲಿ ಹಣ ತೆಗೆಯುವಂತಿಲ್ಲ. ತಂತ್ರಜ್ಞಾನದ ಮೂಲಕ ಶ್ರೀಮಂತರಿಗೆ ಹೇಗೆ ಒಳ್ಳೆಯ ಸೇವೆ ನೀಡಬಹುದೆಂಬುದಕ್ಕೆ ಇದು ಒಳ್ಳೆಯ ಉದಾಹರಣೆ. ಯಂತ್ರ ತಯಾರಕರು ಮತ್ತು ಅವನ್ನು ನಿರ್ವಹಿಸುವ ಕಂಪನಿಗಳಿಗೆ ಅಪಾರ ವ್ಯವಹಾರ.

ಬಡವರಿಗೆ ಸಾಲ ನೀಡುವ ಗುರಿಗಳು ಈಗ ಪುಸ್ತಕಗಳಲ್ಲಿ ಮಾತ್ರ. ಈ ಗುರಿಗಳನ್ನು ತಪ್ಪಿಸುವ, ಮರೆ ಮಾಚುವ ಹಲವು ವಿಧಾನಗಳು ಆಗಲೇ ಚಾಲ್ತಿಯಲ್ಲಿವೆ. ಈ ಗುರಿಗಳು ಇಂದಿಗೂ ಇರುವುದು ಮತ್ತು ಬ್ಯಾಂಕುಗಳು ಅಲ್ಪಸ್ವಲ್ಪವಾದರೂ ಅದರ ಕಡೆಗೆ ಗಮನ ನೀಡುತ್ತಿರುವುದು ಎಡ ಪಕ್ಷಗಳ ಒತ್ತಡದಿಂದಾಗಿ ಮಾತ್ರ ಎಂಬುದು ಸ್ಪಷ್ಟ. ಭಾರತೀಯ ಬ್ಯಾಂಕುಗಳು ಜಾಗತಿಕ ಮಟ್ಟದ್ದವಾಗ ಬೇಕೆಂಬುದು ಇನ್ನೊಂದು ಜಾಗತೀಕರಣದ ಕೂಗು. ಬೇರೆ ದೇಶಗಳಿಗೂ ಹೋಗಿ ಇವು ವ್ಯವಹಾರ ಮಾಡುವಂತಾಗಬೇಕು ಎಂಬುದು ಇದರ ಅರ್ಥ. ಆದರೆ ಭಾರತೀಯ ಬ್ಯಾಂಕುಗಳಿಗೆ ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೋಗಿ ದೊಡ್ಡ ವ್ಯವಹಾರ ಮಾಡುವ ಗಾತ್ರವಿಲ್ಲ. ಅದಕ್ಕಾಗಿಯೇ ವಿಲೀನ, ವಶೀಕರಣದ ಹಾದಿ. ಕೇಂದ್ರದ ಹಣಕಾಸು ಸಚಿವ ಪಿ.ಚಿದಂಬರಂ ಇದನ್ನು ಪ್ರತಿಪಾದಿಸುತ್ತಲೇ ಇದ್ದಾರೆ. ಸರ್ಕಾರದಿಂದ ಈ ಕ್ರಮ ಕೈಗೊಳ್ಳಲು ಸುಲಭ ಸಾಧ್ಯವಿಲ್ಲ. ಯಾಕೆಂದರೆ ಸಂಸತ್ತಿನಲ್ಲಿ ಇದಕ್ಕೆ ವಿರೋಧ ಬರುತ್ತದೆ, ಎಡಪಕ್ಷಗಳಿಂದ. ಆದ್ದರಿಂದ ಅವರು ಬ್ಯಾಂಕುಗಳಿಗೆ ಸೂಚನೆ ನೀಡುತ್ತಿದ್ದಾರೆ.

ಬ್ಯಾಂಕುಗಳ ಮುಖ್ಯಸ್ಥರು ದಿನನಿತ್ಯ ಹೇಳಿಕೆ ನೀಡುತ್ತಾರೆ. ನಾವು ಸಣ್ಣ ಬ್ಯಾಂಕೊಂದನ್ನು ಖರೀದಿಸಲು ನೋಡುತ್ತಿದ್ದೇವೆ, ಅಂತಹ ಅವಕಾಶ ಬಂದರೆ ಕೊಂಡುಕೊಳ್ಳುತ್ತೇವೆ ಎಂದು ಹೀಗೆ ಸಣ್ಣ ಬ್ಯಾಂಕುಗಳನ್ನು ದೊಡ್ಡ ಬ್ಯಾಂಕುಗಳು ನುಂಗುತ್ತ ಬೆಳೆಯುತ್ತ ಹೋದರೆ ಆಗ ದೇಶದಲ್ಲಿ ಮೂರೋ, ನಾಲ್ಕೋ ಅತಿ ದೊಡ್ಡ ಬ್ಯಾಂಕುಗಳಾಗುತ್ತವೆ. ಉಳಿದವೆಲ್ಲ ಸಣ್ಣ ಸಣ್ಣ ಬ್ಯಾಂಕುಗಳು ಸಣ್ಣ ಸಣ್ಣ ಬ್ಯಾಂಕುಗಳು ಯಾವತ್ತೂ ವಶೀಕರಣದ ಭಯದಲ್ಲೇ ಇರುತ್ತವೆ. ದೊಡ್ಡ ಬ್ಯಾಂಕುಗಳಿಗೆ ದೊಡ್ಡ ವ್ಯವಹಾರದ ಕಡೆಗೆ ಮಾತ್ರ ಗಮನ ಹರಿಯುತ್ತದೆ ಹೊರತು ಬಡವರ ಸಣ್ಣ ವ್ಯವಹಾರಗಳತ್ತ ಅಲ್ಲ. ಹಾಗೆಂದು ಬಡವರ ಉಳಿತಾಯದ ಹಣ ಅವರಿಗೆ ಬೇಡವೆಂದಲ್ಲ. ಬಡವರ ಉಳಿತಾಯದ ಹಣ ದೊಡ್ಡ ಬ್ಯಾಂಕುಗಳಲ್ಲಿ ಬೇಕು. ಆ ಹಣದಿಂದ ದೊಡ್ಡ ಬಂಡವಾಳಿಗರಿಗೆ ಜಾಗತಿಕ ಬಂಡವಾಳಗರಿಗೆ ಅವರು ನೆರವು ನೀಡುವಂತಾಗಬೇಕು. ಆ ಮೂಲಕವೇ ಬೆಳೆಯಬೇಕು.

ಶ್ರೀಮಂತರಿಗೆ ಕಡಿಮೆ ಬಡ್ಡಿ ಸಾಲ ಬಡವರಿಗೆ ಹೆಚ್ಚಿನ ಬಡ್ಡಿ ಸಾಲ. ಶ್ರೀಮಂತರಿಗೆ ಹೆಚ್ಚಿನ ಅನುಕೂಲ, ಬಡವರಿಗೆ ಹೆಚ್ಚಿನ ಅನಾನುಕೂಲ. ಶ್ರೀಮಂತರಿಗೆ ಕಡಿಮೆ ಶುಲ್ಕ ಬಡವರಿಗೆ ಹೆಚ್ಚಿನ ಶುಲ್ಕ. ಶ್ರೀಮಂತರಿಗೆ ಅನುಕೂಲವಾಗುವ ತಂತ್ರಜ್ಞಾನಗಳು. ಇವೆಲ್ಲ ಭಾರತೀಯ ಬ್ಯಾಂಕಿಂಗ್ ಯಾವ ದಿಸೆಯಲ್ಲಿ ಹೆಜ್ಜೆ ಹಾಕುತ್ತಿದೆ ಎಂಬುದನ್ನು ಸ್ಪಷ್ಟವಾಗಿ ತೋರುತ್ತವೆ. ○

ಪ್ರಪ್ರಥಮ ಮಹಿಳಾ ರಾಷ್ಟ್ರಾಧ್ಯಕ್ಷೆಯಾಗಿ ಪ್ರತಿಭಾ ಪಾಟೀಲ್

ಪುಟ 7 ಕ್ಕೆ

ಎಡಪಕ್ಷಗಳು ಬೆಂಬಲಿಸಿದ್ದವು. ಈ ಧೋರಣೆಯಿಂದಾಗಿ, 1992 ರಿಂದ 2002 ರವರೆಗೆ ರಾಷ್ಟ್ರಪತಿ ಯಾರಾಗಬೇಕೆಂದು ಬಿಜೆಪಿ ಮತ್ತು ಕೋಮುವಾದಿ ಶಕ್ತಿಗಳು ನಿರ್ಧರಿಸಲು ಸಾಧ್ಯವಿಲ್ಲದಂತೆ ನೋಡಿಕೊಳ್ಳಲಾಯಿತು. ಡಿಸೆಂಬರ್ 6 1992ರಂದು ಕೋಮುವಾದಿ ಗಳು ಬಾಬ್ರಿ ಮಸೀದಿಯನ್ನು ನೆಲಸಮ ಮಾಡಲು ಅವಕಾಶ ಮಾಡಿದ ಪಿ.ವಿ ನರಸಿಂಹರಾವ್ ಸರ್ಕಾರದ ವಿರುದ್ಧ ಬಹಿರಂಗವಾಗಿ ಡಾ. ಶಂಕರ ದಯಾಳ್ ಶರ್ಮಾ ಟೀಕಿಸಿದರು. ಆಗ ಅವರನ್ನು ಬೆಂಬಲಿಸಿದ್ದ ಸಿಪಿಐ(ಎಂ) ನಿರ್ಧಾರದ ಟೀಕಾಕಾರರು ಬಾಯಿ ಮುಚ್ಚಬೇಕಾಯಿತು.

ರಾಷ್ಟ್ರಪತಿಗೆ ಎರಡನೇ ಅವಧಿಯನ್ನು ಕೊಡಬಾರದೆಂದು ಪ್ರತಿಪಾದಿಸಿದ್ದು ಕೂಡ ಬಿಜೆಪಿಯೇ ಹೊರತು ಸಿಪಿಐ(ಎಂ) ಅಲ್ಲ. ಕೆ.ಆರ್. ನಾರಾಯಣ್ ರವರಿಗೆ ಎರಡನೇ ಅವಧಿಗೆ ಮುಂದುವರಿಸಬೇಕೆಂದು ನಮ್ಮ ಪಕ್ಷ ಹೇಳಿದಾಗ ಅಂದಿನ ಅಟಲ್ ಬಿಹಾರಿ ವಾಜಪೇಯಿ ಸರ್ಕಾರವು ಎರಡನೇ ಅವಧಿಗೆ ಯಾವುದೇ ಅಭ್ಯರ್ಥಿಯನ್ನು ಮುಂದುವರಿಸಬಾರದೆಂದು ಸ್ಪಷ್ಟವಾಗಿ ಹೇಳಿತು. ಕೆ.ಆರ್.ನಾರಾಯಣ್‌ರವರು ಗುಜರಾತ್‌ನ ನರಮೇಧದ ವಿರುದ್ಧ ಕ್ರಮ ಜರುಗಿಸುವಂತೆ ಹೇಳಿದ್ದರಿಂದಾಗಿ ಬಿಜೆಪಿಯು ಅವರನ್ನು ಎರಡನೇ ಬಾರಿಗೆ ತಿರಸ್ಕರಿಸಿತೆಂಬುದು ಬೇರೆ ಮಾತು.

ಶೇಖಾವತ್‌ರ ಅಭ್ಯರ್ಥಿತ್ವ:

ಭೈರಾನ್ ಸಿಂಗ್ ಶೇಖಾವತ್‌ರನ್ನು ಸಿಪಿಐ(ಎಂ) ವಿರೋಧಿಸಿದ್ದು ಅವರ ವ್ಯಕ್ತಿತ್ವ ಆಧಾರಿತ ನೀತಿಯಾಧಾರದ ಮೇಲಲ್ಲ. ಅವರು ತಮ್ಮ ಜೀವಿತಾವಧಿಯುದ್ದಕ್ಕೂ ಆರ್ ಎಸ್ ಎಸ್ ಮತ್ತು ಬಿಜೆಪಿಯ ರಾಜಕೀಯ ಮತ್ತು ಸಿದ್ಧಾಂತಕ್ಕೆ ಕಟಿಬದ್ಧರಾಗಿ ಪ್ರತಿಪಾದಿಸುತ್ತಾ ಬಂದಿದ್ದಾರೆ. ಅವರು ರಾಜಸ್ತಾನದ ಮುಖ್ಯಮಂತ್ರಿಯಾಗಿದ್ದಾಗ ಬಾಬ್ರಿ ಮಸೀದಿ ನಾಶಕ್ಕಾಗಿ ಕರಸೇವಕರನ್ನು ಅಣಿನೆರೆಸಿ ಕಳುಹಿಸಿಕೊಟ್ಟಿದ್ದರು. ಜೀವನಪೂರ್ತಿ ತನ್ನದೇ ಸಿದ್ಧಾಂತ ಪ್ರತಿಪಾದನೆ ಮಾಡುತ್ತಾ ಬಂದ ಅಭ್ಯರ್ಥಿಯನ್ನು 'ಸ್ವತಂತ್ರ' ಅಭ್ಯರ್ಥಿಯಾಗಿ ಎನ್‌ಡಿಎ ನಿಲ್ಲಿಸಿದ್ದು ಅದರ ಅಪ್ರಾಮಾಣಿಕತೆ ಮತ್ತು ಠಕ್ಕುಗಾರಿಕೆಯಲ್ಲದೆ ಮತ್ತೇನಲ್ಲ. ಆದರೆ ಬಿಜೆಪಿಯು ಪ್ರತಿಭಾ ಪಾಟೀಲರನ್ನು ರಾಜಕೀಯ ವಿಷಯಾಧಾರದ ಮೇಲೆ ವಿರೋಧಿಸದೆ ದುರ್ನಡತೆ, ಸ್ವಜನಪಕ್ಷಪಾತ ಮತ್ತು ಭ್ರಷ್ಟಾಚಾರದ ಆರೋಪಗಳಿಂದ ವಿರೋಧಿಸಲು ಯತ್ನಿಸಿತು. ರಾಷ್ಟ್ರಪತಿ ಅಭ್ಯರ್ಥಿಯು ಪಕ್ಷಾತೀತವಾಗಿದ್ದರೂ ಅವರ ರಾಜಕೀಯ ಧೋರಣೆ ಮತ್ತು ಒಲವು ಏನೆಂಬುದು ಜನತೆಗೆ ತಿಳಿದಿರಬೇಕು.

ಆಳುವ ವರ್ಗ ಮತ್ತು ಮಾಧ್ಯಮಗಳ ಕೆಲವು ವಿಭಾಗವು ರಾಜಕೀಯ ವ್ಯವಸ್ಥೆ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನೆಲ್ಲ ಬದಿಗಿರಿಸಿ ತಮ್ಮ ಅಭಿಪ್ರಾಯಗಳನ್ನು ಹೇರಲು ಯತ್ನಿಸುತ್ತವೆ. 'ಮೀಸಲಾತಿ ವಿರುದ್ಧ' ಮಾತನಾಡುವ, ರಾಜಕೀಯ ಪಕ್ಷಗಳು ಮತ್ತು ನಾಯಕರನ್ನು ಟೀಕಿಸುವಂಥಹ ರಾಷ್ಟ್ರಪತಿ ಬೇಕೆನ್ನುವವರೂ ಇದ್ದಾರೆ. 1998ರಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗ, ಅಧ್ಯಕ್ಷೀಯ ಮಾದರಿಯ ಸರ್ಕಾರವನ್ನು ಜಾರಿಗೆ ತರಲು ಸಂವಿಧಾನ ಪರಾಮರ್ಶಿಸುವುದಾಗಿ ಬಿಜೆಪಿ ಹೇಳಿದ್ದನ್ನು ಮರೆಯಬಾರದು. ಹಾಗೆಯೇ, ಪ್ರತಿಭಾ ಪಾಟೀಲ್ ಆಯ್ಕೆಯಾದರೆ ಅವರು 'ರಬ್ಬರ್ ಸ್ಟಾಂಪ್' ಆಗುತ್ತಾರೆಂದು ಅದು ಹೇಳಿತ್ತು. ಆದರೆ ವಾಸ್ತವವಾಗಿ ಶೇಖಾವತ್ ಏನಾದರೂ ಆಯ್ಕೆಯಾಗಿದ್ದರೆ, ಅವರು ಆರ್ ಎಸ್ ಎಸ್ ನ ರಬ್ಬರ್ ಸ್ಟಾಂಪ್ ಆಗಿರುತ್ತಿದ್ದರು.

ಸಿಪಿಐ(ಎಂ) ಪಕ್ಷದ ಸದಸ್ಯರೊಬ್ಬರು ರಾಷ್ಟ್ರಪತಿಯಾಗಬಹುದೆಂಬ ಊಹಾಪೋಹ ಕೂಡ ಚಲಾವಣೆಯಲ್ಲಿತ್ತು. ಪ್ರಸ್ತುತ ಸಂವಿಧಾನದಲ್ಲಿ, ಅಧ್ಯಕ್ಷ ಸ್ಥಾನವು ಭಾರತ ಸರ್ಕಾರವನ್ನು ಪ್ರತಿನಿಧಿಸುವ ಸ್ಥಾನವಾಗಿದೆಯೆಂದು ಸಿಪಿಐ(ಎಂ) ಪರಿಗಣಿಸುತ್ತದೆ. ರಾಷ್ಟ್ರಪತಿಯ ಪಾತ್ರವು ನಮ್ಮ ದೇಶದ ಕ್ಯಾಬಿನೆಟ್ ಮತ್ತು ಪಾರ್ಲಿಮೆಂಟರಿ ವ್ಯವಸ್ಥೆಯ ಹತೋಟಿಯಲ್ಲಿದೆ. ರಾಷ್ಟ್ರಪತಿಯು ಸರ್ಕಾರದ ಧೋರಣೆಯನ್ನು ಪ್ರತಿನಿಧಿಸಬೇಕು. ತಾನು ಒಪ್ಪದಿದ್ದರೂ, ಪಾರ್ಲಿಮೆಂಟ್ ಅಥವಾ ಕ್ಯಾಬಿನೆಟ್ ಅಂಗೀಕರಿಸಿದ ಶಾಸನಕ್ಕೆ ರಾಷ್ಟ್ರಪತಿಯು ಒಪ್ಪಿಗೆ ನೀಡಬೇಕು. ಪ್ರಸ್ತುತದಲ್ಲಿ ಮತ್ತು ಮುಂದಿನ ದಿನಗಳಲ್ಲಿ ಸರ್ಕಾರವು ಜಾರಿಗೆ ತರುವ ಶಾಸನಗಳನ್ನು ಮತ್ತು ಹಲವು ಧೋರಣೆಗಳನ್ನು ಸಿಪಿಐ(ಎಂ) ಪಕ್ಷವು ವಿರೋಧಿಸಬೇಕಾಗುತ್ತದೆ. ಸಿಪಿಐ(ಎಂ) ನಿಂದ ರಾಷ್ಟ್ರಪತಿಯಾಗುವುದೆಂದರೆ, ಬಂಡವಾಳಶಾಹಿ-ಭೂಮಾಲೀಕ ನೀತಿಗಳು ಮತ್ತು ಸರ್ಕಾರದೊಂದಿಗೆ ಸಿಪಿಐ(ಎಂ) ಪಕ್ಷಕ್ಕೆ ಯಾವುದೇ ಮೂಲ ಭಿನ್ನಾಭಿಪ್ರಾಯ ವಿಲ್ಲವೆಂದು ಘೋಷಿಸಿಗೊಂಡಂತೆ. ಆದ್ದರಿಂದಲೇ ಅಂಥಹ ತೀರ್ಮಾನವನ್ನು ಪಕ್ಷದ ಪಾಲಿಟ್ ಬ್ಯೂರೋ ತಿರಸ್ಕರಿಸಿತು.

ಮುಂದಿನ ದಿನಗಳಲ್ಲಿ ಉದ್ಭವಿಸುವ ಒತ್ತಡಗಳನ್ನು ನಿಭಾಯಿಸಬಲ್ಲ ಮತ್ತು ಸಂವಿಧಾನದತ್ತ ಧರ್ಮನಿರಪೇಕ್ಷಿತ ತತ್ವವನ್ನು ಕಾಪಾಡಬಲ್ಲ ಅಭ್ಯರ್ಥಿಯನ್ನು ಕಾಂಗ್ರೆಸ್ ಮತ್ತು ಯುಪಿಎ ಯು ಎಡ ಪಕ್ಷಗಳೊಂದಿಗೆ ಸಮಾಲೋಚಿಸಿ ಆಯ್ಕೆ ಮಾಡಬೇಕೆಂಬುದು ತೀರ್ಮಾನವಾಗಿತ್ತು.

ಬಿಜೆಪಿಯ ಹೀನಾಯ ಸೋಲು

ಬಿಜೆಪಿಯು ತನ್ನ ತುಚ್ಛ ಪ್ರಚಾರ ಮತ್ತು ನೈತಿಕತೆ ಹೆಸರಿನಲ್ಲಿ ಬಡಾಯಿ ಕೊಚ್ಚಿಕೊಂಡರೂ ಅದು ಮೂಲೆಗುಂಪಾಗಿ ಹೀನಾಯ ಸೋಲು ಕಂಡಿದೆ. ಎನ್‌ಡಿಎ ಯು ಒಂದು ಐಕ್ಯ ಹೋರಾಟ ನೀಡಲಾಗಿಲ್ಲ. ಶಿವಸೇನಾ ಮತ್ತು ತೃಣಮೂಲ ಕಾಂಗ್ರೆಸ್‌ಗಳು ಶೇಖಾವತ್‌ಗೆ ಬೆಂಬಲ ನೀಡಲಿಲ್ಲ. ಯುಎನ್‌ಪಿ ಮೈತ್ರಿಯು ಕೂಡ ಶೇಖಾವತ್‌ಗೆ ಬೆಂಬಲ ನೀಡದೆ ಚುನಾವಣೆಯಿಂದ ಹಿಂದೆ ಸರಿಯಿತು. ಈ ಅಧ್ಯಕ್ಷೀಯ ಚುನಾವಣೆಯು ನೀಡಿರುವ ಸಂದೇಶವೇನೆಂದರೆ **ಭಾರತ ದೇಶದ ಧರ್ಮನಿರಪೇಕ್ಷಿತ ತತ್ವಗಳಿಗೆ ಬಹಿರಂಗವಾಗಿ ಸವಾಲು ಹಾಕಿ ಸಂವಿಧಾನಿಕ ಮೌಲ್ಯಗಳನ್ನು ಬುಡಮೇಲುಗೊಳಿಸಲು ಹೇಸದ ರಾಜಕೀಯ ಪಕ್ಷಕ್ಕೆ ಸೇರಿರುವ ವ್ಯಕ್ತಿಯೊಬ್ಬನಿಗೆ ರಾಷ್ಟ್ರಪತಿ ಸ್ಥಾನವನ್ನು ನೀಡಲಾಗದು.**

ಗಳಿಸಿದ ಮತಗಳು

	ಪ್ರತಿಭಾ ಪಾಟೀಲ್	ಶೇಖಾವತ್
ಒಟ್ಟು ಮತ ಮೌಲ್ಯ	6,38,116	3,31,306
ಪಾರ್ಲಿಮೆಂಟ್	442	232
ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು	2,489	1,217

ಬಿಜೆಪಿ ಆಡಳಿತದಲ್ಲಿರುವ ಗುಜರಾತ್ ಮತ್ತು ಛತ್ತೀಸ್‌ಘಡ ರಾಜ್ಯಗಳಲ್ಲಿ ಬಿಜೆಪಿ ಶಾಸಕರ ಅಡ್ಡ ಮತಗಳಿಂದಾಗಿ ಪ್ರತಿಭಾ ಪಾಟೀಲ್ ನಿರೀಕ್ಷೆಗಿಂತ 10,000 ಹೆಚ್ಚು ಮತಗಳನ್ನು ಗಳಿಸಿದ್ದಾರೆ. ಬಿಜೆಪಿ ಆಡಳಿತದಲ್ಲಿರುವ ಮಧ್ಯಪ್ರದೇಶದಲ್ಲಿ ಶೇಖಾವತ್‌ಗೆ ನಿರೀಕ್ಷಿಸಿರುವಷ್ಟು ಮತಗಳೂ ಲಭ್ಯವಾಗಿಲ್ಲ. ಎಡ ಪಕ್ಷಗಳು ಆಡಳಿತದಲ್ಲಿರುವ ಕೇರಳ, ಪಶ್ಚಿಮ ಬಂಗಾಳ ತ್ರಿಪುರಾಗಳಲ್ಲಿ ಒಂದೂ ಮತವನ್ನು ಶೇಖಾವತ್ ಗಳಿಸಲಾಗಿಲ್ಲ.

ಕೊಡಗು

ಶತಮಾನಗಳ ಹಿಂದಿನಿಂದಲೂ ಬಂದ ಬಾಣೆ ಹಕ್ಕನ್ನು 'ಜಾ-ಕೋ' ಸರ್ಕಾರ ಕಿತ್ತುಕೊಳ್ಳಲು ಮುಂದಾಯಿತು. ಆದರೆ ಜನ ಬಿಡಬೇಕಲ್ಲ!

ಡಾ. ದುರ್ಗಾಪ್ರಸಾದ್

ಬಾಣೆ ಹಕ್ಕಿಗಾಗಿ ಹೋರಾಟ : ಜಯ ಜನರದ್ದೇ

ೊಡಗಿನಲ್ಲಿ ಭೂ ಹಿಡುವಳಿದಾರರು ಂದಿರುವ ಬಾಣೆ ಜಾಗವನ್ನು ರಾಜ್ಯ ಸರ್ಕಾರ ಡೆದೆನ್ನುತ್ತಿದೆ. ಈ ಕುರಿತು ಇಂದು ಅಧಿಕಾರದಲ್ಲಿ ವ ಭಾ.ಜ.ಪ. ಜಾತ್ಯಾತೀತ ಜನತಾದಳ ಯುಕ್ತ ಸರ್ಕಾರದ ಕಂದಾಯ ಖಾತೆ ಯಿಂದ ಂದು ಸುತ್ತೋಲೆ 31-09-2006 ದಂದು ೂರಬಿದ್ದಿದೆ. ಬಾಣೆ ಜಾಗ ಸರಕಾರದೆಂಬ ಲುಮೆ ವಾಸ್ತವತೆಗೆ ವಿರೋಧವಾಗಿದೆ.


ಿದು ಜಮ್ಮಾ? ಬಾಣೆ?

ಶತಮಾನಗಳ ಹಿಂದೆ ಕೊಡಗಿನ ಪೂರ್ವಿಕರು ್ಲಿ ನೆಲೆ ನಿಲ್ಲಲಾರಂಭಿಸಿದಾಗ ಸಮತಟ್ಟು ದೇಶದಲ್ಲಿ ಕೃಷಿ ಮಾಡಿ ಬತ್ತ ಬೆಳೆಸಿದರು. ಪಕ್ಕದಲ್ಲೇ ದ್ದ ಎತ್ತರದ ಜಾಗವನ್ನು ಬಾಣೆ ಎಂದು ಕರೆದು ದನ್ನು ತಮ್ಮ ಕೃಷಿಗೆ ಸಹಾಯಕವಾಗಿ ಪಯೋಗಿಸಿಕೊಂಡರು. ಅದರಲ್ಲಿರುವ ಸೊಪ್ಪು ಷಿಗೆ ಗೊಬ್ಬರವಾಯಿತು, ತಮ್ಮ ದನ ಕರುಗಳು ೇಯುವ ಜಾಗ ಇದಾಗಿತ್ತು. ಮನೆಗೆ ಬೇಕಾದ ರ, ಸೌದೆ ಇಲ್ಲಿಂದಲೇ ಸಿಕ್ಕಿತು. ರಾಜ ಪದ್ಧತಿ ಂದಾಗ ರಾಜ ಭೂಮಿ ಎಲ್ಲವೂ ತನ್ನದೆಂದು ೇಳಿದ, ಕೃಷಿ ಭೂಮಿಗೆ ತೆರಿಗೆ ಹಾಕಿದ. ತನಗಿಷ್ಟ ಂದವರಿಗೆ ಭೂಮಿಯನ್ನೂ ಕೊಟ್ಟ. ರಾಜನ ಲ್ಲಿ ಇಂದಿನಂತೆ ಸಂಬಳ ಕೊಟ್ಟು ನೇಮಿಸಿದ ೂರ್ಣ ಕಾಲದ ಸೈನಿಕರಿರಲಿಲ್ಲ. ಆಗ ರಾಜನಿಗೆ ೇಕೆಂದಾಗ ರೈತರನ್ನೇ ಸೈನಿಕ ಸೇವೆಗೆ ಅಥವಾ ತನ್ನ ಅರಮನೆಯ ಕೆಲಸಗಳಿಗೆ ಕರೆಯುತ್ತಿದ್ದ. ಈ ರೀತಿ ತನ್ನ ಸೇವೆ ಸಲ್ಲಿಸುವವರಿಗೆ ಪ್ರತಿಫಲವಾಗಿ ಅವರ ಭೂಮಿಯ ಮೇಲಿನ ತೆರಿಗೆಯನ್ನು ಅರ್ಧಕ್ಕೆ ಇಳಿಸಿದ. ಇಂತಹ ನಿಬಂಧನೆಯನ್ನೇ ಜಮ್ಮಾ ನಿಬಂಧನೆ ಎಂದು ಹೆಸರಿಸಲಾಗಿದೆ. ಇಂತಹ ಸುಮಾರು 32 ನಿಬಂಧನೆಗಳಿದ್ದುವು.

ಒಡೆತನ

ಬ್ರಿಟಿಷರು ಕೊಡಗಿನ ರಾಜ್ಯಾಡಳಿತೆಯನ್ನು ವಶಪಡಿಸಿಕೊಂಡ ನಂತರ ಅವರು ಜಮ್ಮಾ ನಿಬಂಧನೆಯನ್ವಯ ಭೂಮಿ ಕೊಡುವುದನ್ನು ನಿಲ್ಲಿಸಿದರು. ಅವರು 1899ರಲ್ಲಿ ಭೂ ನಿಯಮಾವಳಿಯನ್ನು ಅನುಷ್ಠಾನಕ್ಕೆ ತಂದರು. ಅದರ ಪ್ರಕಾರ ರಿಜಿಸ್ಟರಿನಲ್ಲಿ ಭೂಮಿ ಖಾಸಗಿಯಾಗಿಯೇ ದಾಖಲಾಗುತ್ತಿತ್ತು.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ, ಕರ್ನಾಟಕದ ರಚನೆಯಾಯಿತು. ಆಗ ಸರ್ಕಾರದ ಅಂದು ರಾಜ್ಯದ ವಿವಿಧ ಭಾಗಗಳಲ್ಲಿ ಅನುಷ್ಠಾನದಲ್ಲಿದ್ದ ಭೂ ಕಂದಾಯ ನಿಯಮಗಳನ್ನು ರದ್ದುಗೊಳಿಸಿ ಇಡೀ ಕರ್ನಾಟಕಕ್ಕೆ ಅನ್ವಯವಾಗುವ 1964ರ ಭೂ ಕಂದಾಯ ನಿಯಮವನ್ನು ರೂಪಿಸಿ ಅನುಷ್ಠಾನಕ್ಕೆ ತಂದರು. ಕೊಡಗನ್ನೊಳಗೊಂಡ ಇಡೀ ಕರ್ನಾಟಕಕ್ಕೆ ಅನ್ವಯವಾಗಬೇಕಾದ ಈ ಕಾನೂನಿನ ಪ್ರಕಾರ ಜಮ್ಮಾವನ್ನೊಳ ಗೊಂಡು ಎಲ್ಲಾ ನಿಬಂಧನೆಗಳೂ ಇಲ್ಲದಾದವು. ಈ ಕಾನೂನಿನ ಪ್ರಕಾರ ಾನೂನುಬದ್ಧವಾಗಿ ಭೂಮಿಯ ಹಿಡುವಳಿದಾರನಾಗಿರುವವನೇ ಅದರ ಒಡೆಯನಾಗುತ್ತಾನೆ.



ಭೂಕಂದಾಯ ನಿಯಮ
ಕೊಡಗಿನಲ್ಲಿ ಜಾರಿ ಇಲ್ಲ

ಆದರೆ ಕರ್ನಾಟಕದ ಅವಿಭಾಜ್ಯ ಅಂಗವಾದ ಕೊಡಗಿನಲ್ಲಿ ಮಾತ್ರ ಸರ್ಕಾರ ಈ ಕಾನೂನನ್ನು ಅನುಷ್ಠಾನಕ್ಕೆ ತರಲಿಲ್ಲ. ಇಲ್ಲಿ ಹಳೆಯ ಕಾನೂನನ್ನೇ ಜಾರಿಯಲ್ಲಿಟ್ಟು ಇಲ್ಲಿನ ಬಾಣೆ ಹಿಡುವಳಿದಾರರನ್ನು ಸರ್ಕಾರ ಹಿಂಸಿಸುತ್ತಿತ್ತು. ಇಲ್ಲಿನ ಜನ ತಮಗಾಗುತ್ತಿರುವ ಅನ್ಯಾಯದ ಬಗ್ಗೆ ಅಧಿಕಾರದಲ್ಲಿದ್ದವರಲ್ಲಿ ಅದೆಷ್ಟು ಮನವಿ ಮಾಡಿಕೊಂಡರೂ ಸರ್ಕಾರದಲ್ಲಿದ್ದವರು ಈ ಕೂಗಿಗೆ ಕಿವಿ ಕೊಡಲಿಲ್ಲ. 1981 ರಲ್ಲಿ ಸರ್ಕಾರ ಒಂದು ಸುತ್ತೋಲೆಯನ್ನು ಹೊರಡಿಸಿ ಬಾಣೆ ಜಾಗವೆಲ್ಲವೂ ಸರಕಾರದ್ದೆಂದು ಘೋಷಿಸಿತು. ಇದರಿಂದಾಗಿ ಕೊಡಗಿನ ಹಿಡುವಳಿದಾರರಿಗೆ ಬ್ಯಾಂಕುಗಳು ಸಾಲ ಕೊಡುವುದನ್ನು ನಿಲ್ಲಿಸಿದುವು. ಮಾರಾಟದ ಕರಾರನ್ನು ರಿಜಿಸ್ಟರ್ ಮಾಡಲು ನಿರಾಕರಿಸಲಾಯಿತು.

ಈ ಬಗ್ಗೆ ಕೊಡಗಿನ ಭೂ ಹಿಡುವಳಿದಾರರ ಕೂಗು ಅರಣ್ಯರೋದನ ವಾದಾಗ ಕೊಡಗಿನ ಪ್ರಸಿದ್ಧ ವಕೀಲ ಎ.ಕೆ.ಸುಬ್ಬಯ್ಯನವರು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಸರ್ಕಾರದ ವಿರುದ್ಧ ಮೊಕದ್ದಮೆ ಹೂಡಿ ಜಯಗಳಿಸಿದರು.

ಈ ತೀರ್ಪು ಹೊರ ಬಂದ ನಂತರ ಸರ್ಕಾರದ ವಿವಿಧ ಹಂತಗಳಲ್ಲಿ ನಡೆದ ಚರ್ಚೆಗಳು, ಸಮಾಲೋಚನೆಗಳ ಪರಿಣಾಮವಾಗಿ 1996ರಲ್ಲಿ ಬಾಣೆ ಜಾಗ ಸರಕಾರದ್ದೆಂಬ ತನ್ನ 1981ರ ಸುತ್ತೋಲೆಯನ್ನು ಹಿಂತೆಗೆದುಕೊಂಡಿತು ಮತ್ತು ಕೊಡಗಿನಲ್ಲಿ 1964ರ ಕಂದಾಯ ಕಾನೂನು ಅನುಷ್ಠಾನಕ್ಕೆ ತರುವುದೆಂದೂ ಅದಕ್ಕನುಗುಣವಾಗಿ ಪಹಣಿ ಪತ್ರ ಬರೆದುಕೊಡಬೇಕೆಂದೂ ಸರ್ಕಾರ 1999ರಲ್ಲಿ ಸರ್ಕಾರ ತೀರ್ಮಾನಿಸಿತು ಮತ್ತು ಅದಕ್ಕನ್ವಯ ಜಿಲ್ಲಾಧಿಕಾರಿಗಳು 2000 ರ ಪ್ರಾರಂಭದಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಿದರು. ಕೆಲವೊಂದು ದೋಷಗಳೊಂದಿಗಾದರೂ ಈ ಸುತ್ತೋಲೆ ಅನುಷ್ಠಾನಕ್ಕೆ ಬಂದಿತು.

ಕಂದಾಯ ಇಲಾಖೆ ಫರ್ಮಾನು

ಈ ದೋಷಗಳನ್ನು ನಿವಾರಿಸುವುದರ ಬದಲು ಇಂದಿನ ಸಮ್ಮಿಶ್ರ ಸರ್ಕಾರದಲ್ಲಿ ಭಾ.ಜ.ಪ. ದ ಮುಖಂಡ ಜಗದೀಶ್ ಶೆಟ್ಟರ್‌ರವರ ಕೈಯಲ್ಲಿರುವ ಕಂದಾಯ ಖಾತೆ 31.06.07ರಂದು ಒಂದು ಸುತ್ತೋಲೆ ಹೊರಡಿಸಿ ಬಾಣೆ ಜಾಗವೆಲ್ಲವೂ ಸರ್ಕಾರದ್ದೆಂದು ಘೋಷಿಸಿದೆ. ಇದರಿಂದಾಗಿ ಬೆಳೆಗಾರರಿಗೆ ಸಿಆರ್‌ಸಿ(ಕಾಫಿ ರಿಜಿಸ್ಟ್ರೇಷನ್ ಸರ್ಟಿಫಿಕೇಟ್) ಕೊಡುತ್ತಿಲ್ಲ. ಪರಿಣಾಮವಾಗಿ ಬ್ಯಾಂಕ್ ಸಾಲ ನಿರಾಕರಿಸಲ್ಪಡುತ್ತಿದೆ. ರೈತರು ಸಂಕಷ್ಟಕ್ಕೊಳಗಾಗಿದ್ದಾರೆ.

ಸ್ವಾಭಾವಿಕವಾಗಿಯೇ ಕೊಡಗಿನಲ್ಲಿ ಈ ಸುತ್ತೋಲೆಯ ವಿರುದ್ಧ ಉಗ್ರ ವಿರೋಧ ವ್ಯಕ್ತವಾಗಿದೆ. ಆಡಳಿತೆಯಲ್ಲಿರುವ ಪಕ್ಷಗಳಾದ ಭಾ.ಜ.ಪ. ಜಾತ್ಯಾತೀತ ಜನತಾದಳ ಪಕ್ಷಗಳ ಸ್ಥಳೀಯ ಮುಖಂಡರುಗಳೂ ವಿರೋಧ ವ್ಯಕ್ತಪಡಿಸಿದ್ದಾರೆ. ಆ ಪಕ್ಷಗಳ ಮುಖಂಡರುಗಳು ಕಳೆದ ಎಂಟು ತಿಂಗಳಿನಿಂದಲೂ ಈ ಸುತ್ತೋಲೆಯನ್ನು ಶೀಘ್ರದಲ್ಲೇ ಹಿಂತೆಗೆಸುತ್ತೇವೆಂದು ದಿನವೂ ಭರವಸೆಗಳ ಮೇಲೆ ಭರವಸೆಗಳನ್ನು ಕೊಡುತ್ತಿದ್ದರೂ ಅವರಿಗೆ ಅವರ ಮಂತ್ರಿಯಿಂದಲೇ ಇದನ್ನು ಹಿಂತೆಗೆಸಲು ಸಾಧ್ಯವಾಗಲಿಲ್ಲ.

ಕಂದಾಯ ಮಂತ್ರಿಯ ಕಿಮ್ಮತ್ತು!

ಕಂದಾಯ ಮಂತ್ರಿಯಾಗಿರುವ ಜಗದೀಶ ಶೆಟ್ಟರ್‌ರವರಿಗೆ ಕವಡೆ ಕಾಸಿನ ಕಿಮ್ಮತ್ತೂ ಇಲ್ಲ ಎಂದು ಈ ಸುತ್ತೋಲೆಯನ್ನು ಹೊರಡಿಸಿರುವ ಅದೇ ಖಾತೆಯ ಕಾರ್ಯದರ್ಶಿ ಜಾಮ್ದಾರ್ ತೋರಿಸಿ ಕೊಟ್ಟಿದ್ದಾರೆ. ಎಂಟು ತಿಂಗಳ ಹಿಂದೆ ಸುತ್ತೋಲೆ ಹೊರಡಿಸಿದ ಕಾರ್ಯದರ್ಶಿ 'ಏನೇ ಆದರೂ ನಾನು ಈ ಸುತ್ತೋಲೆ ಹಿಂದೆ ತೆಗೆದುಕೊಳ್ಳುವುದಿಲ್ಲ, ನನ್ನನ್ನು ಯಾವ ಶಾಸಕನೂ ಕಂದಾಯ ಮಂತ್ರಿಯೂ ಬಂದು ಕಂಡಿಲ್ಲ' ಎಂದು ಅಂದೇ ಹೇಳಿದ್ದರೂ ಆತ ಇನ್ನೂ ತನ್ನ ಸ್ಥಾನದಲ್ಲೇ ಇದ್ದಾನೆ.

ಕಸದ ಬುಟ್ಟಿಗೆ ಟಿಪ್ಪಣಿ

ಕಾರ್ಯದರ್ಶಿ ಸುತ್ತೋಲೆ ಹೊರಡಿಸಿ ಎಂಟು ತಿಂಗಳ ನಂತರ ಬಾಣೆ ರಕ್ಷಣಾ ಸಮಿತಿ ಕೊಡಗು ಬಂದಿಗೆ ಕರೆ ಕೊಟ್ಟಾಗ ಕಂದಾಯ ಮಂತ್ರಿ ಅದೇನೋ ಸ್ವಲ್ಪ ಧೈರ್ಯ ಮಾಡಿ 21.06.2007ರಂದು ಕಾರ್ಯದರ್ಶಿಯವರಿಗೆ 'ಸುತ್ತೋಲೆ ಹಿಂತೆಗೆಯುವಂತೆ ಆದೇಶಿಸಿ' ಒಂದು ಟಿಪ್ಪಣಿ ಕಳುಹಿಸಿದರು. ನಿರೀಕ್ಷಿಸಿದಂತೆಯೇ ಆ ಟಿಪ್ಪಣಿ ಕಸದ ಬುಟ್ಟಿ ಸೇರಿತು. ಕಂದಾಯ ಮಂತ್ರಿಯೇ ಈ ರೀತಿಯ ಟಿಪ್ಪಣಿ ಕಳುಹಿಸಿದರೂ ಅದೇ ಖಾತೆಯ ಕಾರ್ಯದರ್ಶಿ ಅದನ್ನು ಕಸದ ಬುಟ್ಟಿಗೆ ಎಸೆದರು. ಆದರೂ ಈ ಸರ್ಕಾರ ಅಂತಹ ದುರಂಹಂಕಾರದ ಅಧಿಕಾರಿಯ ಮೇಲೆ ಯಾವ ಕ್ರಮವನ್ನೂ ತೆಗೆದು ಕೊಳ್ಳುವ ಧೈರ್ಯ ತೋರುತ್ತಿಲ್ಲ. ಅಂದರೆ ಇದು ಅಧಿಕಾರಿಯ ದುರಹಂಕಾರವೋ ಅಥವಾ ಸರ್ಕಾರದ ನಾಟಕವೋ? ಭಾ.ಜ.ಪ. ಮಂತ್ರಿಗಳು ಜನ ದ್ರೋಹಿಗಳು ಎಂದು ಈ ಘಟನೆ ತೋರಿಸುತ್ತಿದೆ.

ಐಕ್ಯತೆ: ಹೋರಾಟದ ಕಣಕ್ಕೆ

ಈ ಹಿನ್ನೆಲೆಯಲ್ಲಿ ಕೆಲವು ತಿಂಗಳ ಹಿಂದೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ದುರ್ಗಾಪ್ರಸಾದ್‌ರನ್ನೊಳಗೊಂಡು ಹಲವರು ಇರುವ ಬಾಣೆ ಹಕ್ಕು ರಕ್ಷಣಾ ಸಮಿತಿ ಎಂಬ ಹೆಸರಿನಲ್ಲಿ ಸಮಿತಿಯೊಂದನ್ನು ರಚಿಸಿಕೊಂಡು ಬಾಣೆ ಹಕ್ಕಿಗಾಗಿ ಹೋರಾಡಲು ಉದ್ಯುಕ್ತರಾಗಿದ್ದಾರೆ. ಜಿಲ್ಲಾ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಜಮ್ಮಡ ಕರುಂಬಯ್ಯನವರು ಅಧ್ಯಕ್ಷರಾಗಿರುವ ಈ ಸಮಿತಿಯಲ್ಲಿ ಪ್ರಮುಖ ವಕೀಲರಾದ ಎ.ಕೆ.ಸುಬ್ಬಯ್ಯನವರು, ಹಿರಿಯರೂ ಮಾರ್ಗದರ್ಶಕರೂ ಆಗಿದ್ದಾರೆ. ನೆರವಂಡ ಉಮೇಶ್‌ರವರು ಸಂಚಾಲಕರಾಗಿದ್ದಾರೆ.

ಬಂದ್‌ಗೆ ಅಭೂತಪೂರ್ವ ಬೆಂಬಲ

ಈ ಸಮಿತಿ ಬಾಣೆ ಹಕ್ಕಿನ ಸಮಸ್ಯೆಯ ಬಗ್ಗೆ ಜನರಲ್ಲಿ ಎಚ್ಚರಿಕೆ ಮೂಡಿಸಲು ಕಿರು ಹೊತ್ತಿಗೆಯೊಂದನ್ನು ಹೊರಡಿಸಿದೆಯಲ್ಲದೆ ಸಭೆಗಳನ್ನೂ ನಡೆಸಿತು. ಮಡಿಕೇರಿಯಲ್ಲಿ ಇದಕ್ಕೆ ಸಂಬಂಧಿಸಿದಂತೆ ಒಂದು ವಿಚಾರಗೋಷ್ಠಿಯೂ ನಡೆಯಿತು. ಜುಲೈ ಎರಡರಂದು ಕೊಡಗು ಬಂದ್‌ಗೆ ಕರೆ ಕೊಡಲಾಗಿದ್ದು ಅದು ಕೊಡಗಿನಾದ್ಯಂತ ಅಭೂತಪೂರ್ವ ಬೆಂಬಲ ಪಡೆಯಿತು. ಕೊಡಗಿನ ಮೂಲೆ ಮೂಲೆಗಳಲ್ಲಿ ಬಂದ್ ನಡೆದಿತ್ತು.

ಬೆಂಗಳೂರಿನಲ್ಲೂ

ಈ ಬಂದ್ ಕೊಡಗಿನ ಒಳಗೆ ಎಂಬಂತೆ ಕೊಡಗಿನ ಹೊರಗೂ ಸಮಸ್ಯೆಯ ಗಂಭೀರತೆಯ ಬಗ್ಗೆ ಕೊಡಗಿನವರ ಚಿಂತನೆಯನ್ನು ಉದ್ದೀಪನಗೊಳಿಸಿತು. ಇದರ ಪರಿಣಾಮವೇ ಬೆಂಗಳೂರಿನಲ್ಲಿ ಅಸ್ತಿತ್ವಕ್ಕೆ ಬಂದ ಕೊಡಗು ಅಸ್ತಿತ್ವ ಸಮಿತಿ ಜುಲೈ 26 ರ ಒಳಗೆ ಈ ಸುತ್ತೋಲೆಯನ್ನು ಸರ್ಕಾರ ಹಿಂತೆಗೆದುಕೊಳ್ಳದಿದ್ದಲ್ಲಿ ಜುಲೈ 30 ರಂದು ಬೆಂಗಳೂರು ಚಲೋ ನಡೆಸಿ ವಿಧಾನಸಭೆಯ ಮುಂಭಾಗ ಧರಣಿ ನಡೆಸಲು ನಿರ್ಧರಿಸಿತ್ತು. ಈ ಬಗ್ಗೆ ವಿಧಾನಸಭೆಯಲ್ಲಿಯೂ ಪ್ರಶ್ನೆಗಳೆದ್ದವು. ಕೊನೆಗೆ 27 ರಂದು ಸರ್ಕಾರ ಕಂದಾಯ ಇಲಾಖೆ ಸುತ್ತೋಲೆ ಹಿಂತೆಗೆದುಕೊಂಡಿದೆ. ಆದರೆ ಅರಣ್ಯ ಇಲಾಖೆ ಸುತ್ತೋಲೆ ವಾಪಸು ತೆಗೆಯಲು ಅಸೆಂಬ್ಲಿಯಲ್ಲಿ ಒತ್ತಾಯಿಸಿದ್ದರಿಂದ ಅನಿವಾರ್ಯವಾಗಿ ಅದನ್ನು ಹಿಂತೆಗೆವ ಭರವಸೆ ದೊರೆತಿದೆ. ಇದು ಜನರ ಹೋರಾಟಕ್ಕೆ ಸಂದ ಜಯ.

ಬೀಡಿ ಕಾರ್ಮಿಕರ ಸಮರ.....

ಪುಟ 8 ರಿಂದ

ಮ್ಯಾನೇಜರ್‌ಗಳು ತಲೆತಗ್ಗಿಸಿ ಕುಳಿತಲ್ಲೇ ಕಲ್ಲಾದರು. ಮೈಸೂರಿನಲ್ಲಿರುವ ಮಾಲಕರು ಫೋನ್ ಕರೆಗಳಿಗೆ ಉತ್ತರಿಸಲು ತಪ್ಪಿಸುತ್ತಾ ಪ್ರತಿ ಸಲವೂ ಶೌಚಾಲಯದಲ್ಲಿದ್ದಾರೆಂಬ ಉತ್ತರ ಬಂತು. ಕೊನೆಗೆ ಮಂಗಳೂರಿನ ಸಹಾಯಕ ಕಾರ್ಮಿಕ ಆಯುಕ್ತರು ಸ್ಥಳಕ್ಕೆ ಆಗಮಿಸಿ ಸಿಐಟಿಯು ನಾಯಕರ ಜತೆಗೆ ಮಾತುಕತೆ ನಡೆಸಿದರು. ಗಣೇಶ್ ಬೀಡಿಯವರು ಕಾರ್ಮಿಕರಿಗೆ ರೂ.1000 ನೀಡಿ ಪೂರ್ತಿ ಹಣ ಸಂದಾಯವಾಗಿದೆಯೆಂದು ಸಹಿ ಮಾಡಿಸುತ್ತಿರುವ ವಂಚನೆಯ ಕೃತ್ಯವನ್ನು ತಕ್ಷಣ ನಿಲ್ಲಿಸಬೇಕೆಂದು ಆಯುಕ್ತರು ಆದೇಶ ನೀಡಿದರು. ಶೀಘ್ರವೇ ಸಭೆ ಕರೆದು ಮಾಲಕರನ್ನು ಕರೆಸಿ ಕಾರ್ಮಿಕ ನಾಯಕರ ಜತೆಗೆ ಚರ್ಚೆ ಮಾಡಿ ಒಪ್ಪಂದದ ಜಾರಿಗೆ ಕ್ರಮಕೈಗೊಳ್ಳುವುದಾಗಿ ಆಯುಕ್ತರು ನೀಡಿದ ಭರವಸೆಗೆ ಮನ್ನಣೆ ನೀಡಿ ಮುತ್ತಿಗೆ ಕಾರ್ಯಕ್ರಮವನ್ನು ಕೊನೆಗೊಳಿಸಲಾಯಿತು.

ಇದೇ ಸಮಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಭಂಟ್ವಾಳ, ಬಿ.ಸಿ.ರೋಡ್, ವಿಟ್ಲ, ಮೂಡಬಿದ್ರೆ, ಉಪ್ಪಿನಂಗಡಿ, ಸುಳ್ಯ, ಉಡುಪಿ ಜಿಲ್ಲೆಯ ಉಡುಪಿ ಮತ್ತು ಬ್ರಹ್ಮಾವರದಲ್ಲಿ ಗಣೇಶ ಬೀಡಿ ಡಿಪೋಗಳಿಗೆ ಮುತ್ತಿಗೆ ಹಾಕಲಾಯಿತು. ಕರಾವಳಿಯ ಎರಡು ಜಿಲ್ಲೆಗಳಲ್ಲಿ ಸುಮಾರು 20 ಸಾವಿರ ಬೀಡಿ ಕಾರ್ಮಿಕರು ಈ ಪ್ರತಿಭಟನೆಯಲ್ಲಿ ಭಾಗವಹಿಸಿದರು. ○



ಬೆಂಗಳೂರಿನಲ್ಲಿ ಬೀಡಿ ಕಾರ್ಮಿಕರ ಪ್ರತಿಭಟನೆ

ಜಗದಗಲ

ಶರತ್‌ಚಂದ್ರ

ತುರ್ಕಿ ಚುನಾವಣೆ : ಜಾತ್ಯಾತೀತ ಶಕ್ತಿಗಳಿಗೆ ಹಿನ್ನಡೆ

ಭಾರೀ ಕುತೂಹಲ ಕೆರಳಿಸಿದ್ದ ತುರ್ಕಿ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಇಸ್ಲಾಮಿಕ್ ಪಕ್ಷ ಎಕೆಪಿ ಭಾರೀ ಜಯ ಗಳಿಸಿದೆ. ಶೇಕಡಾ 46 ಮತ ಗಳಿಸಿ, 550 ಸೀಟುಗಳ ಪಾರ್ಲಿಮೆಂಟಿನಲ್ಲಿ 341 ಸೀಟು ಗೆದ್ದುಕೊಂಡು ಸ್ಪಷ್ಟ ಬಹುಮತ ಗಳಿಸಿದೆ. ಇತ್ತೀಚೆಗೆ ಜಾತ್ಯತೀತ ಮತ್ತು ಇಸ್ಲಾಮಿಕ್ ಮೂಲಭೂತವಾದಿ ಶಕ್ತಿಗಳ ನಡುವೆ ಭಾರೀ ರಾಜಕೀಯ ತಿಕ್ಕಾಟ ನಡೆದ ಹಿನ್ನೆಲೆಯಲ್ಲಿ ಈ ಚುನಾವಣೆ ನಡೆದಿತ್ತು. ಇದು ಜಾತ್ಯತೀತ ಶಕ್ತಿಗಳಿಗೆ ಹಿನ್ನಡೆ ಎನ್ನಬಹುದು. ಕಳೆದ ಚುನಾವಣೆಯಲ್ಲಿ ಎಕೆಪಿ ಶೇಕಡಾ 34 ಮತ ಗಳಿಸಿತ್ತು.



ಪ್ರಮುಖ ವಿರೋಧ ಪಕ್ಷವಾದ ರಿಪಬ್ಲಿಕನ್ (ಸಿ.ಎಚ್.ಪಿ) ಸಹ ಶೇಕಡಾ 2 ರಷ್ಟು ಮತ ಹೆಚ್ಚಿಸಿಕೊಂಡು, ಶೇಕಡಾ 21 ಮತ ಗಳಿಸಿ 111 ಸೀಟು ಪಡೆದಿದೆ. ಆದರೆ ಕಳೆದ ಚುನಾವಣೆಯಲ್ಲಿ 177 ಸೀಟು ಪಡೆದಿತ್ತು. ಸಿ.ಎಚ್.ಪಿ ತುರ್ಕಿ ದೇಶದ ಸ್ಥಾಪಕ ಕೆಮಾಲ್ ಅತಾತುರ್ಕ ಆರಂಭಿಸಿದ ಪಕ್ಷ. ಎಕೆಪಿ ಕಳೆದ ಚುನಾವಣೆಯಲ್ಲಿ ಆಳುವ ಪಕ್ಷವಾಗಿ ಹೊಮ್ಮುವವರೆಗೆ ಅತಿ ದೊಡ್ಡ ಪಕ್ಷವಾಗಿತ್ತು. ಈ ಬಾರಿ ಎಕೆಪಿಯನ್ನು ಸೋಲಿಸಿ ಅಧಿಕಾರಕ್ಕೆ ಬರಬಹುದು ಎಂಬ ನಿರೀಕ್ಷೆ ಫಲಿಸಿಲ್ಲ. 'ಉಗ್ರ-ರಾಷ್ಟ್ರೀಯವಾದಿ' ಎಂ.ಎಚ್.ಪಿ ಈ ಬಾರಿ ಶೇಕಡಾ 10 ಕನಿಷ್ಟ ಮತ ದಾಟಿ 71 ಸೀಟು ಪಡೆದಿದೆ. ಪ್ರಮುಖ ವಿರೋಧ ಪಕ್ಷವಾದ ಜಾತ್ಯತೀತ ಎಡಪಕ್ಷವಾದ ಡಿ.ಎಸ್.ಪಿ., ಸಿ.ಎಚ್.ಪಿ ಜತೆ ಮೈತ್ರಿ ಮಾಡಿಕೊಂಡು, 13 ಸೀಟುಗಳನ್ನು ಪಡೆದಿದೆ. ಕುರ್ದಿಶ್ ಪಕ್ಷದ 25 ಅಭ್ಯರ್ಥಿಗಳು ಕನಿಷ್ಟ ಶೇಕಡಾ 10 ಮತಪ್ರಮಾಣದ ನಿಯಮ ನಿವಾರಿಸಲು ಸ್ವತಂತ್ರ ಅಭ್ಯರ್ಥಿಗಳಾಗಿ ಸ್ಪರ್ಧಿಸಿ ಗೆದ್ದಿದ್ದಾರೆ. ಕುರ್ದಿಶ್ ಪಕ್ಷ ಪಾರ್ಲಿಮೆಂಟಿನಲ್ಲಿ ಪ್ರಾತಿನಿಧ್ಯ ಪಡೆಯುತ್ತಿರುವುದು ಇದೇ ಮೊದಲು.

ತುರ್ಕಿಯ ಪ್ರಮಾಣಾತ್ಮಕ ಪ್ರಾತಿನಿಧ್ಯ ಪದ್ಧತಿ ಪ್ರಕಾರ ಚುನಾವಣೆಯಲ್ಲಿ ಕನಿಷ್ಟ ಶೇಕಡಾ 10 ಸಿಗದಿದ್ದರೆ ಒಂದೂ ಸೀಟು ಸಿಗುವುದಿಲ್ಲ. ಹಲವು ಸಣ್ಣ ಪಕ್ಷಗಳು ಸೇರಿ ಸುಮಾರು ಶೇಕಡಾ 18 ಮತಗಳಿಸಿದ್ದು, ಯಾವುದೇ ಸಿಟು ಪಡೆದಿಲ್ಲ. ಪ್ರಮಾಣಾತ್ಮಕ ಪದ್ಧತಿ ಇರುವ ಹೆಚ್ಚಿನ ದೇಶಗಳಲ್ಲಿ ಈ ಕನಿಷ್ಟ ಮತಪ್ರಮಾಣ ಶೇಕಡಾ 5 ಇದೆ. ಇರುವ ಸೀಟುಗಳನ್ನು ಶೇಕಡಾ 10 ಕ್ಕಿಂತ ಹೆಚ್ಚು ಸಿಕ್ಕಿದ ಪಕ್ಷಗಳ ಮಧ್ಯೆ ಹಂಚಲಾಗುತ್ತದೆ.

ಎಕೆಪಿ ಹಿಂದೆಂದಿಗಿಂತಲೂ ತನ್ನ ರಾಜಕೀಯ ಶಕ್ತಿ ಹೆಚ್ಚಿಸಿಕೊಂಡಿದ್ದು, ತುರ್ಕಿ ಸಮಾಜವನ್ನು ಇನ್ನಷ್ಟು ಹೆಚ್ಚು ಸಾಮಾಜಿಕ-ಧಾರ್ಮಿಕ ಸಾಂಪ್ರದಾಯಿ ಕತೆಯತ್ತ ಒಯ್ಯುವ ಸಾಧ್ಯತೆಯಿದೆ. ಇದು ಜಾತ್ಯತೀತತೆ ಮತ್ತು ಸಾಮಾಜಿಕ ನ್ಯಾಯ ಆಧಾರಿತ ಆಧುನಿಕ ಪ್ರಗತಿಪರ ತುರ್ಕಿ ಕಟ್ಟುವ ದೃಷ್ಟಿಯಿಂದ ನಕಾರಾತ್ಮಕ ಬೆಳವಣಿಗೆ. ಕುರ್ದಿಶ್ ಪಕ್ಷದ ಜತೆ ಮೈತ್ರಿ ಸಾಧಿಸಿದರೆ, ಆಳುವ ಎಕೆಪಿ ಪಕ್ಷಕ್ಕೆ ಸಂವಿಧಾನ ಬದಲಾಯಿಸಲು ಬೇಕಾದ ಮೂರನೇ ಎರಡು ಬಹುಮತ ಬರುತ್ತದೆ. ಇದರಲ್ಲಿ ಅಧ್ಯಕ್ಷೀಯ ಚುನಾವಣೆಯ ನಿಯಮಗಳನ್ನು ಬದಲಾಯಿಸುವುದೂ ಸೇರಿದೆ. ಇದು ತುರ್ಕಿಯ ಜಾತ್ಯತೀತ ಶಕ್ತಿಗಳಲ್ಲಿ ನಡುಕ ತಂದಿದೆ. ಈ ಚುನಾವಣೆಯಲ್ಲಿ ಕುರ್ದಿಶ್ ಬಹುಮತ ಪ್ರದೇಶಗಳಲ್ಲೂ ಹಲವು ಸೀಟುಗಳನ್ನು ಗೆದ್ದ ಎಕೆಪಿ ತನ್ನ ಸಾಮಾಜಿಕ ನೆಲೆಯನ್ನು ವಿಸ್ತರಿಸಿಕೊಂಡಿದೆ. ಎಕೆಪಿ ಆಳ್ವಿಕೆಯ ಮೊದಲ ಅವಧಿಯಲ್ಲಿ ಉತ್ತಮ ಆರ್ಥಿಕ ಸ್ಥಿತಿ, ಯಾವುದೇ ಉಗ್ರ ಸಾಮಾಜಿಕ-ಧಾರ್ಮಿಕ ಕ್ರಮಗಳನ್ನು ಕೈಗೊಳ್ಳದೆ ಅದರ ಪ್ರಭಾವ ವಿಸ್ತರಿಸಿದೆ. ತುರ್ಕಿಯಲ್ಲಿ (ಅಮೆರಿಕನ್ ಸರಕಾರದ ಕುಮ್ಮಕ್ಕಿನಿಂದ) ಮಿಲಿಟರಿ ಹಲವು ಬಾರಿ ಪ್ರಜಾಪ್ರಭುತ್ವ ದಮನ ಮಾಡಿ ಅಧಿಕಾರ ವಹಿಸಿಕೊಂಡಿದೆ. ಚುನಾವಣೆಯ ಮೊದಲು ಎಕೆಪಿಗೆ ಬಹುಮತ ಬಂದರೆ ಮಿಲಿಟರಿ ಸುಮ್ಮನೆ ಇರುವುದಿಲ್ಲ ಎಂಬ ಪರೋಕ್ಷ ಎಚ್ಚರಿಕೆ, ಮಿಲಿಟರಿ-ಆಳ್ವಿಕೆಯ ವಿರೋಧಿಗಳ ಒಂದು ವಿಭಾಗವನ್ನು ಎಕೆಪಿ ಬೆಂಬಲಿಸುವಂತೆ ಮಾಡಿದೆ ಎನ್ನಲಾಗಿದೆ.

ಎಕೆಪಿ ಇಸ್ಲಾಮಿಕ್ ಪಕ್ಷವಾಗಿದ್ದರೂ ಇತರ ದೇಶಗಳ ಇಂತಹ ಪಕ್ಷಗಳಂತೆ ಈ ವರೆಗೆ ಉಗ್ರ ನಿಲುವು ತಳೆದಿಲ್ಲ. ಆದರೆ ಪ್ರಬಲ ಜಾತ್ಯತೀತ ಸಂವಿಧಾನ ಮತ್ತು ಮಿಲಿಟರಿ, ಹಲವು ಪ್ರಬಲ ಜಾತ್ಯತೀತ ಪಕ್ಷಗಳ ರಾಜಕೀಯ ಬಲ, ಯುರೋಪಿಯನ್ ಒಕ್ಕೂಟದ ಒತ್ತಡ - ಈ ವರೆಗೆ ಎಕೆಪಿ ಎಚ್ಚರಿಕೆಯಿಂದ ಹೆಜ್ಜೆ ಹಾಕುವಂತೆ ಮಾಡಿರಬಹುದು. ಚುನಾವಣೆಯ ನಂತರದ ಹೊಸ ಸನ್ನಿವೇಶದಲ್ಲಿ ಎಕೆಪಿ ಸಂವಿಧಾನ ಬದಲಾವಣೆ ಮುಂತಾದ ಕ್ರಮಗಳ ಮೂಲಕ ಶರೀಯತ್ ಆಧಾರಿತ ಧಾರ್ಮಿಕ ಪ್ರಭುತ್ವ ಹೇರುವ ಪ್ರಯತ್ನಗಳನ್ನು ತೀವ್ರಗೊಳಿಸಬಹುದು. ಎರಡನೆ ಅವಧಿಯಲ್ಲಿ ಜನರ ಆರ್ಥಿಕ ಬೆಳವಣಿಗೆ, ಅಸಮಾನತೆ ನಿವಾರಿಸುವ, ಜೀವನ ಮಟ್ಟ ಎತ್ತರಿಸುವ - ಆಶೋತ್ತರಗಳನ್ನು ಈಡೇರಿಸಲು ವಿಫಲವಾದಂತೆ ಜನರ ಗಮನ ಬೇರೆಡೆ ಸೆಳೆಯಲು ಉಗ್ರ ಸಾಮಾಜಿಕ-ಧಾರ್ಮಿಕ ಸಾಂಪ್ರದಾಯಿಕ ಕ್ರಮಗಳನ್ನು ತೆಗೆದುಕೊಳ್ಳಬಹುದು. ಧಾರ್ಮಿಕ ಮತ್ತು ಜಾತ್ಯತೀತ ಶಕ್ತಿಗಳ ನಡುವೆ ತಿಕ್ಕಾಟ ತೀವ್ರ ಸ್ವರೂಪ ಪಡೆಯಬಹುದು. ಒಟ್ಟಾರೆಯಾಗಿ ಚುನಾವಣೆಯ ನಂತರ ತುರ್ಕಿಯ ರಾಜಕೀಯ ಸನ್ನಿವೇಶ ತೀವ್ರ ಮಾರ್ಪಾಟು ಕಂಡಿದೆ.



ಪಾಕಿಸ್ತಾನದ ಕಮ್ಯುನಿಸ್ಟ್ ನಾಯಕ ಕಾಮ್ರೇಡ್ ಸಿ.ಆರ್. ಅಸ್ಲಂ ನಿಧನ

ಪಾಕಿಸ್ತಾನದ ಹಿರಿಯ ಕಮ್ಯುನಿಸ್ಟ್ ನಾಯಕರು, ತಮ್ಮ ಜೀವನದುದ್ದಕ್ಕೂ ಕಾರ್ಮಿಕರ, ರೈತರ ಮತ್ತು ಇತರ ದಮನಿತರ ಹಕ್ಕುಗಳಿಗಾಗಿ ಹೋರಾಟ ನಡೆಸಿದ ಕಾಮ್ರೆಡ್ ಸಿ.ಆರ್. ಅಸ್ಲಂ ಅವರು ಇದೇ ಜುಲೈ 10 ರಂದು ಲಾಹೋರ್‌ನಲ್ಲಿ ನಿಧನರಾದರು. ಅವರಿಗೆ 92 ವರ್ಷ ವಯಸ್ಸಾಗಿತ್ತು.

ಚೌಧರಿ ರೆಹಮತ್ತುಲ್ಲಾ ಅಸ್ಲಂ ಕಾನೂನು ಪದವೀಧರರು. ಕಮ್ಯುನಿಸ್ಟ್ ತತ್ವಶಾಸ್ತ್ರಕ್ಕೆ ಆಕರ್ಷಿತರಾಗಿ 1940ರಲ್ಲೇ ಅವರು ಭಾರತ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು. ಪಕ್ಷದಲ್ಲಿ ಅವರು ಅಂದಿನ ಹಿರಿಯ ನಾಯಕರಾಗಿದ್ದ ಅಜಯ್‌ಕುಮಾರ್ ಘೋಷ್, ಸರ್ದಾರ್ ತೇಜಾಸಿಂಗ್ ಮತ್ತು ನಂತರ ಪಾಕಿಸ್ತಾನ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಫಿರೋಜುದ್ದೀನ್ ಮನ್ಸೂರ್ ಅವರಿಂದ ಮಾರ್ಗದರ್ಶನ ಪಡೆದು ಬೆಳೆದರು. ಕಾರ್ಮಿಕರನ್ನು ಸಂಘಟಿಸುವಲ್ಲಿ ಅವರು ತೊಡಗಿಕೊಂಡಾಗ 1948ರಲ್ಲಿ ಅವರನ್ನು ಬಂಧಿಸಿ ಸೆರೆಮನೆಗೆ ತಳ್ಳಲಾಗಿತ್ತು. ಮುಂದೆ 1951 ರಾವಲಪಿಂಡಿ ಪಿತೂರಿ ಪ್ರಕರಣದ ಹೆಸರಿನಲ್ಲಿ ಬಂಧಿಸಲಾದ ನೂರಾರು ಕಮ್ಯುನಿಸ್ಟ್ ಕಾರ್ಯಕರ್ತರಲ್ಲಿ ಅವರೂ ಒಬ್ಬರಾಗಿದ್ದರು. 1969ರಲ್ಲಿ ಅವರು ಆರಂಭಿಸಿದ ಅವಾಮಿ ಜಮ್ಹುರಿಯತ್ (ಜನತಾ ಪ್ರಜಾಪ್ರಭುತ್ವ) ವಾರಪತ್ರಿಕೆಯು ಎರಡು ತಲೆಮಾರಿನ ರಾಜಕೀಯ ಕಾರ್ಯಕರ್ತರಿಗೆ ಶಿಕ್ಷಣ ಒದಗಿಸಿತು.


ಕಾಮ್ರೆಡ್ ಅಸ್ಲಂ ಅವರ ನಿಧನದಿಂದ ಪಾಕಿಸ್ತಾನದ ಎಡ ಚಳುವಳಿಯ ಒಂದು ಇಡೀ ಅಧ್ಯಾಯವೇ ಮುಕ್ತಾಯಗೊಂಡಂತಾಗಿದೆ. ಪಾಕಿಸ್ತಾನದ ಎಡ ಪ್ರಗತಿಪರ ಚಳುವಳಿಗೆ ತುಂಬಲಾರದ ನಷ್ಟವಾಗಿದೆ. ಜನಶಕ್ತಿ ಕಾಮ್ರೆಡ್ ಅಸ್ಲಂ ಅವರ ನಿಧನಕ್ಕೆ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ.

ಶೇಖ್ ಹಸೀನಾ ಬಂಧನ : ಹಂಗಾಮಿ ಸರ್ಕಾರದ ಸಂಚು ಬಯಲು

ದೇಶದ ಮಾಜಿ ಪ್ರಧಾನಿ ಮತ್ತು ಪ್ರಮುಖ ಪಕ್ಷವಾದ ಅವಾಮೀ ಲೀಗ್ ಪಕ್ಷದ ಅಧ್ಯಕ್ಷೆ ಶೇಖ ಹಸೀನಾರನ್ನು, ಬಾಂಗ್ಲಾದೇಶದ ಹಂಗಾಮಿ ಸರಕಾರ ಬಂಧಿಸಿದೆ. ಅದರ ಹಿಂದಿನ ದಿನವಷ್ಟೇ ಚುನಾವಣಾ ಕಮೀಶನ್ ಚುನಾವಣಾ ಯೋಜನೆಯ ಪ್ರಮುಖ ಮೈಲಿಗಲ್ಲುಗಳನ್ನು ಪ್ರಕಟಿಸಿತ್ತು. ಇದರ ಪ್ರಕಾರ ಡಿಸೆಂಬರ್ 2008 ರಲ್ಲಿ ಚುನಾವಣೆ ನಡೆಯಬೇಕಿತ್ತು. ಈ ಮೂಲಕ ಅಮೆರಿಕ ಮತ್ತು ಪಾಶ್ಚಿಮಾತ್ಯ ದೇಶಗಳ ಬೆಂಬಲ ಇರುವ ಹಂಗಾಮಿ ಸರಕಾರದ ಸಂಚು ಬಯಲಾಗಿದೆ. ಪ್ರಮುಖ ರಾಜಕೀಯ ಪಕ್ಷಗಳು ಮತ್ತು ನಾಯಕರು ಮುಂಬರುವ ಚುನಾವಣೆಗಳಲ್ಲಿ ಭಾಗವಹಿಸದಂತೆ ಮಾಡುವುದೇ ಆ ಸಂಚು.

ಶೇಖ ಹಸೀನಾರ ಬಂಧನಕ್ಕೆ ವ್ಯಾಪಕವಾಗಿ ದೇಶದಾದ್ಯಂತ ಪ್ರತಿಭಟನೆ ಕಂಡು ಬಂದಿದೆ. ದೇಶದಲ್ಲಿ ತುರ್ತು ಪರಿಸ್ಥಿತಿ ಜಾರಿಯಾಗಿ, ಹಂಗಾಮಿ ಸರಕಾರ ಬಂದ ನಂತರ ಇಂತಹ ವ್ಯಾಪಕ ಪ್ರತಿಭಟನೆ ಕಂಡಿರಲಿಲ್ಲ. ಬಂಧಿತ ಹಸೀನಾರನ್ನು ಒಯ್ಯುತ್ತಿದ್ದ ವ್ಯಾನ್ ಗೆ ನೂರಾರು ವಕೀಲರು, ಅವಾಮಿ ಲೀಗ್ ಕಾರ್ಯಕರ್ತರು, ಮಹಿಳೆಯರು ಬಹಳ ಹೊತ್ತು ದಿಗ್ಬಂಧನ ಹಾಕಿದ್ದರು.

ಐಎಂಎಫ್ ಮತ್ತು ವಿಶ್ವ ಬ್ಯಾಂಕ್ ಅಣತಿಯಂತೆ ನಡೆಯುವ ಸರಕಾರ ಸ್ಥಾಪಿಸಲು ಸಾಮ್ರಾಜ್ಯಶಾಹಿ ಶಕ್ತಿಗಳು ಮತ್ತು ಅವರ ಬಾಲಬಡುಕ ಮಿಲಿಟರಿ ಅಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ. ದೇಶದ ಎರಡು ಪ್ರಮುಖ ರಾಜಕೀಯ ಪಕ್ಷಗಳು ಮತ್ತು ಮಾಜೀ ಪ್ರಧಾನಿಗಳನ್ನು ರಾಜಕೀಯವಾಗಿ ಮುಗಿಸಿ ಬಿಡುವ ಸನ್ನಾಹ ನಡೆದಿದೆ. ಖಲೀದಾ ಜೀಯಾ ಅವರ ಬಂಧನಕ್ಕೂ ತಯಾರಿ ನಡೆದಿದೆ ಎನ್ನಲಾಗಿದೆ. ಎರಡೂ ಪಕ್ಷಗಳನ್ನು ಒಡೆಯಲು ಆಗಲೇ ಸರಕಾರ ಪ್ರಯತ್ನಿಸುತ್ತಿದೆ. ಈಗಾಗಲೇ ಸುಮಾರು 200 ರಾಜಕೀಯ ನಾಯಕರನ್ನು ಹಲವು ಕ್ಷುಲ್ಲಕ ಮತ್ತು ಕಪೋಲ ಕಲ್ಪಿತ ಆರೋಪಗಳ ಮೇಲೆ ಬಂಧಿಸಲಾಗಿದೆ. ಅವರಲ್ಲಿ ಎಂಟು ಜನರಿಗೆ 8 ರಿಂದ 15 ವರ್ಷಗಳ ಕಠಿಣ ಶಿಕ್ಷೆ ಸಹ ವಿಧಿಸಲಾಗಿದೆ. ಅವರು ಚುನಾವಣೆಯಲ್ಲಿ ಸ್ಪರ್ಧಿಸದಂತೆ ಮಾಡುವುದು ಪ್ರಮುಖ ಉದ್ದೇಶ. 'ಭ್ರಷ್ಟಾಚಾರ-ವಿರೋಧಿ' ಕಮೀಶನ್ ಅಧ್ಯಕ್ಷರಾದ ಜನರಲ್ ಮುಖ್ಯ ನ್ಯಾಯಾಧೀಶರನ್ನು ಭೇಟಿ ಮಾಡಿ, ಅವರಿಗೆ ಜಾಮೀನು ಸಿಗದಂತೆ ಮಾಡುವುದು ಹೇಗೆ ಎಂಬ ಬಗ್ಗೆ ಚರ್ಚಿಸಿದರಂತೆ. ರಾಜಕೀಯ ಪಕ್ಷಗಳ ಮೇಲೆ ಹರಿಯಬಿಟ್ಟಿರುವ ಈ ದಾಳಿಗೆ ಧಾರ್ಮಿಕ ಮೂಲಭೂತವಾದಿ ಪಕ್ಷಗಳೂ, ಅದರ ನಾಯಕರು ಬಲಿಯಾಗಿಲ್ಲ ಎಂಬುದು ಹಂಗಾಮಿ ಸರಕಾರದ ಸ್ವರೂಪ ಗೊತ್ತಿರುವವರಿಗೆ ಆಶ್ಚರ್ಯವೇನಲ್ಲ.



ಈ ನಡುವೆ ಹಂಗಾಮಿ ಸರಕಾರ ಐಎಂಎಫ್ ಮತ್ತು ವಿಶ್ವ ಬ್ಯಾಂಕ್ ಗಳಿಗೆ ಪ್ರಿಯವಾದ ಜನ-ವಿರೋಧಿ ನೀತಿಗಳನ್ನು ರಭಸದಿಂದ ಜಾರಿಗೊಳಿಸುತ್ತಿದೆ. ಖುಲ್ನಾದಲಿರುವ ಸರಕಾರಿ ಒಡೆತನದ ನಾಲ್ಕು ಸೆಣಬು ಮಿಲ್ಲುಗಳನ್ನು ಮುಚ್ಚಿ, ಆರು ಸಾವಿರ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಲಾಗಿದೆ. ಸರಕಾರಿ ಒಡೆತನದ ವಿಮಾನ ಯಾನ ಕಂಪನಿ 'ಬಾಂಗ್ಲಾ ಬಿಮಾನ' ವನ್ನು ಖಾಸಗೀಕರಿಸಿ, ಎರಡು ಸಾವಿರ ಕಾರ್ಮಿಕರಿಗೆ ಸ್ವಯಂ ನಿವೃತ್ತಿ ಕೊಡಲಾಗಿದೆ. ಗಾರ್ಮೆಂಟ್ ಕಾರ್ಮಿಕರು ಮಜೂರಿ ಬಗ್ಗೆ ಮತ್ತು ರೈತರು ಗೊಬ್ಬರದ ಅಭಾವ ಪ್ರತಿಭಟಿಸಿದಾಗ ಅವರ ಮೇಲೆ ತೀವ್ರ ದಮನ ಹರಿಯ ಬಿಡಲಾಗಿದೆ. ಹಂಗಾಮಿ ಸರಕಾರದ ಸ್ವಭಾವ ಇವೆಲ್ಲದರಿಂದ ಸ್ಪಷ್ಟವಿದೆ. ಇಂತಹ ಸರಕಾರವನ್ನು ಕಿತ್ತು ಹಾ[illegible] ಪ್ರಜಾಪ್ರಭುತ್ವವನ್ನು ಪುನಃ ಸ್ಥಾಪಿಸಲು ಬಾಂಗ್ಲಾದೇಶದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ತಯಾರಿ ನಡೆಸುತ್ತಿವೆ. ಇದಕ್ಕೆ ಪೂರ್ಣ ಬೆಂಬಲ ಕೊಡಬೇಕಾದ್ದು ಭಾರತದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಕರ್ತವ್ಯ. ಭಾರತ ಸರ್ಕಾರ ಸಹ ಕೈಕಟ್ಟಿ ಸುಮ್ಮನೆ ಕುಳಿತುಕೊಳ್ಳುವಂತಿಲ್ಲ.



ಚನ್ನಬಸವಣ್ಣ, ಡಾ. ಕೆ.ವಿ.ಎನ್., ಎಸ್.ವೈ.ಜಿ., ಎಸ್.ಪ್ರಸನ್ನಕುಮಾರ್, ಯು. ಬಸವರಾಜು

ಬಳ್ಳಾರಿಯಲ್ಲಿ ಜನಶಕ್ತಿ ಬಿಡುಗಡೆ

'ಜನರಲ್ಲಿನ ಪ್ರತಿಭಟನಾ ಶಕ್ತಿ ಹೊರಹೊಮ್ಮಿಸಬೇಕು'

- ಡಾ. ಕೆ.ವಿ.ನಾರಾಯಣ

ಡಿಯುವ ಜನರ ಪ್ರಾಣ ಮಿತ್ರ 'ಜನಶಕ್ತಿ' ಪತ್ರಿಕೆಯ ಡುಗಡೆ ಸಮಾರಂಭವು ಬಳ್ಳಾರಿಯ ಂಧಿಭವನದಲ್ಲಿ ನಡೆಯಿತು. ಪತ್ರಿಕೆಯನ್ನು ಬಿಡುಗಡೆ ಾಡಿ ಮಾತನಾಡಿದ ಕನ್ನಡ ವಿಶ್ವ ವಿದ್ಯಾಲಯ ಂಪಿ)ದ ಪ್ರಭಾರಿ ಉಪ ಕುಲಪತಿಗಳಾದ ಡಾ: .ವಿ.ನಾರಾಯಣರವರು ದುಡಿಯುವ ಜನರ ್ರಾಣಮಿತ್ರ ಎಂಬ ವಾಕ್ಯದಲ್ಲಿಯೇ ಪತ್ರಿಕೆಯ ್ಯೇಯೋದ್ದೇಶ ಅಡಗಿದೆ. ಪತ್ರಿಕಾ ಮಾಧ್ಯಮ ದಿಕ್ಕು ಪ್ಪಿರುವ ಈ ಸಂದರ್ಭದಲ್ಲಿ ಇಂತಹ ಪತ್ರಿಕೆಯ ವಶ್ಯಕತೆ ತುಂಬಾ ಇದೆ ಎಂದು ತಿಳಿಸಿದರು.

ಜಾಗತೀಕರಣದ ಪ್ರಭಾವದಲ್ಲಿ ಪ್ರಗತಿಪರ ಿಂತನೆಗಳು, ಮಾನವೀಯ ಮೌಲ್ಯಗಳು ಕೊಚ್ಚಿ ೋಗುತ್ತಿವೆ. ಇಂತಹ ಸಂದರ್ಭದಲ್ಲಿ ಹರಿತವಾದ ಿಶ್ಲೇಷಣೆ ಅಗತ್ಯವಿದೆ. ರಾಷ್ಟ್ರದ ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸಿದಾಗ ಕಳೆದ ಹತ್ತು ರ್ಷಗಳಲ್ಲಿ ಉಳ್ಳವರು ಮತ್ತು ಇಲ್ಲದವರ ಮಧ್ಯೆ ಅಂತರ ಬಹಳಷ್ಟು ಹೆಚ್ಚಾಗಿದೆ. 40 ರಿಂದ 60 ೋಟಿಯಷ್ಟು ಜನ ಬಡತನದ ರೇಖೆಗಿಂತ ಕೆಳಗೆ ದುಕುತ್ತಿದ್ದಾರೆ. ಈ ಜನರ ಸಂಖ್ಯೆ ಅಮೇರಿಕಾದ ಜನಸಂಖ್ಯೆಯ ಎರಡು ಪಟ್ಟಿಗಿಂತಲೂ ಹೆಚ್ಚಾಗಿದೆ ಎಂದು ಡಾ: ಕೆ.ವಿ.ಎನ್. ವಿಷಾದಿಸಿದರು.

ಶ್ರಮ ಸಂಸ್ಕೃತಿಯ ನಿರಾಕರಣೆ

ಉತ್ಪಾದನೆಯ ಪ್ರಕ್ರಿಯೆಯಲ್ಲಿ ತೊಡಗಿರುವ ಶ್ರಮಜೀವಿಗಳನ್ನು ಜನ ಎಂಬ ಪರಿಭಾಷೆಯಲ್ಲಿ ಕರೆಯಲಾಗುತ್ತಿದ್ದು, ಇಂತಹ ಜನರ ಧ್ವನಿಯಾಗಿ ಜನಶಕ್ತಿ ಪತ್ರಿಕೆ ಇದೆ ಎಂದು ಹೆಮ್ಮೆಪಟ್ಟರು. 'ಜನಶಕ್ತಿ' ಯನ್ನು ನಾಶ ಮಾಡುತ್ತಿರುವ ಜಾಗತೀಕರಣದ ಅಪಾಯವನ್ನು ಡಾ: ನಾರಾಯಣ ಬಿಡಿಸಿಟ್ಟರು. 2020ಕ್ಕೆ ಇಡೀ ದೇಶ ಜ್ಞಾನ ಸಮಾಜವಾಗಲಿದೆ ಎಂದಿರುವ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂರವರ ಹೇಳಿಕೆ ಅಪಾಯಕಾರಿಯಾಗಿದೆ. ಈ ಹೇಳಿಕೆ ಶ್ರಮ ಸಂಸ್ಕೃತಿಯನ್ನು ನಿರಾಕರಿಸುವುದು ಮಾತ್ರವಲ್ಲ ನಾಶ ಮಾಡುವುದೇ ಆಗಿದೆ ಎಂದು ಅವರು ಎಚ್ಚರಿಸಿದರು. ಇಂತಹ ಹೇಳಿಕೆಗಳ ಬಗ್ಗೆ ಮಾಧ್ಯಮಗಳು ವಿಶ್ಲೇಷಿಸುವುದನ್ನು ಬಿಟ್ಟು ವೈಭವೀಕರಿಸುವುದು ಸರಿಯಲ್ಲ ಎಂದು ಹೇಳಿದ ಅವರು ವ್ಯಕ್ತಿಗಿಂತ ವಿಚಾರಮುಖ್ಯ ಅದು ಜನಪರವಾಗಿದ್ದಾಗ ಮಾತ್ರ ಅದಕ್ಕೆ ಬೆಲೆ ಬರುತ್ತದೆ ಎಂದರು. ಮಾಧ್ಯಮಗಳು ಭ್ರಷ್ಟಾಚಾರದ ಬಗ್ಗೆ ಬರೀ ವರದಿ ಮಾಡಿದರೆ ಏನೂ ಪ್ರಯೋಜನವಿಲ್ಲ. ಜನರಲ್ಲಿರುವ ಪ್ರತಿಭಟನಾ ಶಕ್ತಿಯನ್ನು ಹೊರ ಹೊಮ್ಮಿಸಬೇಕು. ಹಾಗಾದಾಗ ಮಾತ್ರ ಬದಲಾವಣೆ ಸಾಧ್ಯವಾಗುತ್ತದೆ.

ಜನಶಕ್ತಿ ಪತ್ರಿಕೆಯ ಸಂಪಾದಕರಾದ ಎಸ್.ವೈ.ಗುರುಶಾಂತ್‌ರವರು ಪತ್ರಿಕೆಯ ಆಶಯ, ಗುರಿಗಳನ್ನು ಪ್ರಸ್ತಾಪಿಸಿದರು.

ಕವಿಯತ್ರಿ ಎನ್.ಡಿ. ವೆಂಕಮ್ಮ ನವರು ಮಾತನಾಡಿ ಪತ್ರಿಕೆಯೊಂದನ್ನು ನಡೆಸುವುದು ತುಂಬಾ ಕಷ್ಟದ ಕೆಲಸ ಎಂಬುದನ್ನು ತಮ್ಮ ಅನುಭವದ ಮೂಲಕ ವಿವರಿಸಿದರು. ಶಂಬೂಕ ಎಂಬ ಪತ್ರಿಕೆಯ ಸಂಪಾದಕರು ಅನುಭವಿಸಿದ ಕಷ್ಟ ಕೋಟಲೆಗಳು ಹಾಗೂ ಪತ್ರಿಕೆಗಾಗಿ ಬ್ಯಾಂಕ್‌ನಿಂದ ಪಡೆದ ಸಾಲಕ್ಕೆ ಜಾಮೀನು ನೀಡಿದ್ದಕ್ಕಾಗಿ ಸಾಲವನ್ನು ತಾವೇ ತೀರಿಸಬೇಕಾದ ಕಹಿ ನೆನಪಿನ ಪ್ರಸಂಗವನ್ನು ವೆಂಕಮ್ಮ ವಿವರಿಸಿದರು.

ಆದರ್ಶಗಳ ಕೊರತೆ

ಲೋಹಿಯಾ ಪ್ರಕಾಶನದ ಸಿ.ಚನ್ನಬಸವಣ್ಣನವರು ಕನಸುಗಳಿಲ್ಲದ, ವಿಸ್ಮಯಗಳಿಲ್ಲದ, ಮಾತುಗಳಿಲ್ಲದ ಆತಂಕದ ಪರಿಸ್ಥಿತಿಯಲ್ಲಿ ನಾವು ಬದುಕುತ್ತಿದ್ದೇವೆ ಎಂದು ಕಾವ್ಯಾತ್ಮಕ ಶೈಲಿಯಲ್ಲಿ ಮಾತುಕತೆಗಳನ್ನಾರಂಭಿಸಿ, ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಅಪಾಯಗಳನ್ನು ಬಿಡಿಸಿಟ್ಟರು. ಇಂದು ನಮಗೆ ಬೇಕಾಗಿರುವುದು ಮಾನವೀಕರಣ ಎಂದು ಹೇಳಿದ ಚನ್ನಬಸವಣ್ಣನವರು ಅಕ್ಷರ ಸಂಸ್ಕೃತಿಯ ಒಳ ತೊಳೆಗಳನ್ನು ಬಿಡಿಸಿ ತೋರಿಸುತ್ತಾ ಶಿಕ್ಷಣ ವಿವೇಕವನ್ನು ಕೊಡುವಂತಾಗಬೇಕು ಎಂದರು. ಹಣದಿಂದ ಹಣವನ್ನು ಬೆಳೆಯುವ ಜಾಗತೀಕರಣವನ್ನು ಖಂಡಿಸಿದ ಅವರು ಇದರಿಂದಾಗಿ ಯುವ ಜನರಲ್ಲಿ ಆದರ್ಶಗಳ ಕೊರತೆಯಾಗಿದೆ ಎಂದರು.

ಬರದ ಬೇಗುದಿಯಲ್ಲಿ ಜನರ ಸಾಯುತ್ತಿರುವಾಗ ಈ ಪರಿಸ್ಥಿತಿಯನ್ನು ಸಹ ಲಾಭಕ್ಕಾಗಿ ಬಳಸಿಕೊಳ್ಳಲಾಗುತ್ತಿರುವ ಕ್ರೌರ್ಯದ ಬಗ್ಗೆ ಪತ್ರಕರ್ತ ಪಿ. ಸಾಯಿನಾಥರ ವಿಶ್ಲೇಷಣೆ ಪ್ರಸ್ತಾಪಿಸಿದರು. ಚನ್ನ ಬಸವಣ್ಣ, ಪ್ರತಿಯೊಂದನ್ನು ಹೋರಾಟದ ಮೂಲಕ ಪಡೆಯಬೇಕಾಗಿದೆ. ಇಂತಹ ಹೋರಾಟಗಳಿಗೆ ಜನಶಕ್ತಿ ಪತ್ರಿಕೆ ಸ್ಫೂರ್ತಿಯಾಗಲಿ ಎಂದು ಆಶಿಸಿದರು.

ಸಿಐಟಿಯು ರಾಜ್ಯ ಕಾರ್ಯದರ್ಶಿಗಳಾದ ಸಂಪಾದಕ ಮಂಡಳಿ ಸದಸ್ಯರಾದ ಎಸ್. ಪ್ರಸನ್ನಕುಮಾರ್‌ರವರು ಲಾಭವೇ ಜಗತ್ತನ್ನು ಆಳುತ್ತಿವೆ. ಈ ಲಾಭದ ಶಕ್ತಿಗಳೇ ಮಾಧ್ಯಮಗಳನ್ನು ಆಳುತ್ತಿವೆ. ಇದಕ್ಕೆ ವಿರುದ್ಧವಾಗಿ ಜನಶಕ್ತಿ ಪತ್ರಿಕೆ ದುಡಿಯುವ ಜನರ ಚಳುವಳಿಗೆ ಬೆಂಬಲವಾಗಿ ನಿಂತಿದೆ. ಪತ್ರಿಕೆಯನ್ನು ಜಿಲ್ಲೆಯಲ್ಲಿ ಕನಿಷ್ಟ ಒಂದುಸಾವಿರಕ್ಕೆ ಪ್ರಸಾರ ಹೆಚ್ಚಿಸಲು ಶ್ರಮಿಸಬೇಕಿದೆ ಎಂದರು. ಎಪಿಎಂಸಿ ತಿದ್ದುಪಡಿ ಕಾಯ್ದೆಯ ಮೂಲಕ ಆಳುವ ವರ್ಗದ ಸರ್ಕಾರ ರೈತರ ಮತ್ತು ದುಡಿಯುವ ಜನರ ಬದುಕನ್ನು ದಿವಾಳಿಯೆಬ್ಬಿಸುವ ಹುನ್ನಾರ ನಡೆಸಿದೆ. ಇಂತಹ ಕಾಯ್ದೆಗಳ ವಿರುದ್ಧ ಪ್ರಬಲವಾದ ಚಳುವಳಿ ಬೆಳೆದು ಬರಬೇಕೆಂದು ತಿಳಿಸಿದರು.

ಸಿಪಿಎಂ ಪಕ್ಷದ ಬಳ್ಳಾರಿ ಜಿಲ್ಲಾ ಕಾರ್ಯದರ್ಶಿಗಳಾದ ಯು. ಬಸವರಾಜ್‌ರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ದುಡಿಯುವ ಜನರ ಏಳಿಗೆಯನ್ನು ಪತ್ರಿಕೆಗಳು ಮಾಡಬೇಕು. ಇದು ಪತ್ರಿಕಾ ಧರ್ಮವಾಗಿದೆ. ಈ ಕೆಲಸವನ್ನು ಜನಶಕ್ತಿ ಮಾಡುತ್ತಿದೆ. ಬಹಳಷ್ಟು ಪತ್ರಿಕೆಗಳು ಜನರನ್ನು ಸಿನಿಕರನ್ನಾಗಿ ಮಾಡುತ್ತಿವೆ ಎಂದರು. ಅಸಮಾನತೆಯಿಂದ ಕೂಡಿರುವ ಈ ಸಮಾಜದಲ್ಲಿ ಪತ್ರಿಕೆಗಳು ನಿಷ್ಪಕ್ಷಪಾತವಾಗಿ ಕೆಲಸ ಮಾಡಲು ಸಾಧ್ಯವಿಲ್ಲ. ಬಹಳಷ್ಟು ಪತ್ರಿಕೆಗಳು ಸುಲಿಗೆ ಮಾಡುವವರ ಪರವಾಗಿವೆ. ಆದರೆ ಜನಶಕ್ತಿ ಪತ್ರಿಕೆ ದುಡಿಯುವ ಜನರ ಪರವಾಗಿದೆ ಎಂದು ಬಸವರಾಜ್ ನುಡಿದರು.

ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು ಮಣ್ಣುಗಳ ಗುಡಿಯೊಳಗೆ ಎಂಬ ಹಾಡಿನೊಂದಿಗೆ ಕರುಣಾನಿಧಿಯವರು ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಪ್ರಾರಂಭಿಸಿದರು. ವೆಂಕಟರಮಣ ಸ್ವಾಗತಿಸಿದರು. ಪಿ.ಆರ್. ವೆಂಕಟೇಶ್ ವಂದಿಸಿದರು.

- ಹುಲಿಕಟ್ಟೆ ಚನ್ನಬಸಪ್ಪ

ಗುಲ್ಬರ್ಗಾದಲ್ಲಿ ವಾರದ ಸಂಚಿಕೆ ಬಿಡುಗಡೆ

ಬಿಟ್ಟಿಗೆ ಬಂತೇನೋ ದೌತಿ ಲೆಕ್ಕಣಿಕೆ ?

ಹೊತ್ತು ನುಚ್ಚಿಲ್ಲ ಹುಗ್ಗಿಗೆಲ್ಲಾದ ಬೆಲ್ಲ
ಸಿಟ್ಟಿಗೆ ಬರಲ್ಯಾಕೆ ಸುಳ್ಳಂತ ಬರಿಲ್ಯಾಕೆ
ಬಿಟ್ಟಿಗೆ ಬಂತೇನೊ ದೌತಿ ಲೆಕ್ಕಣಿಕೆ

ಬಿರು ಬಿಸಲಿನ ಬರಗಾಲದ ನಾಡಿನ ಕವಿಯೊಬ್ಬನು ಈ ಪದ್ಯದ ಮುಖಾಂತರ ತನ್ನ ಬರವಣಿಗೆಯ ಬದ್ಧತೆ ಕುರಿತು ಮಾತಾಡುತ್ತಿದ್ದಾನೆ. ನೂರ ಐವತ್ತು ವರ್ಷಗಳ ಹಿಂದೆ ಗುಲ್ಬರ್ಗಾ ಸೀಮೆಯಲ್ಲಿ ಬಾಳಿ ಹೋಗಿರುವ ಅನುಭಾವಿ ಕವಿ ಕಡಕೋಳ ಮಡಿವಾಳಪ್ಪನವರ ತತ್ವಪದದ ಈ ಸಾಲುಗಳು ಒಂದೆಡೆ ಬಯಲು ಸೀಮೆಯ ಬವಣೆಯನ್ನು ಚಿತ್ರಿಸಿದರೆ; ಇನ್ನೊಂದೆಡೆ ಇಂಥ ನೆಲದೊಡನೆ ಬದುಕುತ್ತಿರುವ ಬರಹಗಾರರ ಸಾಮಾಜಿಕ ಕಾಳಜಿಯನ್ನು ಬಿಂಬಿಸುತ್ತದೆ. ಒಂದ್ಹೊತ್ತು ನುಚ್ಚಿಗೂ ಗತಿಯಿಲ್ಲದ ಈ ನಾಡಿನಲ್ಲಿ ಪಾಯಸ, ಹೋಳಿಗೆ ಇತ್ಯಾದಿ ಮೃಷ್ಟಾನ್ನ ಬಯಸುವುದು ಹಾಸ್ಯಾಸ್ಪದ. ಅಂತೆಯೇ ಸಾಹಿತ್ಯದಲ್ಲಿಯೂ ನೆಲದ ವಾಸ್ತವಗಳು ಕಾಣಿಸಬೇಕೆ ವಿನಹ ಮುಷ್ಠಿಯಷ್ಟು ಜನರ ಐಷಾರಾಮಿ ಬದುಕನ್ನು ವೈಭವೀಕರಿಸಲಾಗದು. ಏಕೆಂದರೆ ನನ್ನ ದೌತಿ ಲೆಕ್ಕಣಿಕೆಗಳು ಉಳ್ಳವರ ಫರಾಕು ಹೊಡೆಯಲು ಸೃಷ್ಟಿಯಾದವುಗಳಲ್ಲ. ವಾಸ್ತವದಲ್ಲಿ ಅಸ್ತಿತ್ವದಲ್ಲಿ ಇರಲಾರದನ್ನು ವೈಭವೀಕರಿಸಿ ಬರೆಯಲು ನನ್ನ ಲೇಖನಿ ಬಿಟ್ಟಿಗೆ (ಪುಗಸಟ್ಟೆ) ಬಂದಿಲ್ಲ ಎಂದು ಹೇಳುವ ಲೇಖಕ ಮಡಿವಾಳಪ್ಪನವರ ಮಾತುಗಳು ಈ ಹೊತ್ತಿಗೂ ಪ್ರಸ್ತುತವಾಗುತ್ತವೆ ಎಂಬುದನ್ನು ಕೆ.ನೀಲಾ ಹೃದಯಸ್ಪರ್ಶಿಯಾಗಿ ವಿವರಿಸಿದರು. ಹೌದು, ದಿನಾಂಕ: 21.07.07ರಂದು ಗುಲ್ಬರ್ಗಾ ನಗರದ ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಜನಶಕ್ತಿ' ವಾರ ಪತ್ರಿಕೆಯ ಬಿಡುಗಡೆ ಸಮಾರಂಭದಲ್ಲಿ ಈ ಮೇಲಿನ ಮಾತುಗಳು ಪ್ರಸ್ತಾಪಿಸಲ್ಪಟ್ಟು ಪತ್ರಿಕೆಗಳ ಜವಾಬ್ದಾರಿಯನ್ನು ಎತ್ತಿ ತೋರಿಸಿದವು.

ದೇಶದ ಜೈಲುಗಳಲ್ಲಿರುವ ಕೈದಿಗಳಿಗೆ ದಿನಕ್ಕೆ ಸರಾಸರಿ 710 ಗ್ರಾಂ ಆಹಾರ ದೊರೆಯುತ್ತದೆ. ಆದರೆ ಬಿ.ಪಿ.ಎಲ್. ಕಾರ್ಡ್ ಪಡೆದಿರುವ ರೈತನೊಬ್ಬನಿಗೆ ದಿನಕ್ಕೆ ಸರಾಸರಿ 45 ಗ್ರಾಂ ಮಾತ್ರ ಆಹಾರ ದೊರೆಯುತ್ತದೆ. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯೊಂದಲ್ಲಿಯೇ 1997 ರಿಂದ 2000 ರ ಅವಧಿಯಲ್ಲಿ ಸುಮಾರು 1800 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿದರ್ಭದಲ್ಲಿ ಜೋಳದ ಉತ್ಪಾದನೆ ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಶೇ.30 ರಿಂದ ಶೇ 3 ಕ್ಕೆ ಇಳಿದಿದೆ. ಮಹಾರಾಷ್ಟ್ರದಲ್ಲಿ ರೈತರು ಟ್ರಾಕ್ಟರ್ ಖರೀದಿಸಲು ಬ್ಯಾಂಕಿನಲ್ಲಿ ಶೇ15 ಬಡ್ಡಿದರ ಇದ್ದರೆ, ಉಳ್ಳವರು ಐಷಾರಾಮಿ ಬದುಕಿಗೆಂದು ಮರ್ಸಿಡಿಸ್ ಕಾರು ಖರೀದಿಸಲು ಬಡ್ಡಿ ದರ ಶೇ 4 ಇದೆ. ಮುಂಬೈ ಷಹರಾದಲ್ಲಿ ಲಾಕ್ಮೆ ಬ್ಯೂಟಿ ಷೋ ಅದು ಕಾಟನ್ ಬಟ್ಟೆಯ ಬ್ಯೂಟಿ ಷೋ ನಡೆಯುತ್ತಿರಬೇಕಾದರೆ ಹಳ್ಳಿಗಳಲ್ಲಿ ಅದೇ ವಾರದಲ್ಲಿ ಕಾಟನ್ (ಹತ್ತಿ) ಬೆಳೆದ 45 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು. ಇಂಥ ಹತ್ತಾರು ಅಂಕಿ ಸಂಖ್ಯೆಗಳನ್ನು ಸಾದರಪಡಿಸಿ ವರ್ತಮಾನದ ದೇಶದ ಆರ್ಥಿಕಾಭಿವೃದ್ಧಿಯ ಚಿತ್ರಣವನ್ನು ಎದೆ ಬಿರಿಯುವಂತೆ ತೆರೆದಿಟ್ಟವರು ದಿಟ್ಟ ಪತ್ರಕರ್ತ ಪಿ.ಸಾಯಿನಾಥರು, ಜನಶಕ್ತಿಯ ಪತ್ರಿಕೆಯ ಉದ್ಘಾಟಕರಾಗಿ ಆಗಮಿಸಿದ್ದ ಪಿ.ಸಾಯಿನಾಥರು ಭಾರತದ ಹೊಸ ಆರ್ಥಿಕ ನೀತಿಯಿಂದಾಗಿ ರೈತಾಪಿ ಸಮೂಹ ಅಪ್ಪಿದ ಭಯಾನಕ ಸಾವುಗಳನ್ನು ವಿವರಿಸುತ್ತಿದ್ದರೆ ಸಭೆ ಸ್ತಂಭಿಭೂತವಾಗಿತ್ತು.

'ಜನಶಕ್ತಿ'ಯ ಗುರಿ, ಸ್ವರೂಪ ಮತ್ತು ಸರ್ಕುಲೇಷನ್ ಸಾಧ್ಯತೆಯನ್ನು ಕುರಿತು ವಿವರಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ಕಾಶಿನಾಥ ಅಂಬಲಗಿಯವರು, ಕೇವಲ ಐದು ರೂಪಾಯಿ ದರದಲ್ಲಿ ಹದಿನಾರು ವರ್ಣರಂಜಿತ ಪುಟಗಳ ಅದೂ ಶುದ್ಧ ಸುದ್ದಿಯಿಂದ ತುಂಬಿದ ಮೌಲ್ಯಯುತ ಪತ್ರಿಕೆಯನ್ನು ಮನೆ ಮನೆಗೂ ತಲುಪಿಸುತ್ತಿರುವುದು ಶ್ಲಾಘನೀಯ ಎಂದರು. ಪತ್ರಿಕೆಗಳು ಮಾಫಿಯಾ ಲೋಕವನ್ನು ಮೋಹಿಸುತ್ತಿರುವ ಈ ಹೊತ್ತಿನಲ್ಲಿ ಜನಶಕ್ತಿಯ ಬಳಗ ಕನ್ನಡ ಓದುಗರಿಗೆ ದೊಡ್ಡ ಆಶಾಕಿರಣವಾಗುವಂತಿದೆ. ಒಳ್ಳೆಯದನ್ನು ಕೊಟ್ಟರೆ ಖರೇ ಹೇಳಬೇಕೆಂದರೆ ಜನ ಪ್ರೀತಿಯಿಂದ ಓದುತ್ತಾರೆ. ಆದ್ದರಿಂದ ಜನಶಕ್ತಿಗೆ ಮಾತ್ರ ಲೋಕೋಪಯೋಗಿ ಆಯಾಮಗಳನ್ನು ನೀಡುವ ಸೈದ್ಧಾಂತಿಕ ಕಾಳಜಿ ಇದೆ. ಈ ಕಾಳಜಿ ಇನ್ನಷ್ಟು ವಿಸ್ತಾರ, ಆಳ ಮೌಲಿಕವಾಗುತ್ತಿರಲಿ ಎಂದು ಹಾರೈಸಿದರು. ಅಧ್ಯಕ್ಷತೆಯನ್ನು ಮಾರುತಿ ಮಾನ್ಪಡೆ ವಹಿಸಿದ್ದರು. ರೈತ ಸಂಘದ ಮುಖಂಡರಾದ ವಿರೂಪಾಕ್ಷಪ್ಪ ತಡಕಲ್ ಸ್ವಾಗತ ಕೋರಿದರು. ಜನವಾದಿ ಮಹಿಳಾ ಸಂಘದ ಮುಖಂಡರಾದ ಗಂಗಮ್ಮ ಬಿರಾದಾರ ವಂದನಾರ್ಪಣೆ ಮಾಡಿದರೆ,


ಪಿ.ಸಾಯಿನಾಥ್‌ರಿಂದ ಪತ್ರಿಕೆ ಬಿಡುಗಡೆ

ಪ್ರಜ್ಞಾ ಕಾನೂನು ಸಲಹಾ ಸಮಿತಿಯ ಡಾ: ಮೀನಾಕ್ಷಿ ಬಾಳಿ ಕಾರ್ಯಕ್ರಮ ನಿರೂಪಿಸಿದರು. ಸಿಪಿಐಎಂ ಮುಖಂಡ, ಪತ್ರಿಕೆಯ ಸಂಪಾದಕ ಮಂಡಳಿ ಸದಸ್ಯರಾದ ಬಯ್ಯಾರೆಡ್ಡಿ ವೇದಿಕೆ ಮೇಲೆ ಇದ್ದರು.

ಡಾ: ಮೀನಾಕ್ಷಿ ಬಾಳಿ



■ ನಕುಲ

ಸೀತಾರಾಂ ಜಾದೂ ಇಲ್ಲದ 'ಮೀರಾ ಮಾಧವ ರಾಘವ'

ಟಿ.ವಿ. ಲೋಕದ ಸ್ಟಾರ್ ನಿರ್ದೇಶಕ ಟಿ.ಎನ್.ಸೀತಾರಾಂ 'ಮತದಾನ'ದ ನಂತರ ತಮ್ಮ ನಿರ್ದೇಶನದ ಜಾದೂ ಚಿತ್ರರಂಗದಲ್ಲಿ ನಡೆಯುವುದೇನೋ ಎಂದು ಮತ್ತೊಮ್ಮೆ ಅದೃಷ್ಟದ ಪರೀಕ್ಷೆಗೆ ಕೈ ಹಾಕಿದ್ದಾರೆ. ಸಾಕಷ್ಟು ನಿರೀಕ್ಷೆಗಳೊಂದಿಗೇ 'ಮೀರಾ ಮಾಧವ ರಾಘವ' ತೆರೆಕಂಡಿದೆ. ಪುಟ್ಟಣ್ಣ ಕಣಗಾಲ್‌ರ ಸ್ಥಾನ ತುಂಬಬಲ್ಲ ನಿರ್ದೇಶಕ, ಪುಟ್ಟಣ್ಣನವರ ಅಪರವತಾರ ಸೀತಾರಾಂ ಎಂದೆಲ್ಲಾ ಅವರನ್ನು ಅಟ್ಟಕ್ಕೇರಿಸುವ ಸುದ್ದಿಗಳು ತೇಲಾಡುತ್ತಿರುವ ಸಂದರ್ಭದಲ್ಲೇ ಸೀತಾರಾಂ ಅವರಿಗೆ ಪಾತಾಳದ ರುಚಿ ತೋರಿಸುವಂತಿದೆ 'ಮೀರಾ ಮಾಧವ ರಾಘವ'.

ಮಧ್ಯಮವರ್ಗದ, ಸಾಮಾನ್ಯ ಜನರ ಬದುಕಿನ ಬವಣೆ, ವಾಸ್ತವಕ್ಕೆ ಹತ್ತಿರವಾದಂತಹ ಘಟನೆಗಳನ್ನು ಪೋಣಿಸಿ ಧಾರವಾಹಿಗಳಾಗಿ ಕಿರುತೆರೆಗೆ ತರುತ್ತಿದ್ದ ಸೀತಾರಾಂ ಅತ್ಯಂತ ಜನಪ್ರಿಯರಾಗಿ ಕಿರುತೆರೆಯಿಂದಲೇ ಸಾಕಷ್ಟು ಅಭಿಮಾನಿಗಳನ್ನು ಹೊಂದಿದ್ದ ನಿರ್ದೇಶಕ. ಕಿರುತೆರೆಗಾಗಿ ಕತೆಯ ಆಯ್ಕೆಯಲ್ಲಿ ತೋರಿದ ಜಾಣ್ಮೆಯನ್ನು ಚಲನಚಿತ್ರಕ್ಕೆ ತೋರುವಲ್ಲಿ ಅವರು ವಿಫಲರಾಗಿದ್ದಾರೆಂದೇ ಹೇಳಬೇಕು. ಅವರ ಧಾರಾವಾಹಿಗಳಂತೆ ನೋಡಿದ ನಂತರ ಮನಸನ್ನು ಕಲಕುವ, ಕಾಡುವ ಮಾತಿರಲಿ, ಜನಸಾಮಾನ್ಯರಿಗೆ ಹತ್ತಿರವಲ್ಲದ, ಸತ್ವವಿಲ್ಲದ ಕಥೆಯಾದ್ದರಿಂದ ಅವರ ಅಭಿಮಾನಿಗಳೂ ಚಿತ್ರದಿಂದ ದೂರ ಉಳಿಯುವ ಸಾಧ್ಯತೆಗಳೇ ಹೆಚ್ಚು!

ಸದಭಿರುಚಿಯ ಜೊತೆಗೆ ಒಂದು ಉತ್ತಮ ಸಂದೇಶ ಕೊಡುವ ಪ್ರಾಮಾಣಿಕ ಪ್ರಯತ್ನ ಚಿತ್ರದಲ್ಲಿ ಕಾಣುತ್ತದೆ. ಒಂದು ಸಣ್ಣ ಎಳೆಯ ಕಥೆಯನ್ನು ಎರಡೂವರೆ ಗಂಟೆ ಹಿಗ್ಗಿಸಲು ಹಲವು ಘಟನೆಗಳನ್ನು ಜೋಡಿಸಿದಂತೆ ಭಾಸವಾದರೂ ಕೊನೆಯಲ್ಲಿ ಅವುಗಳಿಗೆಲ್ಲಾ ಸಮಜಾಯಿಷಿ ನೀಡುವ ಪ್ರಯತ್ನ ಮಾಡುತ್ತಾರೆ ಸೀತಾರಾಂ.

ನಾಯಕಿ ಮೀರಾ ಮಧ್ಯಮ ವರ್ಗದ ಹುಡುಗಿ, ಸಂಗೀತ ಬಲ್ಲವಳು. ಎದುರು ಮನೆಯ ರೌಡಿಯೊಬ್ಬನ ಕಾಟ ಅವಳಿಗೆ, ಅವನೇ ರಾಘವ. ಅವನಿಂದ ಬಚಾವಾಗಲು ಮಾಧವನನ್ನು ಮದುವೆಯಾಗುತ್ತಾಳೆ. ಮಾಧವ ಕಾಲೇಜೊಂದರಲ್ಲಿ ಲೆಕ್ಚರರ್. ಅಂತಹ ಸ್ಥಿತಿವಂತನೇನಲ್ಲ. ಅವನಿಗೆ ಐಎಎಸ್ ಮಾಡಬೇಕೆಂಬ ಮಹದಾಸೆ. ಮೀರಾ ತನ್ನ ತಂದೆಯ ಮನೆಯ ತನ್ನ ಪಾಲು ಪಡೆದು ಗಂಡನ್ನು ಓದಿಸಲು ತೀರ್ಮಾನಿಸುತ್ತಾಳೆ. ಗಂಡನನ್ನು ಕೆಲಸ ಬಿಡಿಸಿ, ದೆಹಲಿಗೆ ಕಳುಹಿಸುತ್ತಾಳೆ. ಆದರೆ ಅವಳಿಗೆ ಮನೆಯ ಪಾಲು ಸಿಗದೆ ಹೋದಾಗ ಅನಿವಾರ್ಯವಾಗಿ 10 ಲಕ್ಷ ರೂ.ಗಳನ್ನು ಸಾಲ ಮಾಡುತ್ತಾಳೆ. ಅದೂ ತನ್ನ ಹಿಂದೆ ಬಿದ್ದಿದ್ದ ರೌಡಿ ರಾಘವನಿಂದ. ಅವಳಿಂದ ಮಾಧವನೇ ಹಣ ಪಡೆದದ್ದೆಂದು ಪತ್ರಕ್ಕೆ ಫೋರ್ಜರಿ ಸಹಿ ಮಾಡಿಸಿಕೊಂಡು ಹಣ ನೀಡುತ್ತಾನೆ ರಾಘವ.

ಎರಡು ತಿಂಗಳ ನಂತರ ಆತ ಆ ಹಣಕ್ಕೆ ಬಡ್ಡಿ ಕೇಳುತ್ತಾನೆ (ಬಿ.ಕಾಂ. ಪದವಿಧರೆಯಾದ ನಾಯಕಿ, ಬಡ್ಡಿ ದುಡ್ಡು ಕೇಳಿದಾಗ, ಇದೆಲ್ಲಾ ತನಗೆ ತಿಳಿದಿಲ್ಲ ಎಂದು ಅಮಾಯಕಳವಂತೆ ವರ್ತಿಸುವುದು ಅಸಹಜ ಕಥೆಯ ಪರಮಾವಧಿ - ಸಣ್ಣ ಸಣ್ಣ ವಿಷಯಗಳಿಗೆ ಗಮನ ಕೊಡುವ ಸೀತಾರಾಂ ಅವರು ಇಲ್ಲಿ ದಡ್ಡರಾದದ್ದು ವಿಪರ್ಯಾಸ!), ಅವಳಿಗೆ ಕೊಡಲಾಗದಿದ್ದಕ್ಕೆ ಅವಳಿಂದ ಕ್ಲಬ್‌ನಲ್ಲಿ ಹಾಡು ಹಾಡಿಸಿ, ಬಡ್ಡಿ ವಜಾ ಮಾಡಿಕೊಳ್ಳುತ್ತಾನೆ.

ಮೀರಾಳ ಗಂಡ ಮಾಧವ ಡಿ.ಸಿ. ಯಾಗಿ ಬರುತ್ತಾನೆ. ಪ್ರಾಮಾಣಿಕವಾಗಿ ಕೆಲಸ ಮಾಡುವ ನಿಟ್ಟಿನಲ್ಲಿ ರೌಡಿಗಳನ್ನು ಮಟ್ಟ ಹಾಕಲು ನಿರ್ಧರಿಸುತ್ತಾನೆ, ಆ ಲಿಸ್ಟ್‌ನಲ್ಲಿ ರೌಡಿ ರಾಘವನೇ ಪ್ರಮುಖ. ಆತನನ್ನು ಗಡಿಪಾರು ಮಾಡಲು ಆದೇಶಿಸುತ್ತಾನೆ.

ಈ ಸಮಯದಲ್ಲಿ ನಾಯಕಿ ಮೀರಾ ರೌಡಿ ರಾಘವನಿಂದ ಹಣ ಪಡೆದದ್ದು, ಅದಕ್ಕೆ ಬಡ್ಡಿ ಕಟ್ಟಬೇಕಾದ್ದನ್ನು ಮರೆತೇ ಬಿಟ್ಟಿರುತ್ತಾಳೆ! ರಾಘವನೇ ಅವಳಿಗೆ ನೆನಪಿಸಿ, ಒಂದು ದಿನದೊಳಗೆ ಬಡ್ಡಿ ಕೊಡಬೇಕು, ಇಲ್ಲವೇ ಗಡಿಪಾರು ಆದೇಶ ಹಿಂದೆ ಪಡೆಯುವಂತೆ ಮಾಡಬೇಕೆಂದು ಮೀರಾಳಿಗೆ ಒತ್ತಡ ಹೇರುತ್ತಾನೆ.

ಗಂಡನಿಗೆ ವಿಷಯ ಹೇಳಿದಾಗ ಸಿಟ್ಟಾಗುವ ರಾಘವ, ತನ್ನ ಘನತೆಯ ಪ್ರಶ್ನೆಯೆಂದು, ಅವನೊಂದಿಗೆ ಪ್ರೀತಿಯ ನಾಟಕವಾಡಿದರೂ ಸರಿ ಪತ್ರ



ವಾಪಸ್ ತರುವಂತೆ ಹೇಳುತ್ತಾನೆ.

ಪತ್ರವನ್ನು ಹಿಂಪಡೆಯಲು ಬರುವ ಮೀರಾ, ರಾಘವ ಅದನ್ನು ಕೊಡದೇ ಇದ್ದಾಗ ಆತನನ್ನು ಪಿಸ್ತೂಲಿನಿಂದ ಶೂಟ್ ಮಾಡುತ್ತಾಳೆ. ಅವನು ಸತ್ತನೆಂದು ಭಾವಿಸಿ ಹೆದರಿ, ಮನೆಗೆ ವಾಪಸ್ಸು ಬರುತ್ತಾಳೆ.

ಗಂಡನಿಗೆ ರೌಡಿಯನ್ನು ಕೊಂದೆನೆಂದು ಹೇಳುತ್ತಾಳೆ, ಮತ್ತೂ ಕೆರಳುವ ಮಾಧವ ಆಕೆಯನ್ನು ರಕ್ಷಿಸಲು ಸಾಧ್ಯವೇ ಇಲ್ಲವೆನ್ನುತ್ತಾನೆ. ಶರಣಾಗು, ವಕೀಲರನ್ನಿಟ್ಟು ಜೈಲಿನಿಂದ ಬಿಡಿಸುವುದಾಗಿಯೂ, ನಂತರ ಕೊಲಗಡುಕಿಯ ಗಂಡನಾಗಿರುವುದು ಸಾಧ್ಯವಿಲ್ಲವಾದ್ದರಿಂದ ಡೈವೋರ್ಸ್ ಆಗೋ[...] ಬೇಕಾದರೆ ಜೀವನಾಂಶ ಕೊಡುತ್ತೇನೆನ್ನುತ್ತಾ[...] ಅವನಿಗಾಗಿ, ಅವನು ಐಎಎಸ್ ಆಗುವ ಸಲು[...] ಸಾಕಷ್ಟು ಸಂಕಷ್ಟಗಳನ್ನೆದುರಿಸುವ ಮೀರಾ ಅ[...] ಮಾತು ಕೇಳಿ ದಂಗಾಗುತ್ತಾಳೆ.

ಇತ್ತ ರೌಡಿ ರಾಘವ ಬದುಕುಳಿಯುತ್ತಾನೆ. ಮೀ[...] ಅವನ್ನು ನೋಡಲು ಬರುತ್ತಾಳೆ, ಆಗ ಆತ ತನ್ನ [...] ಕ್ಷಮೆ ಕೇಳಿ, ಒಳ್ಳೆಯವರಾದ ನಿಮ್ಮನ್ನು ಮ[...] ಕಾಡುವುದಿಲ್ಲ, ಗಂಡನೊಂದಿಗೆ ಸುಖವಾಗಿರಿ ಎ[...] ಹೇಳಿ ಪತ್ರ ಕೊಟ್ಟುಕಳುಹಿಸುತ್ತಾನೆ. ಮ[...] ಹಿಂದಿರುಗುವ ಮೀರಾ ಪತ್ರವನ್ನು ಮಾಧವ[...] ನೀಡುತ್ತಾಳೆ. ಮಾಧವ ಸಂತೋಷಗೊಂಡು, ಮರೆತು ಮುಂದೆ ಸಂತೋಷ[...] ಬಾಳೋಣವೆನ್ನುತ್ತಾನೆ. ಆದರೆ ಮೀರಾ 'ನನ್ನ ಕಣ್ಣ[...] ರೌಡಿ ರಾಘವನೇ ಮರುಗಿದ, ಆದರೆ ನ[...] ಸಂಕಷ್ಟದಲ್ಲಿದ್ದಾಗ ನನ್ನ ಕೈ ಹಿಡಿಯದೆ, ನಿನ್ನ ಘನತೆ[...] ಹೆಚ್ಚೆಂದು ಭಾವಿಸಿದ, ನಾನು ಪಟ್ಟಪಾಡನ್ನು ಗೌರ[...] ನಿನ್ನೊಂದಿಗೆ ಬಾಳಲು ಸಾಧ್ಯವಿಲ್ಲ' ಎ[...] ಮಾಧವನನ್ನು ಧಿಕ್ಕರಿಸಿ, ತನ್ನ ದುಡಿಮೆ[...] ಮೇಲೆ ಸ್ವಾಭಿಮಾನಿಯಾಗಿ ಬದುಕ[...] ನಿರ್ಧರಿಸುತ್ತಾಳೆ.

ಚಿತ್ರದ ಸತ್ವವಿರುವುದು ಕೊನೆಯ [...] ನಿಮಿಷ ಮಾತ್ರವೇ. ಸ್ತ್ರೀ ಸ್ವಾತಂ[...] ಸ್ವಾಭಿಮಾನದ ಬದುಕಿನ ಬಗ್ಗೆ ಹೇಳ ಹೊ[...] ನಿರ್ದೇಶಕರು ಜಾಳು ನಿರೂಪಣೆಯಿ[...] ಬೋರು ಹೊಡೆಸುತ್ತಾರೆ. ಬಡಕುಟುಂ[...] ಪತ್ನಿಯೊಬ್ಬಳು ಹೆಚ್ಚಿನ ಆದಾಯ[...] ಮೂಲಗಳಿಲ್ಲದಿದ್ದರೂ ಗಂಡನ ಓದಿ[...] ಲಕ್ಷಾಂತರ ರೂಪಾಯಿ ಸಾಲ ಮಾಡು[...] ಹಾಸ್ಯಾಸ್ಪದವಾಗಿ ಕಾಣುತ್[...] ಪ್ರೀತಿಸಲೊಪ್ಪದ, ಮದುವೆಯಾಗಲೊ[...] ಯುವತಿಯರ ಮೇಲೆ ರೌಡಿಗಳು ಅಮಾ[...] ದಾಳಿ ನಡೆಸುತ್ತಿರುವ ಸುದ್ದಿಗಳು ಪ್ರತಿ[...] ಪತ್ರಿಕೆಗಳಲ್ಲಿ ಬರುತ್ತಿರುವಾಗ ಸೀತಾರಾಂ ಅಂ[...] ರೌಡಿಗಳಿಗೆ ಒಳ್ಳೆಯ ಇಮೇಜ್ ಕೊಡ[...] ಹೊರಟಿದ್ದಾರೆ. ಅಂತಿಮವಾಗಿ ಸುಸಂಸ್[...] ವಿದ್ಯಾವಂತ ಯುವಕನೇ ಖಳನಾಯಕನಾ[...] ರೌಡಿಯೇ ಹೆಣ್ಣಿನ ಕಣ್ಣೀರಿಗೆ ಮಿಡಿಯುವ ಸಹೃದ[...] ನಾಯಕನಾಗಿ ಹೊರಹೊಮ್ಮುವ ಚಮತ್ಕಾ[...] ಸೀತಾರಾಂ ಕಲ್ಪನೆಯಲ್ಲಿ ಮಾತ್ರ ಸಾಧ್ಯವೇನೋ[...] ವಾಸ್ತವದಲ್ಲಿ ಈಗ ಎಂತಹ ಪರಿಸ್ಥಿತಿ ಇದೆಯೆಂಬು[...] ಎಲ್ಲರೂ ಬಲ್ಲರು.

ಹ್ಯಾರಿಪಾಟ್ಟರ್ ಯಾಕಿಷ್ಟು ಜನಪ್ರಿಯ ?

ಹ್ಯಾರಿ ಪಾಟ್ಟರ್ ಏಳನೇ ಪುಸ್ತಕದಲ್ಲಿ ಸಾಯುತ್ತಾನಾ? ಸತ್ತರೆ ಮುಂದೇನು? - ಈ ಪ್ರಶ್ನೆ ಕಳೆದ ಹಲವು ತಿಂಗಳುಗಳಿಂದ ಜಗತ್ತಿನ ಕೋಟ್ಯಾಂತರ ಮಕ್ಕಳನ್ನು (ಹಲವು ವಯಸ್ಕರನ್ನೂ ಸೇರಿದಂತೆ) ಕಾಡಿದ ಪ್ರಶ್ನೆ. ಬೇರೆ ಯಾವುದೇ ಒಂದು ಪ್ರಶ್ನೆ ಬಹುಶಃ ಇಷ್ಟು ಜನರನ್ನು ಒಟ್ಟಿಗೆ ನಿದ್ರೆಗೆಡಿಸಿರಲಿಕ್ಕಿಲ್ಲ. ಇಂಗ್ಲೀಷ್ ಮಕ್ಕಳ ಸರಣಿ ಪುಸ್ತಕಗಳ ನಾಯಕ ಪಾತ್ರವಾದ 'ಹ್ಯಾರಿ ಪಾಟ್ಟರ್'ನ ನೋವು-ನಲಿವು ಕಳೆದ ಏಳು ವರ್ಷಗಳಿಂದ ಇಂಗ್ಲೀಷ್ ಓದುವ ದೇಶಗಳಲ್ಲಿ ಮಾತ್ರವಲ್ಲ, ಇದು ಭಾಷಾಂತರವಾದ 68 ಭಾಷೆ ಓದುವ ದೇಶಗಳಲ್ಲೂ ಮನೆಮಾತಾಗಿತ್ತು. 'ಹ್ಯಾರಿ ಪಾಟ್ಟರ್' ಸರಣಿ ಪುಸ್ತಕಗಳ ಮಾರಾಟ (ಅವುಗಳ 5 ಫಿಲಂ ರೂಪ ಸೇರಿದಂತೆ) ಸಾರ್ವಕಾಲಿಕ ವಿಕ್ರಮ ಸಾಧಿಸಿದೆ. ಕಳೆದ ವಾರ ಬಿಡುಗಡೆಯಾದ ಈ ಸರಣಿಯ ಏಳನೇ ಪುಸ್ತಕದ 1.1 ಕೋಟಿ ಪ್ರತಿಗಳು ಮೊದಲ 24 ಗಂಟೆಗಳಲ್ಲೇ ಮಾರಾಟವಾಗಿ ವಿಕ್ರಮ ಸಾಧಿಸಿತು. ಇಲ್ಲಿಯವರೆಗೆ ಮೊದಲ ಆರು ಪುಸ್ತಕಗಳ 32.5 ಕೋಟಿ ಪ್ರತಿಗಳು ಮಾರಾಟವಾಗಿವೆಯಂತೆ. ಟಿವಿ-ವಿಡಿಯೋ ಗೇಮ್ಸ್ ಭರಾಟೆಯಲ್ಲಿ ಪುಸ್ತಕ ಓದುವ ಸಂಸ್ಕೃತಿ ಸಶಿಸಿ (ಮಕ್ಕಳಲ್ಲಿ ಮಾತ್ರವಲ್ಲ ದೊಡ್ಡವರಲ್ಲೂ) ಹೋಗುತ್ತಿರುವ ಈಗಿನ ಸನ್ನಿವೇಶದಲ್ಲಿ, 'ಹ್ಯಾರಿ ಪಾಟ್ಟರ್'ನ ಈ ಅಗಾಧ ಜನಪ್ರಿಯತೆ ಒಂದು ಮಹತ್ವದ ಸಾಂಸ್ಕೃತಿಕ ಘಟನೆ ಎನ್ನಬೇಕು. ಒಟ್ಟಾರೆಯಾಗಿ ಇದೊಂದು ಸಕಾರಾತ್ಮಕ ಬೆಳವಣಿಗೆ ಎನ್ನಬೇಕು. 'ಹ್ಯಾರಿ ಪಾಟ್ಟರ್' ಸರಣಿಯ ಈ ಚಾರಿತ್ರಿಕ ಜನಪ್ರಿಯತೆಯ ಹಿಂದಿರುವ ಕಾರಣಗಳ ಬಗ್ಗೆ ಅಧ್ಯಯನ ಮತ್ತು ವಿಶ್ಲೇಷಣೆ ಅಗತ್ಯ. ಕಾರಣಗಳು ಗೊತ್ತಾದರೆ ಪುಸ್ತಕ ಸಂಸ್ಕೃತಿಯನ್ನು ಗಟ್ಟಿಗೊಳಿಸುವ ಬಗ್ಗೆ ಸುಳಿವು ಸಿಕ್ಕೀತೇನೊ?

'ಹ್ಯಾರಿ ಪಾಟ್ಟರ್'ನ ಜನಪ್ರಿಯತೆಯನ್ನು ಸರಳ ಕಾರಣಗಳನ್ನು ಕೊಟ್ಟು 'ವಿವರಿಸುವರು' ಮತ್ತು 'ತಳ್ಳಿ ಹಾಕುವವರು' ಇದ್ದಾರೆ. ಇದು ಪುಸ್ತಕ ಪ್ರಕಾಶನ 'ಕೈಗಾರಿಕೆ' - ಆಧುನಿಕ ಬಂಡವಾಳಶಾಹಿ 'ಪರಿಪೂರ್ಣಗೊಳಿಸಿರುವ' 'ಹೈ-ವೋಲ್ಟೇಜ್' ಮಾರುಕಟ್ಟೆ ತಂತ್ರವನ್ನು - ಅತ್ಯಂತ ಸಮರ್ಥವಾಗಿ ಅಳವಡಿಸಿದ ಪ್ರಕರಣ ಅಷ್ಟೇ, ಅದಕ್ಕಿಂತ ಹೆಚ್ಚಿನದೇನೂ ಇದರಲ್ಲಿ ನೋಡಬೇಕಾಗಿಲ್ಲ ಎನ್ನುತ್ತಾರೆ ಇವರು. ಮಾರುಕಟ್ಟೆ ತಂತ್ರ ಮಹತ್ವದ ಪಾತ್ರ ವಹಿಸಿದೆ ಎಂದು ಒಪ್ಪಿಕೊಂಡರೂ, ಯಾವುದೇ ಮಾರುಕಟ್ಟೆ ತಂತ್ರ ಏಳು ವರ್ಷಗಳ ಕಾಲ ವಿವಿಧ ಹಿನ್ನೆಲೆಯ ಕೋಟ್ಯಾಂತರ ಮಕ್ಕಳನ್ನು ಸರಾಸರಿ 700 ಪುಟಗಳ ಪುಸ್ತಕವನ್ನು ಉಸಿರು ಕಟ್ಟಿಸುವ ವೇಗದಲ್ಲಿ ಓದಿಸಬಲ್ಲದು ಎಂಬುದಕ್ಕೆ ಪೂರ್ಣ ವಿವರಣೆ ಕೊಡುವುದಿಲ್ಲ. ಕೆಲವು ಅಧ್ಯಯನಗಳು 'ಹ್ಯಾರಿ ಪಾಟ್ಟರ್' ಮಕ್ಕಳಲ್ಲಿ ಪುಸ್ತಕ ಓದುವ ಸಂಸ್ಕೃತಿ ಮನಃ ಬಿತ್ತಿದೆ ಎಂಬುದು ನಿಜವಲ್ಲ ಎಂದಿವೆ. ಈ ಅಧ್ಯಯನಗಳ ಪ್ರಕಾರ ಮಕ್ಕಳು 'ಹ್ಯಾರಿ ಪಾಟ್ಟರ್' ಬಿಟ್ಟರೆ ಬೇರೆ ಪುಸ್ತಕ ಓದುವುದಿಲ್ಲ ಎಂದಿವೆ. ಇವೆಲ್ಲಾ ಈ ಅಗಾಧ ಜನಪ್ರಿಯತೆ ಒಂದು ಮಹತ್ವದ ವಿಶಿಷ್ಟ ಬೆಳವಣಿಗೆ ಎಂಬುದನ್ನು ಇನ್ನಷ್ಟು ದೃಢಪಡಿಸುತ್ತವೆ.



ಸ್ಥೂಲ ವಿಶ್ಲೇಷಣೆಯಿಂದ ಕೆಲವು ಪ್ರಮುಖ ಕಾರಣಗಳನ್ನಂತೂ ಕಾಣಬಹುದು. 'ಹ್ಯಾರಿ ಪಾಟ್ಟರ್' ಬರಿಯ ಮಕ್ಕಳ ಕುತೂಹಲ ಕೆರಳಿಸುವ ಯಕ್ಷಿಣಿ ಕಥೆ ಪುಸ್ತಕ ಮಾತ್ರ ಆಗಿರಲಿಲ್ಲ. ಅದು ಫ್ಯಾಂಟಸಿ, ಸಾಮಾಜಿಕ ಅಣಕ, ಸಾಹಿತ್ಯಿಕ ಅಣಕ, ಸಾಹಸಗಾಥೆ, ರಹಸ್ಯಶೋಧ, ಮನೋವೈಜ್ಞಾನಿಕ - ಮುಂತಾದ ಹಲವು ಸಾಹಿತ್ಯಿಕ ಪ್ರಕಾರಗಳ ಗಡಿ ದಾಟಿತ್ತು. ಆ ಪ್ರತಿಯೊಂದು ಸಾಹಿತ್ಯಿಕ ಪ್ರಕಾರಗಳಲ್ಲಿ ಅತ್ಯಂತ ಉತ್ಕೃಷ್ಟ ಮಟ್ಟದ ಬರವಣಿಗೆಯೂ ಆಗಿತ್ತು. ಈ ಎಲ್ಲಾ ಪ್ರಕಾರಗಳು ಇಂದಿನ ಅತ್ಯಂತ ಜನಪ್ರಿಯ ಪ್ರಕಾರಗಳು ಎಂದು ಗಮನಿಸಬೇಕು. ಈ ಎಲ್ಲ ಪ್ರಕಾರಗಳನ್ನು ಒಂದೇ ಪುಸ್ತಕ ಸರಣಿಯಲ್ಲಿ ಅತ್ಯಂತ ಉತ್ಕೃಷ್ಟ ರೀತಿಯಲ್ಲಿ ಹಿಡಿದಿಟ್ಟದ್ದು ಈ ಅಗಾಧ ಜನಪ್ರಿಯತೆಯ ಹಿಂದಿನ ಪ್ರಧಾನ ಕಾರಣ ಎನ್ನಬಹುದು. ಏನು ಬೇಕಾದರೂ ಮಾಡಲು ಅನುವು ಮಾಡುವ ಮಾಂತ್ರಿಕ ಶಕ್ತಿ, ಕಾಲ್ಪನಿಕ ಬದಲಿ ಜೀವನ ಎಲ್ಲಾ ಕಾಲದಲ್ಲೂ ಜನಪ್ರಿಯವೇ. ಬೇರೆ ಬೇರೆ ಕಾಲ-ದೇಶಗಳ, ಸಂಸ್ಕೃತಿಗಳಲ್ಲಿ ಜನಪ್ರಿಯವಾಗಿದ್ದ ಫ್ಯಾಂಟಸಿ ಪಾತ್ರ, ಸನ್ನಿವೇಶ (ಉದಾ: ಫೀನಿಕ್ಸ್, ಕನ್ನಡಿಯೊಳಗೆ ಭೂತ ಕಾಲದ ವ್ಯಕ್ತಿಯೊಂದು ಕೆಲವರ ಜತೆ ಮಾತ್ರ ಮಾತನಾಡುವುದು)ಗಳನ್ನು ಒಂದೇ ಕಾಲ-ಸ್ಥಳದಲ್ಲಿ ಹಿಡಿದಿಟ್ಟದ್ದು 'ಹ್ಯಾರಿ ಪಾಟ್ಟರ್'ನ ಇನ್ನೊಂದು ವಿಶಿಷ್ಟತೆ. ಇದು ಪ್ರತಿಯೊಬ್ಬರಿಗೆ ಇಷ್ಟವಾದ ಫ್ಯಾಂಟಸಿ, ಕಾಲ್ಪನಿಕತೆಗೆ ಕಚಗುಳಿ ಇಟ್ಟಿತ್ತು. ಗೊತ್ತಿಲ್ಲದ ಹೊಸ ಫ್ಯಾಂಟಸಿ, ಕಾಲ್ಪನಿಕತೆಗೆ ಬಾಗಿಲು ತೆರೆದಿತ್ತು. ಅದೂ ಇವೆಲ್ಲಾ ಓದುಗರಿಗೆ ಗೊತ್ತಿರುವ ಈಗಿನ ದೇಶ-ಕಾಲದಲ್ಲೇ ನಡೆಯುವುದು. ಅದರೂ ತೀರಾ ಹೊಸತು ಅನ್ನಿಸುವುದು. ಇದು 'ಹ್ಯಾರಿ ಪಾಟ್ಟರ್' ಮಾಂತ್ರಿಕ ಶಕ್ತಿಯ ಗುಟ್ಟುಗಳಲ್ಲೊಂದು.

ಕೊನೆಯದಾಗಿ ಇವೆಲ್ಲದರ ಜತೆ ಅದರ ಸಾಮಾಜಿಕ ಪ್ರಸ್ತುತತೆ ವಿಶೇಷ ಮೆರುಗು ನೀಡಿದೆ. ಅನ್ಯಾಯ-ಕಿರುಕುಳಕ್ಕೆ ಒಳಗಾಗುವ ಹ್ಯಾರಿ ಪಾಟ್ಟರ್, ಆತ ಈ ಎಲ್ಲಾ ಸಮಸ್ಯೆಗಳನ್ನು ಮೆಟ್ಟಿ ನಿಲ್ಲುವ ಬಗೆ, ಆತನ ಈ ಸಾಹಸಗಾಥೆಯಲ್ಲಿ ಅವನ ಜತೆ ನಿಲ್ಲುವವರು, ಆತನ ಸಾಮಾಜಿಕ ಸಂಬಂಧಗಳಲ್ಲಿ ಬರುವ ವೈವಿಧ್ಯಮಯ ಪಾತ್ರಗಳು ನಮ್ಮ ಪ್ರಸ್ತುತ ಸಮಾಜಕ್ಕೆ ಹಿಡಿದ ಕನ್ನಡಿ. ಅದರ ಸಶಕ್ತ ವಿಮ[...] ಸಹ - ಹಲವು ಕಡೆ. ನಮ್ಮ ಕಾಲದ, ನಾವೆಲ್ಲ[...] ವೈಯಕ್ತಿಕ ಮತ್ತು ಸಾಮಾಜಿಕ ನೆಲೆಯ[...] ಎದುರಿಸುತ್ತಿರುವ ಹಲವು ನೈತಿಕ, ಸಾಂಸ್ಕೃ[...] ಸವಾಲುಗಳು, ತಳಮಳಗಳೂ, ಅದನ್ನು ಎದುರಿಸ[...] ಬಗೆ - ಜೆ.ಕೆ. ರಾಲಿಂಗ್ ಸೃಷ್ಟಿಸಿದ ಕಾಲ್ಪ[...] ಲೋಕದಲ್ಲೂ ಕಾಡುತ್ತವೆ. ರಾಲಿಂಗ್ ಸೃಷ್ಟಿ[...] ಕಾಲ್ಪನಿಕ ಲೋಕ ನಮ್ಮನ್ನು ತಾತ್ಕಾಲಿಕವಾಗಿ ನ[...] ದೈನಂದಿನ ಜಂಜಾಟದ ಲೋಕದಿಂದ ಬಿಡುಗ[...] ಮಾಡುವ, ಅದೇ ಸಮಯದಲ್ಲಿ ನಮ್ಮ ಕಾಲ[...] ಸ್ಪಂದಿಸುವ ಮಹಾಗಾಥೆ.

ಇದು ಹ್ಯಾರಿ ಪಾಟ್ಟರ್‌ನ ಅಗಾ[...] ಜನಪ್ರಿಯತೆಯ ಸ್ಥೂಲ ಕಾರಣಗಳು. ಆದರೆ [...] ವಿಶಿಷ್ಟ ಸಾಂಸ್ಕೃತಿಕ ಘಟನೆ ಸುತ್ತ ಎಲ್ಲವೂ ಸಕಾರಾತ್[...] ಎಂದುಕೊಳ್ಳಬೇಕಾಗಿಲ್ಲ. ಹ್ಯಾರಿ ಪಾಟ್ಟರ್[...] ಕೋಟ್ಯಾಂತರ 'ಫ್ಯಾನ್'ಗಳ ಮುಂದಿರುವ ಯಕ್ಷ ಪ್ರ[...] - ಹ್ಯಾರಿ ಸತ್ತಿಲ್ಲ, ಆದರೆ ಅವನು ವಾಪಸ[...] ಬರುವುದಿಲ್ಲ. ಹ್ಯಾರಿ ಇಲ್ಲದ ಜಗದಲ್ಲಿ ನಾ[...] ಬದುಕುವುದು ಹೇಗೆ? ಇದೇ ತರಹದ ಪ್ರಶ್ನೆಗ[...] 'ಹ್ಯಾರಿ ಪಾಟ್ಟರ್' ಎಂಬ ಸಾಂಸ್ಕೃತಿಕ ಘಟನೆ[...] 'ಫ್ಯಾನ್'ಗಳ ಮುಂದೆಯೂ ಇವೆ - ಹ್ಯಾರಿ ಪಾಟ್ಟರ[...] ನಂತರವೂ ಆರೋಗ್ಯಕರ ಮೌಲ್ಯಗಳನ್ನು ಬಿತ್ತು[...] ಪುಸ್ತಕ ಓದುವ ಸಂಸ್ಕೃತಿ ಮುಂದುವರಿಸುವುದ[...] ಹೇಗೆ? ರಾಲಿಂಗ್ ಇನ್ನೊಂದು ಮೇರು ಕೃ[...] ಯಾವಾಗ ಕೊಡುತ್ತಾರೆ ಎಂದು ಬಾಯಿ ಬಿಟ್ಟುಕೊಂಡ[...] ಕಾಯುವುದೇ? ಹ್ಯಾರಿ ಪಾಟ್ಟರ್‌ನ್ನು ಖಂಡಿತವಾ[...] ಕಮರ್ಶಿಯಲ್ ಆಗಿ (ಫಿಲಂ, ಥೀಮ್, ಪಾರ್ಕ್[...] ಇತ್ಯಾದಿಯಾಗಿ) ಪೂರ್ತಿಯಾಗಿ ಹಿಂಡಿ ಹಿ[...] ಮಾಡುವುದನ್ನು ಕೈ ಕಟ್ಟಿಕೊಂಡ[...] ನೋಡಿಕೊಂಡಿರುವುದೇ? ಅದರ ಅನಾರೋಗ್ಯಕ[...] ಕಮರ್ಶಿಯಲ್ ಹಿಡಿತ ಇತರ ಇಂತಹ ಪುಸ್ತಕ ಸದ್ಯ[...] ಬರದಂತೆ ಮಾಡುವ ಅಪಾಯ ತಡೆಯುವುದು ಹೇ[...]

ಹ್ಯಾರಿ ಪಾಟ್ಟರ್! ನಿನ್ನ ಮಾಂತ್ರಿಕ ಶಕ್ತಿಯಿಂ[...] ಇದಕ್ಕೂ ಏನಾದರೂ ಮಾಡು ಮಾರಾಯ !

- ಶರತ್‌ಚಂದ್ರ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE 560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE 560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor: S.Y.GURUSHANTH